Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–17 ಏಪ್ರಿಲ್ 24–30, 2023 ಪುಟ 16 ರೂ. 10/–

Volume-17 Issue-17 April 24-30, 2023 Pages:16 Price: 10/-



ಗುಜರಾತ್ ಮಾದರಿ ಕಾರ್ಯತಂತ್ರ ಬಿಜೆಪಿಗೆ ತಿರುಗುಬಾಣವಾಯಿತೆ?



ಕರ್ನಾಟಕ ಚುನಾವಣೆ: ರಾಜ್ಯದ ಜನತೆಯ ಆಯ್ಕೆ ಯಾವುದು?



ಕಾರ್ಮಿಕ ವರ್ಗಕ್ಕೆ ಅರ್ಪಿಸಿಕೊಂಡ ಶ್ರೇಷ್ಠ ನ್ಯಾಯವಾದಿ **ಕಾಂ. ಕೆ.ಸುಬ್ಬರಾವ್** ಇನ್ನಿಲ್ಲ

ಪ್ರತಿಪಕ್ಷಗಳ ಒಗ್ಗಟ್ಟಿಗೆ ಬಲ ಸ್ಪಷ್ಟ ಗುರಿ, ಸ್ಪಷ್ಟ ಪರ್ಯಾಯ: ಕಾಲದ ತುರ್ತು ಅಗತ್ಯ

‘ಪುಲ್ವಾಮಾ ಭಯೋತ್ಪಾದನಾ ದಾಳಿಗೆ ಮೋದಿ ಸರ್ಕಾರವೇ ಹೊಣೆ’

ಗಾಂಧಿ ಹತ್ಯೆಯ ಪ್ರಕರಣದಲ್ಲಿ ಸಾವರ್ಕರ್ ಮೇಲಿನ ಆರೋಪಗಳು ಸಾಬೀತಾಗಲೇ ಇಲ್ಲವೇ?

‘ವೀರ’ ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ ‘ಸಾವರ್ಕರ್ ಅನ್‌ಮಾಸ್ಕ್ಡ್’ ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.



ಭಾಗ–26

ಡಾ.ಶಮ್ಸುಲ್‌ಇಸ್ಲಾಂ
ಅನು:ಟಿ.ಸುರೇಂದ್ರರಾವ್

ಇದುವರೆಗೆ ಐದು ಮಿಥ್ಯೆಗಳ ವಿಶ್ಲೇಷಣೆಗಳನ್ನು ಓದಿರುವಿರಿ
ಮಿಥ್ಯೆ 1: ‘ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ’!?
ಮಿಥ್ಯೆ 2: ಸಾವರ್ಕರ್ ತಮ್ಮ ಬದುಕಿನ ಬಹುಭಾಗವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಕಳೆದರು!?
ಮಿಥ್ಯೆ 3–ಸಾವರ್ಕರ್ ಅವರ ಕ್ಷಮಾಯಾಚನೆಯ ಅರ್ಜಿಗಳು ಸ್ವಾತಂತ್ರ್ಯ ಗಳಿಕೆಗೆ ಒಂದು ತಂತ್ರವಷ್ಟೆ!?
ಮಿಥ್ಯೆ 4: ಮುಸ್ಲಿಂ ಲೀಗಿನ ವಿರುದ್ಧ ಸಾವರ್ಕರ್ ಬಂಡೆಯಂತೆ ನಿಂತಿದ್ದರು!?
ಮಿಥ್ಯೆ 5–ಸಾವರ್ಕರ್ ಒಬ್ಬ ವಿಚಾರವಾದಿ, ಅಸ್ಪೃಶ್ಯತೆಯ ವಿರುದ್ಧ ಹೋರಾಡಿದರು!?
ಈಗ ಮಿಥ್ಯೆ 6ನ್ನು ನೋಡಿ:

ಇತರ ಹಲವಾರು ಜನರಂತೆ ಸಾವರ್ಕರ್ ಗಾಂಧಿಯೊಡನೆಭಿನ್ನಾಭಿಪ್ರಾಯ ಹೊಂದಿದ್ದರು ಮತ್ತು ಗಾಂಧಿ ಕೊಲೆಯಾದ ನಂತರ ಅವರನ್ನು ಸಂಶಯಾಸ್ಪದ ವ್ಯಕ್ತಿ ಎಂದು ನೋಡಲಾಯಿತು. ನ್ಯಾಯಾಲಯ ಅವರನ್ನು ಖುಲಾಸೆಗೊಳಿಸಿತು. ಆದರೂ ಕಳಂಕ ಮುಂದುವರಿಯುತ್ತಿದೆ ಎಂದು ಸಾವರ್ಕರ್‌ವಾದಿಗಳು ಅನೇಕ ವೇಳೆ ವಾದಿಸುತ್ತಾರೆ.

‘(ನ್ಯಾಯಾಲಯ) ಖಚಿತವಾದ ತೀರ್ಪು ನೀಡಿದ ನಂತರವೂ ಅದನ್ನು ಮತ್ತೆ–ಮತ್ತೆ ಕೆದಕುವ ಜನರಿದ್ದಾರೆ’ ಎಂದು ಹಿಂದುತ್ವ ಪಾಳೆಯ ದೂರುತ್ತಲೇ ಇದೆ.

ವಾಸ್ತವಾಂಶಗಳು

ಗಾಂಧಿಯ ಹತ್ಯೆಯಲ್ಲಿ ಸಾವರ್ಕರ್ ಪಾತ್ರವಿತು ಎಂದು ಅವರ ಮೇಲೆ ಕಾನೂನು ಕ್ರಮ ಜರುಗಿಸಲಾಗಿಲ್ಲ ಎಂಬುದು ನಿಜ. ಆದರೆ ಈ ಪ್ರಕರಣದಲ್ಲಿ ಒಳಸಂಚಿನ ಆಯಾಮಗಳು ಇದ್ದು, ಅವು ಇವತ್ತಿಗೂ ಕೂಡ ಸರಿಯಾದ ವಿವರಣೆ ಸಿಕ್ಕಿಲ್ಲ. ಪ್ರಖ್ಯಾತ ನ್ಯಾಯವಾದಿ ಹಾಗೂ ಅಂಕಣಕಾರ ಅನಿಲ್ ನೌರಿಯಾ ಅವರು ಗಾಂಧಿಯ ಹತ್ಯೆ ಪ್ರಕರಣದಲ್ಲಿ ಸಾವರ್ಕರ್ ಅವರು ನಿರ್ದೋಷಿ ಎನ್ನುವ ವಿಷಯದ ಬಗ್ಗೆ ಹೀಗೆ ಹೇಳುತ್ತಾರೆ:

“ಹತ್ಯೆಯ ವಿಚಾರಣೆಯಲ್ಲಿ ಅವರು ನಿರ್ದೋಷಿ ಎನ್ನುವ ವಿಷಯಕ್ಕೆ ಸಂಬಂಧಪಟ್ಟಂತೆ, ಮಹಾತ್ಮಾ ಗಾಂಧಿ ಹತ್ಯೆಯಲ್ಲಿ ಸಿಕ್ಕಿಬಿದ್ದಿರುವ ಗೋಜಲಿನಿಂದ ವಿ.ಡಿ. ಸಾವರ್ಕರ್ ಅವರನ್ನು ದೋಷಮುಕ್ತನನ್ನಾಗಿಸುವ ಪ್ರಯತ್ನದಲ್ಲಿರುವವರು ಕಾಯಿದೆ ಹಾಗೂ ರಾಜಕೀಯ ಹೊಣೆಗಾರಿಕೆಯ ನಡುವಿನ ವ್ಯತ್ಯಾಸ ತಿಳಿಯುವಲ್ಲಿ ವಿಫಲರಾಗುತ್ತಿದ್ದಾರೆ. ಅಲ್ಲದೆ, ಕಾಯಿದೆ ಹೊಣೆಗಾರಿಕೆಗೆ ಸಂಬಂಧಪಟ್ಟಂತೆ ಅಪ್ರೂವರ್ (ತಪ್ಪೊಪ್ಪಿಕೊಂಡ ಸಾಕ್ಷಿ) ಆಗಿರುವ ದಿಗಂಬರ್ ಬಡ್ಗೆಯವರ ಸಾಕ್ಷ್ಯ ಸಾವರ್ಕರ್‌ರನ್ನು ಸ್ಪಷ್ಟವಾಗಿ ದೋಷಿಯೆಂದು ಸೂಚಿಸಿದ್ದರೂ ಕೂಡ, ‘ಸಾಕ್ಷ್ಯ ಇಲ್ಲ’ ಎಂಬ ಕಾರಣದಿಂದಲ್ಲ, ಅವರ ಸಾಕ್ಷ್ಯಕ್ಕೆ ದೃಢೀಕರಣದ ಅಗತ್ಯವಿತ್ತು ಎಂಬ ಕಾರಣದಿಂದಾಗಿಯಷ್ಟೆ ಸಾವರ್ಕರ್ ಅವರನ್ನು ಬಿಟ್ಟುಬಿಡಲಾಯಿತು.”


ಇಲ್ಲಿ, 1945 ರ ಅಲ್ಲಾ ಬಕ್ಷ್ ಹತ್ಯೆಯ ಪ್ರಕರಣದಲ್ಲಿ ಒಬ್ಬ ಮುಸ್ಲಿಂ ಲೀಗಿನ ಪರ ಇದ್ದವನೊಬ್ಬನ ಬಿಡುಗಡೆ4 ಹಾಗೂ 1949ರ ಗಾಂಧಿ ಹತ್ಯೆಯ ಪ್ರಕರಣದ ಸಾವರ್ಕರ್ ಬಿಡುಗಡೆಯ ನಡುವೆ ಒಂದು ಅರ್ಥಪೂರ್ಣ ಹೋಲಿಕೆ ಇದೆ. ಅಲ್ಲಾ ಬಕ್ಷ್ ಅವರ ಹತ್ಯೆಯ ಪಿತೂರಿ ಆರೋಪ ಹೊತ್ತಿದ್ದ ಖಾನ್ ಬಹಾದುರ್ ಖುರೋ ಮತ್ತು ಅವರ ಸೋದರ ಮೊಹಮ್ಮದ್ ನವಾಜ್ (ಇಬ್ಬರೂ ಮುಸ್ಲಿಂ ಲೀಗಿನ ಮುಖಂಡರು) ಅವರನ್ನು ಖುಲಾಸೆಗೊಳಿಸಲಾಗಿತ್ತು. ಬಿಡುಗಡೆಯ ಆದೇಶ ನೀಡಿದ ನ್ಯಾಯಾಧೀಶರಾದ ಬಿ.ಬಿ. ಪೇಮಾಸ್ಟರ್ ಹೀಗೆ ಹೇಳುತ್ತಾರೆ:

“ಯಾವ ಆಪಾದಿತರ ವಿರುದ್ಧವೂ ದಂಡನೀಯ ಅಪರಾಧವು ಸಾಬೀತಾಗಿಲ್ಲ ಎಂಬ ನ್ಯಾಯ ನಿರ್ಣಾಯಕರ (ಆಪಾದಿತರ ಪರ) ಸಮರ್ಥನೆಯನ್ನು ನಾನು ಒಪ್ಪುತ್ತೇನೆ, ಆದರೆ ಇಡೀ ಹಿಂಸಾಕೃತ್ಯವೇ ಸಂಪೂರ್ಣ ಸುಳ್ಳು ಹಾಗೂ ಕಲ್ಪಿತ ಕತೆ ಎಂಬುದನ್ನು ನಾನು ಒಪ್ಪುವುದಿಲ್ಲ. ಆರೋಪ ಸಾಬೀತಾಗಿಲ್ಲ ಎಂದಷ್ಟೆ ನಾನು ಹೇಳಿದ್ದೇನೆ ಮತ್ತು ಸಾಕ್ಷ್ಯ ಸಾಲದ ಕಾರಣ ಆಪಾದಿತನಿಗೆ ಸಂದೇಹದ ಲಾಭವನ್ನು (ದೋಷಿ ಅಥವಾ ನಿರ್ದೋಷಿ ಎಂದು ಸಾಬೀತು ಮಾಡಲು ಸಾಧ್ಯವಾಗದಾಗ ನಿರ್ದೋಷಿಯೆಂದೇ ನಿರ್ಧರಿಸುವುದು) ನೀಡಿದ್ದೇನಷ್ಟೆ. ಕಾನೂನಿನ ಪ್ರಕಾರ ಅಪ್ರೂವರ್‌ನ ದೃಢೀಕರಿಸದ ಸಾಕ್ಷ್ಯದ ಆಧಾರದ ಮೇಲೆ ಆರೋಪಿಗೆ ಶಿಕ್ಷೆ ವಿಧಿಸಬಹುದು ಎಂದು ಹೇಳುವುದು ಸರಿ, ಆದರೆ ನ್ಯಾಯಾಲಯಗಳ ದೀರ್ಘಕಾಲೀನ ಅನುಭವ ಹಾಗೂ ಹಲವಾರು ತೀರ್ಪುಗಳ ಪ್ರಕಾರ ಸ್ವತಂತ್ರ ಸಾಕ್ಷ್ಯದ ಮೂಲಕ ಅಪ್ರೂವರ್‌ನ ಸಾಕ್ಷ್ಯವನ್ನು ದೃಢೀಕರಿಸಬೇಕು ಎಂಬುದು ವಿವೇಕಯುತವಾದುದು ಎನ್ನಲಾಗಿದೆ. . .”

ಅಲ್ಲಾ ಬಕ್ಷ್ ಹತ್ಯೆ ಪ್ರಕರಣದಲ್ಲಿ ಇಬ್ಬರು ಅಪ್ರೂವರ್‌ಗಳ (ದಾರೇಶ್ ಮತ್ತು ಮೊಹಮದ್ ಖಾನ್) ಹೇಳಿಕೆಗಳ ಹೊರತಾಗಿಯೂ ಮತ್ತು ಗಾಂಧಿ ಹತ್ಯೆಯ ಪ್ರಕರಣದಲ್ಲಿ ದಿಗಂಬರ್ ಬಡ್ಗೆಯವರ ಸಾಕ್ಷ್ಯದ (ಗಾಂಧಿಯನ್ನು ಕೊಲ್ಲಲು ಮಾಡಿದ ಪಿತೂರಿಯಲ್ಲಿ ಸಾವರ್ಕರ್ ಅವರು ಪ್ರಮುಖ ಪಾತ್ರ ವಹಿಸಿದ್ದರು ಎಂಬ ಸಾಕ್ಷ್ಯದ) ಹೊರತಾಗಿಯೂ ಪಿತೂರಿ ಮಾಡಿದ್ದಾರೆಂಬ ಆರೋಪಿಗಳನ್ನು ಬಿಡುಗಡೆ ಮಾಡಲಾಯಿತು, ಏಕೆಂದರೆ ಪಿತೂರಿಯನ್ನು ಸಾಬೀತುಪಡಿಸಲು ‘ಸ್ವತಂತ್ರ ಸಾಕ್ಷ್ಯ’ ಇರಲಿಲ್ಲ ಎಂಬ ಕಾರಣಕ್ಕಾಗಿ. ಪಿತೂರಿ ಮಾಡಲಾಗಿತ್ತು ಎನ್ನುವಾಗ ಮತ್ತು ಅದನ್ನು ನ್ಯಾಯಾಲಯದಲ್ಲಿ ಸಾಬೀತು ಮಾಡುವಾಗ, ಯಾವುದಾದರೂ ಸ್ವತಂತ್ರ ಸಾಕ್ಷಿಯಿಂದ ದೃಢೀಕರಣ ಆಗಲೇಬೇಕು ಎಂದು ಕಾನೂನು ಹೇಳುತ್ತದೆ. ಅತ್ಯಂತ ಗುಪ್ತವಾಗಿ ಪಿತೂರಿ ಮಾಡುತ್ತಿರುವ ಸನ್ನಿವೇಶದಲ್ಲಿ ಒಬ್ಬ ‘ಸ್ವತಂತ್ರ ಸಾಕ್ಷಿ’ಯನ್ನು ಹುಡುಕುವುದು ಸಾಧ್ಯವೇ ಇಲ್ಲ. ಆದರೆ, ಇದು ಕಾನೂನು. ಆದ್ದರಿಂದ ಗಾಂಧಿಯನ್ನು ಕೊಲ್ಲಲು ಪಿತೂರಿ ಮಾಡಿದ ಆರೋಪಿಯನ್ನು (ಸಾವರ್ಕರ್) ಮತ್ತು ಅಲ್ಲಾ ಬಕ್ಷ್‌ನನ್ನು ಕೊಲ್ಲಲು ಪಿತೂರಿ ನಡೆಸಿದ ಆರೋಪಿಗಳನ್ನು(ಖುಹ್ರೊ ಸೋದರರು) ಈ ಎರಡು ಬೇರೆ ಬೇರೆ ಪ್ರಕರಣಗಳಲ್ಲಿ ಬಿಡುಗಡೆ ಮಾಡಲಾಗಿದೆ.

ವೀರ್ ಸಾಂಘ್ವಿ ಹೇಳುತ್ತಾರೆ, ಸಾವರ್ಕರ್ ಅವರ ಬಿಡುಗಡೆಗೆ ತಾಂತ್ರಿಕ ಕಾರಣಗಳೇನೇ ಇರಲಿ,

“ಸಾವರ್ಕರ್ ಅವರನ್ನು ನಾಥೂರಾಮ್ ಗೋಡ್ಸೆ ಪೂಜಿಸುತ್ತಿದ್ದ ಮತ್ತು ಅನುಯಾಯಿಯಾಗಿದ್ದ ಎನ್ನುವುದನ್ನು ಯಾರೂ ಪ್ರಬಲವಾಗಿ ಅಲ್ಲಗಳೆಯುವುದಿಲ್ಲ. ಗಾಂಧೀಜಿಯವರನ್ನು ಹತ್ಯೆ ಮಾಡಲು ಗೋಡ್ಸೆ ದೆಹಲಿಗೆ ಹೋಗುವ ಮುಂಚೆ ಎರಡು ಬಾರಿಯೂ ಸಾವರ್ಕರ್ ಅವರನ್ನು ಬಾಂಬೆಯಲ್ಲಿ ಭೇಟಿ ಮಾಡಿದ್ದ ಎನ್ನುವುದನ್ನೂ ಒಪ್ಪುತ್ತಾರೆ. ಕೆ.ಎಂ.ಮುನ್ಶಿಯವರು (ಸಂಘ ಪರಿವಾರದಲ್ಲಿ ಅತ್ಯಂತ ಗೌರವಕ್ಕೆ ಪಾತ್ರರಾದವರು ಮತ್ತು ಇತ್ತೀಚಿನ ದಿನಗಳಲ್ಲಿ ಗೌರವದಿಂದ ಉಲ್ಲೇಖಿಸಲ್ಪಡುವವರೂ ಆಗಿದ್ದಾರೆ) ಗಾಂಧೀಜಿಯವರ ಹತ್ಯೆಯ ತನಿಖಾ ಆಯೋಗದ ಮುಂದೆ “ಹಿಂದೂ ಮಹಾಸಭಾವು ಇಡಿಯಾಗಿ ಸಾವರ್ಕರ್ ಅವರ ಸಿದ್ಧಾಂತದಿಂದ ದೂರವಿದೆ ಮತ್ತು ಭಯೋತ್ಪಾದಕರಾಗಿರದಿದ್ದರೂ, ಸಾವರ್ಕರ್ ಅವರ ಗುಂಪು ರಾಜಕೀಯ ಹತ್ಯೆಯಲ್ಲಿ ನಂಬಿಕೆ ಇಟ್ಟಿತ್ತು.” ಎಂದು ಹೇಳುತ್ತಾರೆ. . . .ಗಾಂಧೀಜಿ ಹತ್ಯೆಗಾಗಿ ಗೋಡ್ಸೆ ಮತ್ತು ಇತರ ಸಾವರ್ಕರ್‌ವಾದಿಗಳ ವಿಚಾರಣೆ ನಡೆದಾಗ ಸಾವರ್ಕರ್ ಅವರೊಬ್ಬರನ್ನು ಮಾತ್ರವೇ ಬಿಡುಗಡೆ ಮಾಡಲಾಯಿತು, ಏಕೆಂದರೆ ನ್ಯಾಯಾಧೀಶರಿಗೆ ‘ಸಂದೇಹವಿಲ್ಲದ ಸಾಕ್ಷ್ಯ’ ಸಿಗಲಿಲ್ಲ. . .ಆದರೆ ಹತ್ಯೆಗಾಗಿ ಶಿಕ್ಷೆಗೆ ಒಳಗಾದವರೆಲ್ಲರೂ ಸಾವರ್ಕರ್‌ವಾದಿಗಳಾಗಿದ್ದರು ಮತ್ತು ಅವರ ಸಿದ್ಧಾಂತದ ಅನುಯಾಯಿಗಳಾಗಿದ್ದರು ಎಂಬುದನ್ನು ಕೂಡ ನಾವು ಒಪ್ಪಬೇಕಾಗುತ್ತದೆ.”


ಗಾಂಧಿ ಹತ್ಯೆಯ ಪ್ರಕರಣದ ಆರೋಪಿಗಳು (ಎಡದಿಂದ ಬಲಕ್ಕೆ)
ಕುಳಿತಿರುವವರು: ನಾರಾಯಣ ಆಪ್ಟೆ, ವಿ ಡಿ ಸಾವರ್ಕರ್, ನಾಥೂರಾಂ ಗೋಡ್ಸೆ, ವಿ ಆರ್ ಕರ್ಕರೆ
ನಿಂತಿರುವವರು:ಶಂಕರ ಕಿಸ್ತಯ್ಯ, ಗೋಪಾಲ ಗೋಡ್ಸೆ, ಮದನ್ ಲಾಲ್ ಪಾಹವ, ದಿಗಂಬರ ಬಡ್ಗೆ

ಗಾಂಧಿ ಹತ್ಯೆ ಪ್ರಕರಣದಲ್ಲಿ ಹೈಕೋರ್ಟಿನ (ಶಿಮ್ಲಾ) ಪೂರ್ಣ ಪೀಠದ ತೀರ್ಪನ್ನು ಬರೆದ ನ್ಯಾಯಮೂರ್ತಿ ಜಿ.ಡಿ.ಖೋಸ್ಲಾ ಅವರು ಕೂಡ “ಘಟನೆಯ (ಗಾಂಧಿಯ ಹತ್ಯೆ) ಬಗ್ಗೆಯೇ ಹಾಗೂ ಘಟನೆಗೆ ಕಾರಣವಾದ ಸಂಧರ್ಭದ ಬಗ್ಗೆ ಬಡ್ಗೆಯವರು ಅದರ ಸಂಪೂರ್ಣ ಹಾಗೂ ಸವಿಸ್ತಾರವಾದ ವಿವರಣೆಯನ್ನು ನೀಡಿದ್ದಾರೆ . . ಅವರು ವಿವರವಾಗಿ ನಿರೂಪಿಸಿದ ಕಥನವು ಒಟ್ಟಿನಲ್ಲಿ ಸರಿಯಾಗಿದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ ಎಂದಿದ್ದರು.

ನಂತರದಲ್ಲಿ, ಗಾಂಧಿ ಹತ್ಯೆಯ ಕುರಿತ ತನಿಖಾ ಆಯೋಗದ ಮುಖ್ಯಸ್ಥರಾಗಿದ್ದ ನ್ಯಾಯಮೂರ್ತಿ ಜೀವನ್ ಲಾಲ್ ಕಪೂರ್ ಅವರೂ ಕೂಡ “ಒಟ್ಟಾಗಿ ಪರಿಗಣಿಸಿದಾಗ ಎಲ್ಲಾ ಸತ್ಯಾಂಶಗಳು (ಗಾಂಧೀ) ಹತ್ಯೆ ಮಾಡಲು ಸಾವರ್ಕರ್ ಮತ್ತು ಅವರ ಗುಂಪು ನಡೆಸಿದ ಪಿತೂರಿಯೆಂಬುದರ ಹೊರತಾಗಿ, ಬೇರಾವುದೇ ವಾದಗಳನ್ನು ಧ್ವಂಸ ಮಾಡುತ್ತವೆ” ಎಂಬ ತೀರ್ಮಾನಕ್ಕೆ ಬರುತ್ತಾರೆ.

ಆದರೆ ‘ಫಿರ್ಯಾದಿಗಳು ಸಾವರ್ಕರರನ್ನು ಖುಲಾಸೆ ಮಾಡಿದ ವಿಚಾರಣಾ ನ್ಯಾಯಾಲಯದ ತೀರ್ಪಿನ ವಿರುದ್ಧ ಏಕೆ ಅಪೀಲು ಹೋಗಲಿಲ್ಲ ಮತ್ತು ಆ ಮೂಲಕ ಆ ಪ್ರಕರಣವನ್ನು ಹೈಕೋರ್ಟಿನಲ್ಲಿ ಮತ್ತೆ ತೆರೆಯಲಿಲ್ಲ’ ಎಂಬ ವಿಷಯ ಯಾರಿಗೂ ಗೊತ್ತಿಲ್ಲ.

ಗಾಂಧಿಯ ಹತ್ಯೆಗೆ ಸಾವರ್ಕರ್ ಅವರೇ ಕಾರಣ ಎಂದು ಸರ್ದಾರ್ ಪಟೇಲ್ ನಿರ್ಣಯಿಸಿದ್ದರು

ಗಾಂಧಿ ಹತ್ಯೆಯಲ್ಲಿ ಸಾವರ್ಕರ್ ಅವರ ಪಾತ್ರದ ಬಗ್ಗೆ ಭಾರತದ ಪ್ರಥಮ ಗೃಹ ಸಚಿವರೂ ಆಗಿದ್ದ ಮತ್ತು ಹಿಂದುತ್ವ ಬ್ರಿಗೇಡಿನ ಅಚ್ಚುಮೆಚ್ಚಿನವರೂ ಆಗಿರುವ ಸರ್ದಾರ್ ವಲ್ಲಭ್ ಭಾಯ್ ಪಟೇಲ್ ಅವರು ಏನು ಹೇಳಿದರು ಎನ್ನುವುದು ಬಹಳ ಪ್ರಸ್ತುತವಾಗುತ್ತದೆ. ಫೆಬ್ರವರಿ 27, 1948 ರಂದು ಸರ್ದಾರ್ ಪಟೇಲ್ ಅವರು ಅಂದಿನ ಪ್ರಧಾನಿ ನೆಹರೂರವರಿಗೆ ಬರೆದ ಪತ್ರದಲ್ಲಿ:

“ಸಾವರ್ಕರ್ ಅವರ ಅಡಿಯಲ್ಲಿನ ಹಿಂದೂ ಮಹಾಸಭಾದ ಮತಾಂಧ ಅಂಗಸಂಸ್ಥೆಯು ನೇರವಾಗಿ ಆ ಪಿತೂರಿಯನ್ನು ಹೆಣೆದರು ಮತ್ತು ಆಗು ಮಾಡಿದರು. ಆ ಪಿತೂರಿಯು ಕೆಲವು ಹತ್ತು ಜನರಿಗೆ ಸೀಮಿತವಾಗಿತ್ತು ಎಂದೂ ಕಾಣುತ್ತದೆ . . ನಿಸ್ಸಂದೇಹವಾಗಿಯೂ, ಗಾಂಧೀಜಿಯವರ ಹತ್ಯೆಯನ್ನು ಆರ್‌ಎಸ್‌ಎಸ್ ಮತ್ತು ಹಿಂದೂ ಮಹಾಸಭಾದವರು ಸ್ವಾಗತಿಸಿದರು ಮತ್ತು ಗಾಂಧೀಜಿಯ ಚಿಂತನೆಗಳನ್ನು ಮತ್ತು ಅವರ ನೀತಿಗಳನ್ನು ಪ್ರಬಲವಾಗಿ ವಿರೋಧಿಸಿದ್ದರು”

ಎಂದು ತಿಳಿಸಿದ್ದರು.

ಪುಟ 7 ಕ್ಕೆ

ಸಂಪಾದಕೀಯ

ಕೋಟ್ಯಾಧೀಶರ ಅಬ್ಬರದಲ್ಲಿ ದುರ್ಬಲರ ದನಿಯೆಲ್ಲಿ?

ಚುನಾವಣೆಯನ್ನು ಪ್ರಜಾಪ್ರಭುತ್ವದ ಹಬ್ಬವೆಂದು ಚುನಾವಣಾ ಆಯೋಗ ಬಣ್ಣಿಸಿದೆ. ರಾಜ್ಯದಲ್ಲಿನ ಬೆಳವಣಿಗೆಗಳನ್ನು ನೋಡುವಾಗ ಈ ಹಬ್ಬದ ಸ್ವರೂಪ ಹೇಗಿದೆ ಎನ್ನುವುದು ಆತಂಕ ಹುಟ್ಟಿಸುತ್ತದೆ. ಚುನಾವಣಾ ನೀತಿ ಸಂಹಿತೆ ಜಾರಿ ಬಂದ ನಂತರದಲ್ಲಿ ಸಿಕ್ಕ ನೂರಾರು ಕೋಟಿ ರೂಪಾಯಿಗಳ ಹಣ, ಕುಕ್ಕರ್, ಮಿಕ್ಸಿ, ಸೀರೆಗಳು, ಬೆಳ್ಳಿ, ಬಂಗಾರ ಮುಂತಾದ ಸಾಮಾನುಗಳು ಬಹುತೇಕವಾಗಿ ಮತದಾರರಿಗೆ ನೀಡಲೆಂದೇ ತಂದ ಆಮಿಷದ ಕೊಡುಗೆಗಳು ಎನ್ನುವುದರಲ್ಲಿ ಅನುಮಾನವಿಲ್ಲ. ಯಾವುದೇ ಅಭ್ಯರ್ಥಿ ಚುನಾವಣಾ ಪ್ರಕ್ರಿಯೆಯಲ್ಲಿ ಮತದಾರರಿಗೆ ನೀಡುವ ಕೊಡುಗೆಗಳನ್ನು ಚುನಾವಣಾ ಅಕ್ರಮ, ಅಪರಾಧವೆಂದೇ ಪರಿಗಣಿತವಾಗುತ್ತವೆ. ಹೀಗಿರುವಾಗ ಈಗಲೂ ರಾಜಾರೋಷವಾಗಿ ಕೆಲವು ಅಭ್ಯರ್ಥಿಗಳು ಅಂತಹ ಪ್ರಯತ್ನಕ್ಕೆ ಇಳಿಯುತ್ತಿದ್ದಾರೆ ಎನ್ನುವ ಭಂಡತನ, ಧೈರ್ಯಕ್ಕೆ ಕಾರಣವೇನು ಎಂಬ ಪ್ರಶ್ನೆ ಉಳಿಯುತ್ತದೆ. ಇನ್ನೂ ವಿಶೇಷವೆಂದರೆ ಇಂತಹ ಕೆಲವು ಅಭ್ಯರ್ಥಿಗಳು ನೀತಿ ಸಂಹಿತೆ ಘೋಷಿತವಾಗುವ ಮೊದಲೇ ಮನೆ ಮನೆಗೂ ಕೊಡುಗೆಗಳ ಕಿಟ್ ಗಳನ್ನು ನೀಡಿ ಸಂಭವನೀಯ ಅಭ್ಯರ್ಥಿತನವನ್ನು ಧೃಡಪಡಿಸಿರುವ ಮುಂಗಡ ಬುಕಿಂಗ್ ಜಾಣತನ ಎಲ್ಲಾ ಕ್ಷೇತ್ರಗಳಲ್ಲಿ ಕಂಡಿದೆ. ಅಭ್ಯರ್ಥಿಯು ಕ್ಷೇತ್ರದ ಮತದಾರರಿಗೆ ಪರಿಚಯಾತ್ಮಕ ಹಂತದಲ್ಲೇ ಹಲವು ಕೋಟಿ ರೂ.ಗಳನ್ನು ಖರ್ಚು ಮಾಡಿರುತ್ತಾರೆ. ಅಧಿಕಾರದ ಗದ್ದುಗೆಗೆ ಹತ್ತಿರವಿರುವ ಪಕ್ಷಗಳಿಗೆ ವಿಪರೀತ ಬೇಡಿಕೆ ಇದ್ದು ಅಭ್ಯರ್ಥಿ ಅರ್ಜಿ ಶುಲ್ಕವಾಗಿ ರೂ.24 ಕೋಟಿ ರೂ.ಗಳು ಮುಂಗಡ ಹಣವನ್ನು ಪಕ್ಷವೊಂದು ಸಂಗ್ರಹಿಸಿದೆ ಎನ್ನುವ ಆರೋಪವಿದೆ. ಬೇಡಿಕೆ ಇರುವ ಪಕ್ಷದ ಅಭ್ಯರ್ಥಿಯಾಗಲು ಮತ್ತಷ್ಟೂ ದಕ್ಷಿಣೆ ಇಡಬೇಕು ಎನ್ನುವುದು, ಚುನಾವಣೆಯಲ್ಲಿ ಎದುರಾಳಿಯನ್ನು ಮಣಿಸುವಷ್ಟು ಯಥೇಚ್ಛ ಹಣ ಖರ್ಚು ಮಾಡುವ ಸಾಮರ್ಥ್ಯ ಇರಬೇಕೆಂಬ ಅಲಿಖಿತ ಮಾನದಂಡ ಅಸಮಾನ್ಯ ಅಭ್ಯರ್ಥಿಗಳಿಗೆ ಅವಕಾಶ ತೆರೆದಿಡುತ್ತದೆ. ಹೀಗಾಗಿ ಆಕಾಂಕ್ಷಿ ಅಭ್ಯರ್ಥಿಯ ಜನಾನುರಾಗಿತನ, ಜನರ ನಡುವಿನ ಕೆಲಸ, ಪಕ್ಷನಿಷ್ಠೆ, ಪ್ರಾಮಾಣಿಕತೆ ಮುಂತಾದವುಗಳು ಸವಕಲು ನಾಣ್ಯಗಳಾಗಿವೆ.

ನಾಮಪತ್ರಗಳ ಸಲ್ಲಿಕೆ ಸಂದರ್ಭಗಳು ಜನ ಬೆಂಬಲದ ಪ್ರದರ್ಶನಗಳ ಏರ್ಪಾಡುಗಳೂ ಕೋಟ್ಯಾಂತರ ವ್ಯವಹಾರದ ಬಾಬತ್ತುಗಳಾಗಿವೆ. ಇಂತಹ ಭರ್ಜರಿ ಪ್ರದರ್ಶನಗಳಿಗೆ ಜನರನ್ನು ವ್ಯವಸ್ಥೆಗೊಳಿಸುವ ಗುತ್ತಿಗೆ ಏಜಂಟರ ಹುಟ್ಟಿಗೂ ಕಾರಣವಾಗಿವೆ.

ಈಗಾಗಲೇ ನಾಮಪತ್ರಗಳ ಪರಿಶೀಲನೆ ಮುಗಿದಿದೆ. ಅಭ್ಯರ್ಥಿಗಳ ಆಸ್ತಿ, ಮೊಕದ್ದಮೆ ಇತ್ಯಾದಿಗಳ ಕುರಿತು ಸಾರ್ವಜನಿಕರೆದುರು ಬಹಿರಂಗಗೊಂಡ ಮಾಹಿತಿಗಳು ಪ್ರಜೆಗಳನ್ನು ದಿಗ್ಭ್ರಮೆಗೊಳಿಸಿವೆ. ಅಭ್ಯರ್ಥಿಗಳು ನೀಡಿದ ಮಾಹಿತಿಯಂತೆ ಬಹುತೇಕರು ಕೋಟಿ, ಕೋಟಿ ರೂ.ಗಳ ಆಸ್ತಿಯ ಒಡೆಯರು. ಬಿ.ಜೆ.ಪಿ. ಸಚಿವ ಎಂ.ಟಿ.ಬಿ ನಾಗರಾಜ್ 1609 ಕೋಟಿ ರೂ.ಗಳ ಆಸ್ತಿಯ ಒಡೆಯ ಮೊದಲ ಸ್ಥಾನದಲ್ಲಿದ್ದಾರೆ. ಕಾಂಗ್ರೆಸ್ ನ ರಾಜ್ಯಾಧ್ಯಕ್ಷರಾದ ಡಿ.ಕೆ.ಶಿವಕುಮಾರ್ 1415 ಕೋಟಿ.ರೂ.ಗಳ ಒಡೆಯನಾಗಿದ್ದರೆ ಬಿಜೆಪಿಯ ಭೈರತಿ ಸುರೇಶ್ 649 ಕೋಟಿ ರೂ.ಗಳು, ಹೀಗೆ ಬಹುತೇಕವಾಗಿ ಬಿಜೆಪಿ, ಕಾಂಗ್ರೆಸ್, ಒಂದು ಮಟ್ಟಿನಲ್ಲಿ ಜೆಡಿ ಎಸ್ ಪಕ್ಷಗಳ ಅಭ್ಯರ್ಥಿಗಳು ನೂರಾರು ಹಾಗೂ ಕೆಲವರು ಹಲವು ಕೋಟಿಗಳ ಆಸ್ತಿವಂತರು. ಇದು ಸಾರ್ವಜನಿಕವಾಗಿ ತೋರುವ ಲೆಕ್ಕದಲ್ಲಿ ಇರುವಂತಹವು, ಇಂತಹ ಅನೇಕರ ಬೇನಾಮಿ ಆಸ್ತಿ ಅಗೋಚರ ಎನ್ನುವ ಟೀಕೆಗಳಲ್ಲಿ ಹುರುಳಿಲ್ಲದಿಲ್ಲ. ವಿಧಾನ ಸಭೆಯ ಎಲ್ಲಾ ಅಭ್ಯರ್ಥಿಗಳ ಆಸ್ತಿ ವಿವರಗಳ ತುಲನಾತ್ಮಕ ವಿಶ್ಲೇಷಣೆಯ ಮಾಹಿತಿಗಳು ಇನ್ನೂ ಮಾಡಬೇಕಿದೆ ಎನ್ನುವಾಗಲೂ ಮುಂದೆ ವಿಧಾನಸಭೆ ಪ್ರವೇಶಿಸಬಹುದಾದ ಸಂಭವನೀಯರು ಬಹುತೇಕರು ಕೋಟ್ಯಾಧೀಶರು ಇರುವರು ಎನ್ನುವುದರಲ್ಲಿ ಅನುಮಾನವಿಲ್ಲ. ಚುನಾವಣೆಗೆ ಇಳಿದಿರುವ ಇಂತಹ ಬಹುತೇಕರು ರಿಯಲ್ ಎಸ್ಟೇಟ್ ಮುಂತಾಗಿ ಭೂಮಿ, ಸೈಟ್, ಗಣಿಗಾರಿಕೆ, ಶಿಕ್ಷಣ, ಮುಂತಾದ ಸಕ್ರಮ ಮತ್ತು ಆರೋಪಿತ ಅಕ್ರಮ ಉದ್ಯಮಗಳಲ್ಲಿ ತೊಡಗಿದವರು. ಅಂದರೆ ಉದಾರೀಕರಣದ ಅವಧಿಯಲ್ಲಿ ಕೊಬ್ಬಿ ಬೆಳೆದವರು. ಅಂತಹವರೇ ಇಂದು ವಿಧಾನಸಭೆಗೆ ಪ್ರವೇಶಿಸಲು ಸ್ಪರ್ದೆ ನಡೆಸುತ್ತಿರುವುದು ಎದ್ದು ಕಾಣುತ್ತಿದೆ. ಕಾರ್ಮಿಕರು, ಕೂಲಿಕಾರರು, ರೈತರು, ಸಾಮಾಜಿಕವಾಗಿ, ಆರ್ಥಿಕವಾಗಿ ದುರ್ಬಲ ವರ್ಗಗಳಿಂದ ಬಂದ ಅಭ್ಯರ್ಥಿಗಳು, ಜನ ಚಳುವಳಿಗಳ ನಾಯಕರು ತೀರಾ ಕಡಿಮೆ. ಅಭ್ಯರ್ಥಿಗಳ ಆಯ್ಕೆಯಲ್ಲಿ ಜಾತಿಗಳ ಸಮೀಕರಣವೂ ಆದ್ಯತೆ ಪಡೆದಿದೆ. ಮತಾಂಧತೆ, ಕೋಮುದ್ವೇಷದ ವಿಷವೂ ಬಳಕೆಯಾಗುತ್ತಿದೆ. ಇಡೀ ಈ ಐದು ವರ್ಷಗಳ ಅವಧಿಯಲ್ಲಿ ಜಾತೀಯತೆ, ಮತೀಯವಾದ, ಅಂಧಶ್ರದ್ಧೆ, ಕಂದಾಚಾರ, ಲಿಂಗ ತಾರತಮ್ಯಗಳನ್ನು, ಪ್ರಜಾಪ್ರಭುತ್ವವನ್ನು ಬುಡಮೇಲುಗೊಳಿಸುವ ಮೌಲ್ಯಗಳನ್ನು ಹುಲುಸಾಗಿ ಬೆಳೆಸಿದವರು ಅದರ ಲಾಭ ಗಿಟ್ಟಿಸಲು ಉತ್ಸುಕರಾಗಿದ್ದಾರೆ. ಇಂತಹ ಅಬ್ಬರದಲ್ಲಿ ದುರ್ಬಲರ ಧ್ವನಿ ವಿಧಾನ ಸೌಧದಲ್ಲಿ ಕೇಳುವ ಬಗೆಯೆಂತು? ಕೋಟ್ಯಾಧೀಶರ ಕೋಟೆಯೊಳಗೆ ದಮನಿತರ, ದುಡಿವ ಜನದನಿಗಳು ಕೆಲವಾದರೂ ಕೇಳುವಂತಾಗಲಿ ಎಂದು ಆಶಿಸೋಣ.



ದೇಶದ ಒಳಿತಿಗಾಗಿ ಬಿಜೆಪಿಯನ್ನು ಸೋಲಿಸಿ

ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಅಶೋಕ ಧವಳೆ ಕರೆ

ಸಿಪಿಐ(ಎಂ) ಪಕ್ಷದ ರಾಜಕೀಯ ಸಮಾವೇಶವು ಇಂದು ಕೋಸಗಿ ಕಲ್ಯಾಣ ಮಂಟಪದಲ್ಲಿ ನಡೆಯಿತು. ಕಲಬುರಗಿ ಗ್ರಾಮೀಣ ಮತಕ್ಷೇತ್ರದಿಂದ ಪಕ್ಷದ ಹುರಿಯಾಳು ಆಗಿ ನಾಮ ಪತ್ರ ಸಲ್ಲಿಸಿದ ಕಾಮ್ರೇಡ್ ಪಾಂಡುರಂಗ ಮಾವಿನಕರ್ ಪರವಾಗಿ ಮತ ಯಾಚಿಸುತ್ತ ಸಿಪಿಐ ಎಂ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರು ಮತ್ತು ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರೀಯ ಅಧ್ಯಕ್ಷರಾದ ಕಾಮ್ರೇಡ್ ಅಶೋಕ ಧಾವಳೆಯವರು ಮಾತನಾಡುತ್ತ ಬಿಜೆಪಿ ಸರಕಾರದ ವೈಫಲ್ಯ ವನ್ನು ಬಿಚ್ಚಿಟ್ಟರು. ಅವರು ಮಾತನಾಡುತ್ತ ಬಿಜೆಪಿ ಆಡಳಿತದಲ್ಲಿ ಎಲ್ಲ ಜೀವನಾವಶ್ಯಕ ವಸ್ತುಗಳ ಬೆಲೆ ಗಗನಕ್ಕೇರಿದೆ. 2014 ರಲ್ಲಿ ಅಡಿಗೆ ಗ್ಯಾಸ್ ಸಿಲಿಂಡರ್ ಒಂದಕ್ಕೆ 450 ರೂಪಾಯಿ ಇದ್ದದ್ದು ಇಂದು 1150 ರೂಪಾಯಿ ಆಗಿದೆ. ಇದರಂತೆ ಎಲ್ಲ ಬೆಲೆಗಳು ಎಷ್ಟು ಏರಿದೆ ಎಂಬುದು ವಿವರಿಸಿ ಹೇಳಬೇಕಿಲ್ಲ ತಾನೇ ಮೋದಿ ಮಹಾಶಯರು ವರ್ಷಕ್ಕೆ ಎರಡು ಕೋಟಿ ಉದ್ಯೋಗ ಕೊಡುತ್ತೇನೆ ಎಂದು ಹೇಳಿದ್ದಾನೆ. ಅದರ ಲೆಕ್ಕದಲ್ಲಿ ಹದಿನೆಂಟು ಕೋಟಿ ಉದ್ಯೋಗ ದೊರೆಯಬೇಕಿತ್ತು. ಆದರೆ ವರ್ಷಕ್ಕೆ ಲಕ್ಷಾಂತರ ಕೆಲಸಗಳು ಕಳೆದು ಹೋಗಿವೆ. ಲಕ್ಷಾಂತರ ಜನರು ಇದ್ದ ಕೆಲಸ ಕಳೆದುಕೊಂಡು ಬೀದಿಗೆ ಬಿದ್ದಿದ್ದಾರೆ. ಬಿಜೆಪಿ ನಾಯಕರು ಇನ್ನಿಲ್ಲದ ಭ್ರಷ್ಟಾಚಾರದಲ್ಲಿ ತೊಡಗಿ ಕರ್ನಾಟಕ ಸರಕಾರ 40% ಲಂಚ ತಿನ್ನುತ್ತಿರುವುದು ಜಗಜ್ಜಾಹೀರು ಆಗಿದೆ. ಮೇಲಾಗಿ ನಾಡಿನಲ್ಲಿ ಕೋಮುದ್ವೇಷದ ಬೆಂಕಿ ಹಚ್ಚುವಲ್ಲಿ ನಿರತರಾಗಿದ್ದಾರೆ. ಇಂಥ ಭ್ರಷ್ಟ ಸರಕಾರ ಹಿಂದೆಂದೂ ಇರಲಿಲ್ಲ. ನೀವು ಕರ್ನಾಟಕದವರ ಕಡೆ ಇಡೀ ದೇಶ ನೋಡುತ್ತಿದೆ. ದಯವಿಟ್ಟು ಈ ಕೋಮುವಾದಿಗಳನ್ನು ಕಿತ್ತು ಎಸೆಯಿರಿ. ದೇಶ ನಿಮಗೆ ಸದಾ ಋಣಿಯಾಗಿರುತ್ತದೆ. ದೇಶದ ಒಳಿತಿಗಾಗಿ ಕರ್ನಾಟಕದವರು ಬಿಜೆಪಿಯನ್ನು ಸೋಲಿಸಬೇಕು ಎಂದರು.

ಪ್ರಾರಂಭದಲ್ಲಿ ಜಿಲ್ಲಾ ಕಾರ್ಯದರ್ಶಿ ಕಾಮ್ರೇಡ್ ನೀಲಾ ಅವರು ಪ್ರಾಸ್ತಾವಿಕ ಮಾತುಗಳನ್ನು ಆಡುತ್ತ ನಮ್ಮದು ಸೌಹಾರ್ದ ನಾಡು. ದುಡಿಯುವ ಜನತೆಯ ನಾಡು. ಇಂಥ ನಾಡಿನ ಸಾಮರಸ್ಯವನ್ನು ಕೆಡಿಸಲು, ಬಡತನವನ್ನು ಇನ್ನಷ್ಟು ಹೆಚ್ಚು ಮಾಡಲು ಬಿಜೆಪಿ ಸತತ ಪ್ರಯತ್ನ ಪಡುತ್ತಿದೆ. ಮನುವಾದಿ ತತ್ವಗಳನ್ನೇ ಹಾಸು ಹೊದ್ದುಕೊಂಡಿರುವ ಸಂಘ ಪರಿವಾರ ಜಾತಿ ವ್ಯವಸ್ಥೆ ಯನ್ನು ಮರು ಸ್ಥಾಪಿಸಲು ಹೊರಟಿದೆ. ಆದ್ದರಿಂದ ಬಾಬಾ ಸಾಹೇಬರ ಸಂವಿಧಾನ ದಲ್ಲಿ ನಂಬಿಕೆ ಹೊಂದಿರುವ ಪ್ರತಿಯೊಬ್ಬರು ಬಿಜೆಪಿಯನ್ನು ಸೋಲಿಸಿ ಕಮ್ಯುನಿಸ್ಟ್ ಪಕ್ಷದ ಸಚ್ಚಾರಿತ್ರವಂತ ಅಭ್ಯರ್ಥಿ ಪಾಂಡುರಂಗ ಮಾವಿನಕರ್ ಅವರನ್ನು ಆಯ್ಕೆ ಮಾಡಬೇಕು ಎಂದು ಹೇಳಿದರು. ನಂತರ ಸಿಪಿಐ ಎಂ ಪಕ್ಷದ ಯಾದಗಿರಿ ಜಿಲ್ಲಾ ಕಾರ್ಯದರ್ಶಿ ಚೆನ್ನಪ್ಪ ಆನೆಗುಂದಿಯವರು ಮಾತನಾಡುತ್ತ ಈ ಬಿಜೆಪಿ, ಕಾಂಗ್ರೆಸ್ ಇತ್ಯಾದಿ ಪಕ್ಷಗಳು ಕಾರ್ಮಿಕ ವಿರೋಧಿ , ರೈತ ವಿರೋಧಿಯಾಗಿವೆ. ಸ್ವದೇಶಿ ಮಂತ್ರ ಜಪಿಸುತ್ತ ಬಿಜೆಪಿ ಇಡೀ ದೇಶವನ್ನು ಮಾರಿಬಿಟ್ಟಿದೆ. ನಮ್ಮ ದೇಶವನ್ನು ನಾವು ಮರಳಿ ಪಡೆಯಬೇಕಾದರೆ ಬಿಜೆಪಿಯನ್ನು ಕಸದ ಬುಟ್ಟಿಗೆ ಎಸೆಯಬೇಕಾಗಿದೆ. ಎಂದು ಕರೆ ಕೊಟ್ಟರು. ಕಲಬುರಗಿ ಗ್ರಾಮೀಣ ಮತಕ್ಷೇತ್ರದ ಪಕ್ಷದ ಅಭ್ಯರ್ಥಿಯಾಗಿ ಪಾಂಡುರಂಗ ಅವರು ಮತ ಯಾಚಿಸುತ್ತ ನಾನೊಬ್ಬ ಸಾದಾಸೀದಾ ಹೋರಾಟಗಾರ. ಎಲ್ಲ ದುಡಿಯುವ ಜನತೆಯ ಪರ ಒಳಗೆ ಹೋರಾಟ ಮಾಡಲು ನನಗೆ ಒಳಗೆ ಕಳಿಸಿರಿ. ನಾನು ಗೆದ್ದರೂ ನಿಮ್ಮೊಂದಿಗೆ ಸೋತರು ನಿಮ್ಮೊಂದಿಗೆ. ನನಗೆ ಯಾವ ಅಂತಸ್ತು, ಆಸ್ತಿ, ಪದವಿಗಳ ಬಯಕೆ ಇಲ್ಲ ಎಂದರು. ಕೊನೆಯದಾಗಿ ಸಭೆಯ ಅಧ್ಯಕ್ಷರಾದ ಕಾಮ್ರೇಡ್ ಎಂ ಬಿ ಸಜ್ಜನವರು ಮಾತನಾಡುತ್ತ ಬಿಜೆಪಿಯು ಯಾವತ್ತೂ ಜನಪರ ಕೆಲಸ ಮಾಡಿಲ್ಲ. ಶಿಕ್ಷಣ,ಆರೋಗ್ಯ, ಕೃಷಿ, ಉದ್ಯಮ ಎಲ್ಲವುಗಳನ್ನು ದಿವಾಳಿ ಮಾಡಿದೆ. ದೇಶವನ್ನು ಧರ್ಮ,ಜಾತಿ,ಭಾಷೆಗಳ ಅಡಿಯಲ್ಲಿ ಒಡೆದು ಛಿದ್ರ ಮಾಡಿದೆ. ನಮ್ಮ ಬದುಕು ಸುರಕ್ಷಿತವಾಗಿ ಉಳಿಯಬೇಕಾದರೆ ಕೋಮುವಾದಿ ಪಕ್ಷವನ್ನು ಸೋಲಿಸಲೇಬೇಕು ಎಂದರು.

ಕೊನೆಯದಾಗಿ ಕ್ರಾಂತಿಗೀತೆಯೊಂದಿಗೆ ಸಭೆ ಮುಕ್ತಾಯ ಮಾಡಲಾಯಿತು. ವೇದಿಕೆ ಯ ಮೇಲೆ ಪಕ್ಷದ ಮುಖಂಡರಾದ ಭೀಮಶೆಟ್ಟಿ ಯಂಪಳ್ಳಿ, ಮೇಘರಾಜ ಕಠಾರೆ, ಪ್ರಭು ಖಾನಾಪೂರೆ, ಸುಧಾಮ ಧನ್ನಿ, ಶ್ರೀಮಂತ ಬಿರಾದಾರ, ಚಂದಮ್ಮ ಗೋಳಾ, ಸಿದ್ದು ಹರವಾಳ, ಡಾ.ಸಾಯಿಬಣ್ಣ ಗುಡುಬಾ, ಬಾಬು ಹೀರಮಶೆಟ್ಟಿ, ವಿರುಪಾಕ್ಷಪ್ಪ ತಡಕಲ್, ಗುಂಡಪ್ಪ ಕಲಬುರಗಿ, ಜಗನ್ನಾಥ ಹೊಡಲ್, ದಿಲೀಪ್ ನಾಗುರೆ, ರಾಯಪ್ಪ, ಕಾಶೀನಾಥ ಬಂಡಿ ಮತ್ತು ಜನವಾದಿಯ ರಾಜ್ಯಧ್ಯಕ್ಷೆ ಮೀನಾಕ್ಷಿ ಬಾಳಿ ಇದ್ದರು. ಮೆಹಬೂಬ ಷಾ ಅವರು ವಂದನಾರ್ಪಣೆ ಮಾಡಿದರು.



ಶ್ರಮಜೀವಿಗಳ ಹಿತಾಸಕ್ತಿಗಾಗಿ ವೃತ್ತಿ ಬದುಕನ್ನೇ ಮುಡುಪಾಗಿಸಿದ ಹಿರಿಯ ನ್ಯಾಯವಾದಿ ಕಾಮ್ರೇಡ್ ಕೆ.ಸುಬ್ಬರಾವ್ ನಿಧನ



ಶ್ರಮಿಕ ವರ್ಗಕ್ಕೆ ನ್ಯಾಯ ಕೊಡಿಸಲು, ಶೋಷಣೆಯ ವ್ಯವಸ್ಥೆ ತೊಲಗಿಸಿ ಸಮಾನತೆಯ ಸಮಾಜ ನಿರ್ಮಿಸಲು ತಮ್ಮ ವಕೀಲ ವೃತ್ತಿಯ ಬದುಕನ್ನೇ ಮುಡುಪಾಗಿಸಿದ ಹಿರಿಯ ನ್ಯಾಯವಾದಿ ಕಾಮ್ರೇಡ್ ಕೆ. ಸುಬ್ಬರಾವ್ 2023 ಏಪ್ರಿಲ್ 21 ರಂದು ಬೆಳಿಗ್ಗೆ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ 92 ವರ್ಷ ವಯಸ್ಸಾಗಿತ್ತು. ಅವರು ಪತ್ನಿ ಶ್ರೀಮತಿ ಸುಶೀಲರಾವ್ ಹಾಗೂ ಮಗಳು ಶ್ರೀಮತಿ ಮಾಯರಾವ್ ಹಾಗೂ ಅಪಾರ ಬಂಧು– ಬಳಗ, ಹಿತೈಷಿಗಳು, ದುಡಿಯುವವರ್ಗದ ಚಳುವಳಿಯ ಒಡನಾಡಿಗಳನ್ನು ಆಗಲಿದ್ದಾರೆ.

ಸಂಗಾತಿ ಸುಬ್ಬರಾವ್ ರವರು, ಕರ್ನಾಟಕ ಕಂಡ ಶ್ರೇಷ್ಟ ನ್ಯಾಯವಾದಿಗಳಲ್ಲೊಬ್ಬರು. ಬದುಕಿನುದ್ದಕ್ಕೂ ಕಾರ್ಮಿಕರ ಹಿತಕ್ಕೆ ಬದ್ಧರಾಗಿ ಲಕ್ಷಾಂತರ ಕಾರ್ಮಿಕರ ಹಕ್ಕುಗಳನ್ನು, ಅವರ ಬದುಕನ್ನು ನ್ಯಾಯಾಲಯದ ಒಳಗೂ, ಹೊರಗೂ ಸಂರಕ್ಷಿಸಲು 66 ವರ್ಷಗಳಷ್ಟು ಸುದೀರ್ಘ ಕಾಲ ಹಗಲಿರುಳು ಶ್ರಮಿಸಿದ ಅಪರೂಪದ ಹಿರಿಯ ನ್ಯಾಯವಾದಿಯಾಗಿದ್ದರು.

ಸಂಕ್ಷಿಪ್ತ ಪರಿಚಯ

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಮಣಿಲ ಗ್ರಾಮದಲ್ಲಿ, ಶ್ರೀ ಕಡಂದೇಲು ಗಣೇಶ್ ರಾವ್ ಮತ್ತು ಶ್ರೀಮತಿ ಕಡಂದೇಲು ಸರಸ್ವತಿ ಯವರ ಪುತ್ರನಾಗಿ 1931ರ ಜೂನ್ 15 ರಂದು ಸುಬ್ಬರಾವ್ ಜನಿಸಿದರು. ಅದೇ ಗ್ರಾಮದ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿದ ಅವರು, ಹೈಸ್ಕೂಲು ಶಿಕ್ಷಣವನ್ನು ಗಡಿಯಲ್ಲಿರುವ ನಿಲೇಶ್ವರದಲ್ಲಿ ಪಡೆದರು. ಮಂಗಳೂರು, ಮದ್ರಾಸ್, ಪೂನಾದಲ್ಲಿ ಕಾಲೇಜು, ಕಾನೂನು ಪದವಿ ಹೀಗೆ ವ್ಯಾಸಂಗ ಮಾಡಿದರು.

ಕಲಿಕೆಯ ಚಲನೆಯಲ್ಲಿ ಲೋಕಜ್ಞಾನದ ಕಣಜ ತುಂಬಿದ ಮಾನವೀಯತೆ ಅವರದಾಗಿತ್ತು. ಅಸಮಾನತೆಯನ್ನು ತೊಲಗಿಸುವ ತುಡಿತ ಹೊಂದಿದ್ದ ಸಾರ್ಥಕತೆಯ ಬದುಕು ಅವರದಾಗಿತ್ತು. ತಾತ್ವಿಕವಾಗಿ ಅವರು ಮಾರ್ಕ್ಸ್ ವಾದದ ಮೇರು ವ್ಯಕ್ತಿತ್ವ ಹೊಂದಿದ್ದರು. ಉನ್ನತ ವ್ಯಾಸಂಗ, ಕಾನೂನಿನ ಅಧ್ಯಯನವು, ವ್ಯವಸ್ಥೆಯ ವಾಸ್ತವಗಳನ್ನು ಮತ್ತಷ್ಟು ಮನಗಾಣಿಸಿ ಸಮಾಜದ ಬದಲಾವಣೆಗೆ ಹೋರಾಟದ ಹಾದಿಯನ್ನು ತೋರಿದವು. ನ್ಯಾಯಶಾಸ್ತ್ರದಲ್ಲಿ ಕಲಿತು ವಕೀಲನಾಗಬೇಕೆಂಬ ನಿರ್ಧಾರದಿಂದಾಗಿ, ನಾಡು ಒಬ್ಬ ಅತ್ಯುತ್ತಮ ನ್ಯಾಯವಾದಿಯನ್ನು ಪಡೆಯಿತು.

ಪೂನಾದಲ್ಲಿ ಕಲಿಯುವಾಗಲೇ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗುವ ಮೂಲಕ ಅವರು ಸಹಜ ನಾಯಕನಾಗಿ ಹೊರಹೊಮ್ಮಿದರು. ಆಗಲೇ ಭಾರತದ ಶ್ರೇಷ್ಟ ನಾಯಕರಲ್ಲೊಬ್ಬರಾದ, ಭಾರತದ ಪ್ರಥಮ ವಿರೋಧ ಪಕ್ಷದ ನಾಯಕರೂ ಆಗಿದ್ದ ಎ.ಕೆ. ಗೋಪಾಲನ್ ರವರನ್ನು ಆಹ್ವಾನಿಸಿ ಸಾಮಾಜಿಕ ಚಿಂತನೆಯನ್ನು ಪ್ರದರ್ಶಿಸಿದ್ದರು.

1958ರ ಜನವರಿ 30 ರಂದು ಕೇರಳದ ತಲ್ಲಿಶ್ಶೇರಿಯಲ್ಲಿ ಶ್ರೀಮತಿ ಸುಶೀಲ ಅವರನ್ನು ಉಪ ನೊಂದಾವಣಾ ಕಛೇರಿಯಲ್ಲಿ ಸರಳ ವಿವಾಹವಾಗಿ ಮಾದರಿಯಾದರು. ಅವರು ಕುಟುಂಬದಲ್ಲಿನ ಜೀವನ, ವೃತ್ತಿ–ಪ್ರವೃತ್ತಿಗಳಿಗೆ ಸಹಮತ, ಸಹಬಾಳ್ವೆಗೆ ಉಲ್ಲೇಖನೀಯವಾಗಿದ್ದರು.

ಜೂನ್ 4, 1956 ರಂದು ಬೆಂಗಳೂರು ಬಾರ್ ಕೌನ್ಸಿಲ್ ಗೆ ಆಯ್ಕೆಯಾಗಿ, ಬಳಿಕ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ 1999 ರಲ್ಲಿ ನಿಯೋಜಿತ ಹಿರಿಯ ನ್ಯಾಯವಾದಿಗಳೆಂದು ನೇಮಕವಾದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಎನ್.ಎಲ್. ಉಪಾಧ್ಯಾಯ, ಎಸ್. ಸೂರ್ಯನಾರಾಯಣರಾವ್, ಎಂ.ಎಸ್. ಕೃಷ್ಣನ್, ಎಂ.ಸಿ. ನರಸಿಂಹನ್ ರವರ ಪ್ರಕರಣದಲ್ಲಿ



ನ್ಯಾಯಾಲಯದಲ್ಲಿ ಹೋರಾಟ ಮಾಡಿ ನ್ಯಾಯ ದೊರಕಿಸಿ, ಸ್ವಾತಂತ್ರ್ಯ ಕಾಲದ ಸಾರ್ವಜನಿಕ ನ್ಯಾಯದ ಮಾದರಿಯನ್ನು ಮುಂದುವರಿಸಿದರು.

1975ರಲ್ಲಿ ಆಂತರಿಕ ತುರ್ತು ಪರಿಸ್ಥಿತಿ ಹೇರಿದ ಸರ್ವಾಧಿಕಾರದ ವಿರುದ್ಧವೂ ಪ್ರಜಾಪ್ರಭುತ್ವದ ಉಳಿವಿಗಾಗಿ ನ್ಯಾಯಾಂಗ ಹೋರಾಟವನ್ನು ಮುನ್ನಡೆಸಿದ ಅವರು, ತುರ್ತುಸ್ಥಿತಿಯಲ್ಲಿ ಹಿರಿಯ ಹೋರಾಟಗಾರರು ನಿಗೂಢವಾಗಿ ಬಂಧನಕ್ಕೊಳಗಾಗಿದ್ದಾಗ ಹೇಬಿಯೆಸ್ ಕಾರ್ಪಸ್ ಮೂಲಕ ಪ್ರಕರಣವನ್ನು ಬಯಲಿಗೆಳೆದರು. ನ್ಯಾಯಾಂಗದ ಒಳಗೆ, ಹೊರಗೆ ಕ್ರಿಯಾಶೀಲರಾಗಿ ಶ್ರಮಿಕರ ಪ್ರಾಣಮಿತ್ರರಾದರು.

ಪರಿಣಾಮವಾಗಿ 1964 ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಕಾರ್ಮಿಕರ ಸಂಘದ ಕಾನೂನು ಸಲಹೆಗಾರರಾಗಿ, ನಂತರ ಹೆಚ್.ಎಂ.ಟಿ, ಬಿ.ಇ.ಎಲ್, ಎಚ್.ಎ.ಎಲ್, ಐ.ಟಿ.ಐ ನಂತಹ ಬೃಹತ್ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರಿಗೆ ನೆರವಾದರು. ಇಂಡಿಯನ್ ಕಾಫಿ ವರ್ಕರ್ಸ್ ಕೋ–ಆಪರೇಟಿವ್ ಯೂನಿಯನ್, ಮೈಸೂರು ಕಮರ್ಷಿಯಲ್ ಎಂಪ್ಲಾಯಿಸ್ ಯೂನಿಯನ್, ಬಿನ್ನಿಮಿಲ್ ಕಾರ್ಮಿಕರ ಸಂಘ, ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಅಸೋಶಿಯೇಶನ್ ಅಧ್ಯಕ್ಷರಾಗಿ ನೇತೃತ್ವ ನೀಡಿದ್ದರು.


ಹಲವಾರು ಕಿರಿಯ ನ್ಯಾಯವಾದಿಗಳಿಗೆ ಸೂಕ್ತ ಮಾರ್ಗದರ್ಶನ, ತರಬೇತಿ ನೀಡಿ ಬೆಳೆಸಿದ್ದಾರೆ. ಅಂತಹ ತಂಡದಲ್ಲಿದ್ದ ವಿ. ಗೋಪಾಲಗೌಡ ರಂಥವರು ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿಯೂ ಬೆಳೆದು ಅನುಪಮ ಸೇವೆ ಸಲ್ಲಿಸಿರುವುದು ಹೆಮ್ಮೆಯ ಸಂಗತಿಯಾಗಿದೆ.

ಅವರು ಅಮೇರಿಕಾ, ಚೀನಾ, ಜಪಾನ್, ಹಾಗೂ ಭಾರತದ ವಿಸ್ತೃತ ಪ್ರವಾಸದಿಂದ ಅಪಾರ ಅನುಭವಗಳನ್ನು, ಜಾಗತಿಕ ವ್ಯಾಪ್ತಿಯ ಒಳನೋಟಗಳನ್ನು ಪಡೆದರು. 1986 ರಲ್ಲಿ ನ್ಯೂಯಾರ್ಕ್ ನಲ್ಲಿ ನಡೆದ 'ಅಂತರಾಷ್ಟ್ರೀಯ ಕಾನೂನು ಸಮ್ಮೇಳನ'ದಲ್ಲಿ ಭಾರತವನ್ನು ಪ್ರತಿನಿಧಿಸಿ ಭಾಗವಹಿಸಿದ್ದರು.

ಸುಬ್ಬರಾವ್ ಅವರು, ಕಾಸರಗೋಡಿನ ಗ್ರಾಮವೊಂದರಲ್ಲಿ ಕನ್ನಡ ಶಾಲೆ ಸ್ಥಾಪಿಸಿ ಕನ್ನಡ ಭಾಷೆಯ ಬೆಳವಣಿಗೆಗೆ ಕೊಡುಗೆ ನೀಡಿದ್ದಾರೆ. ಅಲ್ಲಿಯೇ ಸಾಮಾಜಿಕ ಬದಲಾವಣೆಯ ಕೇಂದ್ರವನ್ನು ಸ್ಥಾಪಿಸಲು ತಮ್ಮ ಇಳಿವಯಸ್ಸಿನಲ್ಲೂ ತೋರುತ್ತಿರುವ ಆಸಕ್ತಿ ದಲಿತ, ಆದಿವಾಸಿ, ಹಿಂದುಳಿದ, ಅಲ್ಪ ಸಂಖ್ಯಾತ ಸಮುದಾಯಗಳ ಬಗ್ಗೆ ಇರುವ ಅವರು ಕಾಳಜಿಯ ದ್ಯೋತಕ. ಅದಕ್ಕಾಗಿ ತಮ್ಮ ಭೂಮಿಯನ್ನು ದಾನ ಮಾಡಿ, ಟ್ರಸ್ಟ್ ಒಂದನ್ನು ಸ್ಥಾಪಿಸಿ ಮಾದರಿಯಾಗಿದ್ದಾರೆ.

ನಿರಂತರ ಪರಿಶ್ರಮ, ವಯೋಸಹಜ ಕಾಯಿಲೆಗಳಿಂದ ಅನಾರೋಗ್ಯ ಪೀಡಿತರಾದರೂ ಜೀವಿತದ ಕೊನೆಯವರೆಗೂ ಶ್ರಮಿಕರ, ಜನಸಾಮಾನ್ಯರ ಪರವಾಗಿ ಸದಾ ಕ್ರಿಯಾಶೀಲರಾಗಿ ಮುಂದಡಿಯಿಟ್ಟ ಅವರ ಬದ್ಧತೆ, ಹೋರಾಟದ ಚೈತನ್ಯ ನಮ್ಮೆಲ್ಲರಿಗೂ ಅತ್ಯಂತ ಸ್ಫೂರ್ತಿದಾಯಕವಾಗಿದೆ. ಇದೇ ವರ್ಷದ ಆರಂಭದಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಯಶಸ್ವಿಯಾಗಿ ಸಮಾರೋಪಗೊಂಡ ಐತಿಹಾಸಿಕವಾದ ಸಿ.ಐ.ಟಿ.ಯು.ವಿನ ಅಖಿಲ ಭಾರತ ಸಮ್ಮೇಳನದ ಸ್ವಾಗತ ಸಮಿತಿಯ ಗೌರವ ಅದ್ಯಕ್ಷರಾಗಿದ್ದರು.

ತಮ್ಮ ಜೀವನದ ಅಮೂಲ್ಯ ಸಮಯ, ಸಂಪನ್ಮೂಲಗಳನ್ನು ಜನತೆಗಾಗಿ ಸಮರ್ಪಿಸಿದ, ಮಾದರಿ ವ್ಯಕ್ತಿತ್ವದ ಹಿರಿಯ ಚೇತನವಾಗಿರುವ ಅವರು 'ಅಖಿಲ ಭಾರತ ವಕೀಲರ ಸಂಘ' (ಎ.ಐ.ಎಲ್.ಯು) ಕರ್ನಾಟಕ ಘಟಕದ ಸಂಸ್ಥಾಪಕ ಅಧ್ಯಕ್ಷರಾಗಿದ್ದರು. AILU ಕರ್ನಾಟಕ ರಾಜ್ಯ ಸಮಿತಿಯಲ್ಲಿ ಎರಡು ಅವಧಿಗೆ ಗೌರವಾಧ್ಯಕ್ಷರಾಗಿಯೂ ವಕೀಲರನ್ನು ಸಂಘಟಿಸುವಲ್ಲಿ ಹಾಗೂ ವಕೀಲರನ್ನು ಸಮಾಜಮುಖಿಯಾಗಿಸುವಲ್ಲಿ ಕೊಡುಗೆ ನೀಡಿದ್ದಾರೆ. ಅವರ ಅಗಲಿಕೆ ನ್ಯಾಯಾಂಗಕ್ಕೂ, ದುಡಿಯುವ ವರ್ಗದ ಹಾಗೂ ಸಾಮಾಜಿಕ ಚಳುವಳಿಗಳಿಗೂ ಅಪಾರ ನಷ್ಟವಾಗಿದೆ.



ಶ್ರದ್ಧಾಂಜಲಿ ಸಲ್ಲಿಕೆ

ಕಾರ್ಮಿಕ ವರ್ಗಕ್ಕಾಗಿ ಅವಿರತವಾಗಿ ಶ್ರಮಿಸಿದ ಹಿರಿಯ ಚೇತನ ಕೆ. ಸುಬ್ಬರಾವ್ ಅವರಿಗೆ ಸಿಐಟಿಯು ರಾಜ್ಯ ಸಮಿತಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯ ಹಾಗೂ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ಸೇರಿದಂತೆ ಸಿಐಟಿಯು ಮುಖಂಡರು ಸುದ್ದಿ ತಿಳಿಯುತ್ತಿದ್ದಂತೆ ಅಗಲಿದ ಹಿರಿಯ ಚೇತನಕ್ಕೆ ಅವರ ಮನೆಗೆ ತೆರಳಿ ಗೌರವ ನಮನ ಸಲ್ಲಿಸಿದರು.

ಹಾಗೆಯೇ ಸಿಪಿಐ(ಎಂ) ನ ಹಿರಿಯ ನಾಯಕ, ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಅದ್ಯಕ್ಷರಾದ ಜಿ.ಎನ್.ನಾಗರಾಜ್, ಜನವಾದಿ ಮಹಿಳಾ ಸಂಘಟನೆಯ ನಾಯಕಿ ಕೆ.ಎಸ್.ಲಕ್ಷ್ಮಿ, ಅಖಿಲ ಭಾರತ ವಕೀಲರ ಸಂಘದ ಶರಣಬಸವ ಮರದ್, ಟಿ.ಎನ್. ಶಿವಾರೆಡ್ಡಿ, ಮುಂತಾದವರು ಅಂತಿಮ ನಮನ ಸಲ್ಲಿಸಿದರು. ಸುಪ್ರಿಂ ಕೋರ್ಟ್ ನ ವಿಶ್ರಾಂತ ನ್ಯಾಯಮೂರ್ತಿಗಳಾದ ವಿ.ಗೋಪಾಲಗೌಡ, ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿಗಳಾದ ಹೆಚ್. ಎನ್.ನಾಗಮೋಹನದಾಸ್, ಕೆ.ಎ.ಟಿ.ಯ ಹಾಲಿ ನ್ಯಾಯಮೂರ್ತಿಗಳಾದ ಟಿ.ನಾರಾಯಣಸ್ವಾಮಿ ಮುಂತಾದ ಹಲವಾರು ಗಣ್ಯರು ಅಂತಿಮ ನಮನ ಸಲ್ಲಿಸಿದರು.

ದುಡಿಯುವ ಜನರ ಪ್ರಾಣಮಿತ್ರ ಜನಶಕ್ತಿ ಕನ್ನಡ ವಾರ ಪತ್ರಿಕೆ ಗೌರವಪೂರ್ವಕ ಶ್ರದ್ಧಾಂಜಲಿ ಸಲ್ಲಿಸಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ
ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ತುಮಕೂರು ಜಿಲ್ಲೆ, ಬಿದರೆಗುಡಿ ಗ್ರಾಮದಲ್ಲಿ ಜಾತಿ ದೌರ್ಜನ್ಯ

ಪೊಲೀಸರ ಶಾಂತಿ ಸಭೆಯಿಂದ ಪರಿಹಾರ ಸಾಧ್ಯವೇ?



2023ರ ಏಪ್ರಿಲ್ 8ರಂದು ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಬಿದರೆಗುಡಿಯಲ್ಲಿ ನಡೆದ ಜಾತ್ರೆಯ ಸಂದರ್ಭದಲ್ಲಿ ದಲಿತರ ಮೇಲೆ ಸವರ್ಣೀಯರ ಒಂದು ಗುಂಪು ದೌರ್ಜನ್ಯ ನಡೆಸಿದೆ. ಪೊಲೀಸರು ಕೇಸು ದಾಖಲಿಸಿಕೊಂಡು ದೌರ್ಜನ್ಯ ನಡೆಸಿದವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುವ ಬದಲಾಗಿ, ಗ್ರಾಮದಲ್ಲಿ ಶಾಂತಿ ಸಭೆ ನಡೆಸುವ ಮೂಲಕ ರಾಜಿ ಸಂಧಾನ ಮಾಡಲು ಯತ್ನಿಸಿದ್ದಾರೆ. ದೌರ್ಜನ್ಯ ಎಸಗಿದವರ ವಿರುದ್ಧ ಕ್ರಮ ಕೈಗೊಳ್ಳದೆ ಕೇವಲ ರಾಜಿ ಸಂಧಾನದಿಂದ ದಲಿತರ ಮೇಲಿನ ದೌರ್ಜನ್ಯ ತಡೆಯಲು ಸಾಧ್ಯವೇ ಎಂದು ಅಲ್ಲಿನ ದಲಿತರು ಪ್ರಶ್ನಿಸುತ್ತಿದ್ದಾರೆ.

ಕಳೆದ ವರ್ಷ 'ಮೊದಲು ದಲಿತರು ಈಡುಗಾಯಿ ಹೊಡೆದಿದ್ದಕ್ಕೆ'
ಈ ವರ್ಷ 'ಅನುಮತಿ ಪಡೆಯದೆ ಕಳಸ ಸಿಂಗಾರ ಮಾಡಿದಕ್ಕೆ'

ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಬಿದರೆಗುಡಿ ಗ್ರಾಮದಲ್ಲಿ ಪ್ರತಿ ವರ್ಷ ಬಿದರಾಂಬಿಕೆರ ಜಾತ್ರೆ ನಡೆಯುತ್ತದೆ. 64 ಹಳ್ಳಿಗಳು ಸೇರಿ ದೊಡ್ಡಮ್ಮ, ಚಿಕ್ಕಮ್ಮ ದೇವರ ಜಾತ್ರೆಯನ್ನು ಬಹಳ ವಿಜೃಂಬಣೆಯಿಂದ ಆಚರಿಸಲಾಗುತ್ತದೆ. ಈ ಗ್ರಾಮದಲ್ಲಿ ಎರಡು ದೇವಸ್ಥಾನಗಳಿದ್ದು, ದೊಡ್ಡಮ್ಮ ತಾಯಿ ದೇವಸ್ಥಾನಕ್ಕೆ ಸವರ್ಣೀಯ ಅರ್ಚಕರು ಹಾಗೂ ಚಿಕ್ಕಮ್ಮ ತಾಯಿ ದೇವಸ್ಥಾನಕ್ಕೆ ಪರಿಶಿಷ್ಟ ಜಾತಿಯ ಅರ್ಚಕರು ಪೂಜೆ ಸಲ್ಲಿಸುತ್ತಾರೆ. ಕಳೆದ ವರ್ಷದ ಜಾತ್ರೆ ಸಮಯದಲ್ಲಿ ಪಕ್ಕದ ಹಳ್ಳಿಯ ಮಡೆನೂರಿನ ಕೆಲವು ಸವರ್ಣೀಯರ ಒಂದು ಗುಂಪು, 'ನೀವು ಪರಿಶಿಷ್ಟ ಜಾತಿಯವರು, ನಿಮಗೆ ಮೊದಲು ಈಡುಗಾಯಿ ಹೊಡೆಯುವ ಹಕ್ಕಿಲ್ಲ' ಎಂದು ಕ್ಯಾತೆ ತೆಗೆದು ಗಲಾಟೆ ಮಾಡುತ್ತಾರೆ. ಈ ವಿಚಾರವಾಗಿ ಎರಡೂ ಜಾತಿಗಳ ಮಧ್ಯೆ ವಾಗ್ವಾದ ನಡೆಯುತ್ತದೆ. ಅಂದು ಊರಿನ ಮುಖಂಡರು ನ್ಯಾಯ ಪಂಚಾಯಿತಿ ಸೇರಿ, ರಾಜಿ ಸಂಧಾನ ಮಾಡಿಸಿದರು.

ಈ ವರ್ಷದ ಜಾತ್ರೆ ಸಮಯದಲ್ಲಿ ದಲಿತರು ನಮ್ಮ ಅನುಮತಿ ಪಡೆಯದೆ ಕಳಸ ಸಿಂಗಾರ ಮಾಡಿದ್ದಾರೆ ಎಂದು ಆರೋಪಿಸಿ ಸವರ್ಣೀಯರ ಒಂದು ಗುಂಪಿನವರಿಂದ ಸಣ್ಣ ವಾಗ್ವಾದ ಶುರುವಾಗುತ್ತದೆ. ಇದೇ ಸಮಯದಲ್ಲಿ ದಲಿತ ಅರ್ಚಕರ ಸೋದರ ಸಂಬಂಧಿಯೊಬ್ಬ ವೈಯಕ್ತಿಕ ದ್ವೇಷದಿಂದ ಎರಡೂ ಕೋಮುಗಳ ಮಧ್ಯೆ ವೈಷಮ್ಯ ಬಿತ್ತುತ್ತಾನೆ. ಇದೇ ಸಮಯಕ್ಕಾಗಿ ಕಾಯುತ್ತಿದ್ದ ಕೆಲವು ಸವರ್ಣೀಯರ ಗುಂಪು ಏಕಾಏಕಿ ದಲಿತ ಅರ್ಚಕನ ಮಗ ಲಿಂಗರಾಜು ಮೇಲೆ ದಾಳಿ ಮಾಡಿ, ಹಲ್ಲೆ ನಡೆಸುತ್ತಾರೆ. ಆತನಿಗೆ ಗಂಭೀರ ಗಾಯಗಳಾಗಿ ಆಸ್ಪತ್ರೆಗೆ ದಾಖಲಿಸಲಾಗುತ್ತದೆ. ಎಮ್.ಎಲ್ಸಿ ಸಹ ದಾಖಲಾಗಿದೆ. ಆದರೆ ಈ ದೌರ್ಜನ್ಯವನ್ನು ಹತ್ತಿಕ್ಕಲು ನೊಂದ ದಲಿತ ಕುಟುಂಬದ ಮೇಲೆ ಅವರ ಅಣ್ಣ ತಮ್ಮಂದಿರನ್ನೇ ಎತ್ತಿಕಟ್ಟಿ ಹಲವಾರು ರೀತಿಯ ಬೆದರಿಕೆಗಳನ್ನೊಡ್ಡಿ ಕೇಸು ದಾಖಲಿಸದಂತೆ ಒತ್ತಡ ಹೇರಲಾಗಿದೆ. ಮತ್ತು ಪೊಲೀಸ್ ಇಲಾಖೆ ಕೇವಲ ರಾಜಿ ಸಂಧಾನ ಮಾಡಿ ಇಡೀ ಪ್ರಕರಣವನ್ನು ಅಂತ್ಯಗೊಳಿಸಿದ್ದಾರೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆಯನ್ನು ಸಂವಿಧಾನ ಒದಗಿಸಿದ್ದರೂ, ಈ ಕಾಯಿದೆಯನ್ನು ಸಮರ್ಥವಾಗಿ ಬಳಸಿ, ಅಪರಾಧಿಗಳನ್ನು ಶಿಕ್ಷೆಗೆ ಒಳಪಡಸುವ ಮೂಲಕ ದಲಿತರ ಮೇಲಿನ ದೌರ್ಜನ್ಯಗಳನ್ನು ಹತ್ತಿಕ್ಕುವ ಪಯತ್ನಕ್ಕೆ ಪೊಲೀಸರು ಮುಂದಾಗುವುದಿಲ್ಲ ಎಂಬುವುದಕ್ಕೆ ಈ ಘಟನೆ ಸಾಕ್ಷಿಯಾಗಿದೆ ಎಂದು ದಲಿತ ಮುಖಂಡರು ಆರೋಪಿಸುತ್ತಾರೆ.



ದೌರ್ಜನ್ಯದಿಂದ ಪೆಟ್ಟು ತಿಂದ ದಲಿತ ಯುವಕ ಲಿಂಗರಾಜು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಂದರ್ಭದಲ್ಲಿ ತನ್ನನ್ನು ಭೇಟಿಯಾದ ಮಾಧ್ಯಮಗಳ ಜತೆ ನಡೆದ ಘಟನೆಯನ್ನು ವಿವರಿಸಿದ್ದಾನೆ. ತನ್ನ ಮೇಲೆ ಸವರ್ಣಿಯರು ನಡೆಸಿದ ದಾಳಿಯ ಕುರಿತು ವಿವರಿಸಿದ್ದಾನೆ. ಆಸ್ಪತ್ರೆಯ ವೈದ್ಯ ರು ಸಹ ಗಾಯಗೊಂಡಿರುವ ಬಗ್ಗೆ ವರದಿ ನೀಡಿದ್ದಾರೆ. ಇಷ್ಟೆಲ್ಲ ಸಾಕ್ಷಿಗಳಿದ್ದರೂ, ದೌರ್ಜನ್ಯಕ್ಕೊಳಗಾದ ದಲಿತರ ಕುಟುಂಬದಲ್ಲಿರುವ ಕೊರತೆಗಳನ್ನು ಬಳಸಿಕೊಂಡು ಕಾನೂನು ಕ್ರಮ ಕೈಗೊಳ್ಳದೆ, ಸಂಧಾನದ ಮೂಲಕ ನ್ಯಾಯ ಒದಗಿಸುತ್ತೇವೆ ಎಂದು ಹೇಳುವುದು ಎಷ್ಟು ಸಮಂಜಸವಾಗಿದೆ ಎಂದು ದಲಿತರು ಪ್ರಶ್ನಿಸಿದ್ದಾರೆ.

ಅಸ್ಪೃಶ್ಯತೆ ಆಚರಣೆ, ದೌರ್ಜನ್ಯ, ಸಾಮಾಜಿಕ ಬಹಿಷ್ಕಾರ, ಇತ್ಯಾದಿ ಪ್ರಕರಣಗಳಲ್ಲಿ ಪೊಲೀಸರು ಶಾಂತಿ ಸಬೆ ನಡೆಸುವ ಮೂಲಕ ಪಂಚಾಯಿತಿ ನಡೆಸಿ ರಾಜಿ ಸಂಧಾನ ಮಾಡಲು ಮುಂದಾಗುತ್ತಾರೆ. ಇಂತಹ ಶಾಂತಿ ಸಭೆಗಳನ್ನು ಮಾಡುವುದರಿಂದ ದಲಿತರಿಗೆ ರಕ್ಷಣೆ ಕೊಡಲು ಸಾಧ್ಯವೇ? ಸಂವಿಧಾನದ ಹಕ್ಕುಗಳನ್ನು ದಲಿತರಿಗೆ ಮುಟ್ಟಿಸುವಲ್ಲಿ ಹೇಗೆ ವಿಫಲತೆ ಕಾಣುತ್ತದೆ ಎಂಬುದನ್ನು ಇಂತಹ ಘಟನೆಯಿಂದ ನಾವು ಕಾಣಬಹುದು. ಸಂಧಾನ, ಹೊಂದಾಣಿ ಈ ಪ್ರಯತ್ನಗಳು ಆಗಬೇಕು ನಿಜ. ಎಲ್ಲ ಜನರು ಒಟ್ಟಾಗಿ ಜೀವನ ನಡೆಸುವ, ಸಮಾನವಾಗಿ ಬದುಕುವ ಪರಿಸ್ಥಿತಿ ನಿರ್ಮಾಣವಾಗಬೇಕು. ಈ ಕಳಕಳಿ ಸಂಧಾನ ಮಾಡಿದಂತಹ ತಹಶೀಲ್ದಾರರು, ಪೊಲೀಸರಿಗೂ ಇದೆ ಎಂಬುದು ನಮಗೆ ಅರ್ಥವಾಗುತ್ತದೆ. ಆದರೆ ಈ ರೀತಿಯ ಪಂಚಾಯತಿಗಳಿಂದ, ಶಾಂತಿಸಭೆಗಳಿಂದ ದಲಿತರ ಮೇಲಿನ ದೌರ್ಜನ್ಯಗಳು ಮುಂದೆ ಆಗುವುದಿಲ್ಲ ಎಂಬುದನ್ನು ಖಾತ್ರಿಪಡಿಸಲು ಸಾಧ್ಯವೇ ಎಂದವರು ಪ್ರಶ್ನೆ ಮಾಡುತ್ತಾರೆ.

ಇಲ್ಲಿ ದೌರ್ಜನ್ಯಕ್ಕೆ ಒಳಗಾದ ದಲಿತ ಸಮುದಾಯಕ್ಕೆ ಯಾವುದೇ ರೀತಿ ಕಾನೂನಿನ ರಕ್ಷಣೆಯಾಗಲೀ ಸಾಮಾಜಿಕ ರಕ್ಷಣೆಯಾಗಲೀ ಸಿಗುತ್ತಿಲ್ಲ, ಒತ್ತಡ ಹೇರಿ ವ್ಯವಸ್ಥಿತವಾಗಿ ಕೇಸು ದಾಖಲಾಗದ ಹಾಗೆ ನೋಡಿಕೊಂಡು ರಾಜಿ ಪಂಚಾಯಿತಿ ಮಾಡಲು ಯತ್ನಿಸಲಾಗಿದೆ. ಕಠಿಣವಾದ ಕಾನೂನು ಕ್ರಮ ಜರುಗಿಸಿ ಶಿಕ್ಷೆಯಾದರೆ, ಕಾನೂನಿನ ಭಯ ದೌರ್ಜನ್ಯವನ್ನು ತಡೆಯುತ್ತದೆ ಎಂಬುದು ನಮ್ಮ ದೃಢವಾದ ನಂಬಿಕೆಯಾಗಿದೆ ಎಂದವರು ಹೇಳುತ್ತಾರೆ.

DHS ಸಂಘಟನೆಯ ನಿಯೋಗ ಭೇಟಿ

ಸುದ್ದಿ ತಿಳಿದ ದಲಿತ ಹಕ್ಕುಗಳ ಸಮಿತಿ (DHS) ಸಂಘಟನೆಯ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ, ತುಮಕೂರು ಜಿಲ್ಲಾ ಸಂಚಾಲಕರಾದ ರಾಜು ವೆಂಕಟಪ್ಪ, ಪ್ರಾಂತ ರೈತ ಸಂಘದ ತುಮಕೂರು ಜಿಲ್ಲಾ ಅಧ್ಯಕ್ಷರಾದ ಚೆನ್ನಬಸಪ್ಪ, ಭರತ್ ನಾಗಸಂದ್ರ, ವೆಂಕಟೇಶ್ ಲಾಳಾಪುರ ಇರುವ ನಿಯೋಗ ದೌರ್ಜನ್ಯಕ್ಕೆ ಒಳಗಾದ ಲಿಂಗರಾಜು ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ, ಕುಟುಂಬಕ್ಕೆ ಧೈರ್ಯತುಂಬಿದರು. ಪ್ರಕರಣವನ್ನು ಕಾನೂನು ರೀತಿ ನಿರ್ವಹಿಸುವಂತೆ ಮತ್ತು ದೌರ್ಜನ್ಯಕ್ಕೆ ಒಳಗಾದ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕೆಂದು ಸರ್ಕಾರ ವನ್ನು ಒತ್ತಾಯಿಸಿದರು.

ವರದಿ:ರಾಜು ವೆಂಕಟಪ್ಪ



ಬಿಜೆಪಿಯನ್ನು ಸೋಲಿಸುವುದೇ ನಿಜವಾದ ದೇಶಭಕ್ತಿ – ಡಾ.ಕೆ. ಪ್ರಕಾಶ್

'ತಾನು ತಿನ್ನುವುದಿಲ್ಲ ಬೇರೆಯವರಿಗೆ ತಿನ್ನಲಿಕ್ಕೆ ಬಿಡುವುದಿಲ್ಲ' ಎಂದು ಹೇಳಿದ ಸರಕಾರದಲ್ಲಿ ಎಲ್ಲವೂ ತಿನ್ನುವುದೇ ಆಗಿದೆ. ಭ್ರಷ್ಟಾಚಾರ ಮಿತಿ ಮೀರಿದೆ. 40 ಪರ್ಸೆಂಟ್ ಕಮಿಷನ್ ಸರಕಾರ ಎಂಬ ಖ್ಯಾತಿಯನ್ನು ರಾಜ್ಯದ ಬಿಜೆಪಿ ಸರಕಾರ ಪಡೆದಿದೆ. ಬಿಜೆಪಿ ಸರಕಾರಗಳ ಸಂವಿಧಾನ ವಿರೋಧಿ ನಿಲುವುಗಳು, ಕೋಮುವಾದಿ ಆಚರಣೆಗಳು ದೇಶದ ಪ್ರಜಾಪ್ರಭುತ್ವವನ್ನು ಅಪಾಯಕ್ಕೊಡ್ಡಿದೆ ಎಂದು ಆರೋಪಿಸಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಡಾ. ಕೆ. ಪ್ರಕಾಶ್ ಅವರು, ಪುಲ್ವಾಮಾ ದಾಳಿಯ ವಿಷಯದಲ್ಲಿ ನರೇಂದ್ರ ಮೋದಿ ಸರಕಾರದ ಮೇಲೆ ಜಮ್ಮು ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲ್ಲಿಕ್ ಮಾಡಿರುವ ಆರೋಪ ಬಿಜೆಪಿಯ ದೇಶಪ್ರೇಮವನ್ನು ಬಯಲುಗೊಳಿಸಿದೆ. ಪ್ರಧಾನಿಗೆ ಭ್ರಷ್ಟಾಚಾರದ ವಿಷಯದಲ್ಲಿ ಯಾವುದೇ ಆಸಕ್ತಿ ಇಲ್ಲ ಎಂದು ಸತ್ಯಪಾಲ್ ಮಲ್ಲಿಕ್ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ಜನಸಾಮಾನ್ಯರು, ಕಾರ್ಮಿಕರು, ಮಹಿಳೆಯರು ಬಿಜೆಪಿ ಆಡಳಿತದಲ್ಲಿ ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ಪಿಎಸ್ಐ ಹಗರಣ, ಕೋವಿಡ್ ಸಂಬಂಧಿತ ಅವಶ್ಯಕ ಔಷಧಿ ಮತ್ತು ಇತರೆ ಪರಿಕರಗಳ ಖರೀದಿ ಹಗರಣ, ಬಿಡಿಎ ಹಗರಣ, ಪ್ರೀಡಮ್ ಆಪ್ ಹಗರಣ ಹೀಗೆ ರಾಜ್ಯದ ಬಿಜೆಪಿ



ಆಡಳಿತದ ಅವಧಿಯಲ್ಲಿ ಬಹಳಷ್ಟು ಹಗರಣಗಳು ನಡೆದಿವೆ. ಇಂತಹ ಬಿಜೆಪಿಯನ್ನು ಮುಂಬರುವ ಚುನಾವಣೆಯಲ್ಲಿ ಸೋಲಿಸುವುದೇ ನಿಜವಾದ ದೇಶಭಕ್ತಿ ಎಂದು ಹೇಳಿದರು. ಅವರು ಏಪ್ರಿಲ್ 18ರಂದು ಮಂಗಳೂರು ನಗರದ ಡಾನ್ ಬಾಸ್ಕೋ ಸಭಾಂಗಣದಲ್ಲಿ ನಡೆದ ಸಿಪಿಐ(ಎಂ) ಮತ್ತು ಸಿಪಿಐ ಜಂಟಿ ರಾಜಕೀಯ ಸಮಾವೇಶದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದರು.

ಇನ್ನೊಬ್ಬ ಮುಖ್ಯ ಅತಿಥಿಯಾಗಿದ್ದ ಸಿಪಿಐ ರಾಜ್ಯ ಸಮಿತಿಯ ಸಹ ಕಾರ್ಯದರ್ಶಿ ಬಿ. ಅಮ್ಜದ್ ಮಾತನಾಡಿ, ಸೌಹಾರ್ದ ಬದುಕಿನ ಮಹತ್ವದ ಬಗ್ಗೆ ವಿವರಿಸಿ ಬಿಜೆಪಿಯನ್ನು ಸೋಲಿಸಲು ಶಕ್ತಿಮೀರಿ ಶ್ರಮಿಸಲು ಕರೆ ನೀಡಿದರು.

ಅಧ್ಯಕ್ಷ ಮಂಡಳಿಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ. ಯಾದವ ಶೆಟ್ಟಿ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಬಿ. ಶೇಖರ ರವರು ಉಪಸ್ಥಿತರಿದ್ದರು. ಸಮಾವೇಶದಲ್ಲಿ ಜಂಟಿ ಘೋಷಣೆಯನ್ನು ಮಂಡಿಸಿದ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಮುನೀರ್ ಕಾಟಿಪಳ್ಳ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿಜೆಪಿಯನ್ನು ಸೋಲಿಸುವ ಏಕೈಕ ಉದ್ದೇಶದಿಂದ ಎಡ ಪಕ್ಷಗಳು ಈ ಬಾರಿಯ ಚುನಾವಣೆಯಲ್ಲಿ ಸ್ಪರ್ಧಿಸದಿರುವ, ಆ ಮೂಲಕ ಜಾತ್ಯಾತೀತ ಪಕ್ಷಗಳ ಅಭ್ಯರ್ಥಿಗಳ ಗೆಲುವಿಗೆ ದುಡಿಯುವ ನಿರ್ಧಾರವನ್ನು ವಿವರಿಸಿದರು. ಎರಡೂ ಪಕ್ಷಗಳ ನೂರಾರು ಕಾರ್ಯಕರ್ತರು ಸಮಾವೇಶದಲ್ಲಿ ಉಪಸ್ಥಿತರಿದ್ದರು.

ವೇದಿಕೆಯಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ವಸಂತ ಆಚಾರಿ, ಸಿಪಿಐ ಹಿರಿಯ ಮುಖಂಡರಾದ ವಿ. ಕುಕ್ಯಾನ್ ಉಪಸ್ಥಿತರಿದ್ದರು. ಸೀತಾರಾಮ ಬೇರಿಂಜೆ ಸ್ವಾಗತಿಸಿ ಸುನಿಲ್ ಕುಮಾರ್ ಬಜಾಲ್ ಧನ್ಯವಾದವಿತ್ತರು.

ವರದಿ: ವಾ.ಉ.

ಡಿಸೆಂಬರ್ 2019 ರಲ್ಲಿ ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಪ್ರದೇಶದಲ್ಲಿ ಸಿಆರ್‌ಪಿಎಫ್ ಸಿಬ್ಬಂದಿಯನ್ನು ಹೊತ್ತೊಯ್ಯುತ್ತಿದ್ದ ವಾಹನಗಳ ಮೇಲೆ ಭಯೋತ್ಪಾದಕ ದಾಳಿ ನಡೆದಿತ್ತು. 40 ಸೈನಿಕರು ಪ್ರಾಣ ಕಳೆದುಕೊಂಡು ದೇಶವನ್ನೇ ಬೆಚ್ಚಿ ಬೀಳಿಸಿದ ಭೀಕರ ಘಟನೆಯನ್ನು ರಾಜಕೀಯ ಲಾಭ ಪಡೆಯಲು ಬಿಜೆಪಿ ಪ್ರಯತ್ನಿಸಿತು. ಜನರ ಗಮನವನ್ನು ಬೇರೆಡೆಗೆ ತಿರುಗಿಸುವ ಮೂಲಕ, ಮೋದಿ ಸರ್ಕಾರ ದೇಶಪ್ರೇಮಿ ಎಂಬ ಬಿರುದನ್ನು ಪಡೆಯಿತು. ಆದರೆ 40 ಸೈನಿಕರ ಪ್ರಾಣಹಾನಿಗೆ ಮೋದಿ ಸರಕಾರವೇ ಹೊಣೆ ಎಂದು ಅವರ ಆಪ್ತವಲಯದ ವ್ಯಕ್ತಿಯೊಬ್ಬರು ಸಾರ್ವಜನಿಕವಾಗಿ ಬಹಿರಂಗಪಡಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಮಾಜಿ ರಾಜ್ಯಪಾಲರು ಖ್ಯಾತ ಪತ್ರಕರ್ತ ಕರಣ್ ಥಾಪರ್ ಅವರೊಂದಿಗೆ ದಿ ವೈರ್‌ಗೆ ನೀಡಿದ ಸಂದರ್ಶನದಲ್ಲಿ ಮೋದಿ ಆಡಳಿತದ ಅರಾಜಕತೆಗಳನ್ನು ಬಹಿರಂಗಪಡಿಸಿದ್ದಾರೆ.

ಪುಲ್ವಾಮಾ ಭಯೋತ್ಪಾದನಾ ದಾಳಿಗೆ ಮೋದಿ ಸರ್ಕಾರವೇ ಹೊಣೆ

ಸತ್ಯಪಾಲ್ ಮಲಿಕ್, ಸಂದರ್ಶನ

ಕರಣ್ ಥಾಪರ್: ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ವಿಸರ್ಜನೆಯಾದ ಮೂರು ತಿಂಗಳ ನಂತರ ಪುಲ್ವಾಮಾ ದಾಳಿ ನಡೆದಿದೆ. ಸಿಆರ್‌ಪಿಎಫ್ ಸಿಬ್ಬಂದಿಯನ್ನು ರಸ್ತೆಯ ಮೂಲಕ ಕರೆದೊಯ್ಯುವುದು ಅಪೇಕ್ಷಣೀಯವಲ್ಲ ಎಂದು ಹಲವಾರು ಗುಪ್ತಚರ ಮಾಹಿತಿ ನೀಡಿದ ನಂತರವೂ ನಮ್ಮ ಸೈನಿಕರನ್ನು ರಸ್ತೆಯ ಮೂಲಕ ಕರೆದೊಯ್ಯಲಾಯಿತು. ಸಾವಿರಕ್ಕೂ ಹೆಚ್ಚು ಸೈನಿಕರ ಮೇಲೆ ದಾಳಿ ನಡೆಸಲಾಯಿತು. ಆಗ ನೀವು ಆ ರಾಜ್ಯದ ರಾಜ್ಯಪಾಲರಾಗಿದ್ದಿರಿ. ಇದನ್ನು ಹೇಗೆ ಅನುಮತಿಸಲಾಯಿತು?

ಸತ್ಯಪಾಲ್ ಮಲಿಕ್: ನಾನು ನಿಮಗೆ ಸತ್ಯವನ್ನು ಹೇಳುತ್ತಿದ್ದೇನೆ. ಸಿಆರ್‌ಪಿಎಫ್ ತನ್ನ ಸೈನಿಕರನ್ನು ಕರೆದೊಯ್ಯಲು ವಿಮಾನಗಳನ್ನು ಕಳುಹಿಸಿಕೊಡುವಂತೆ ಗೃಹ ಸಚಿವಾಲಯಕ್ಕೆ ಕೇಳಿತ್ತು. ಆದರೆ, ಸಿಆರ್‌ಪಿಎಫ್ ನ ಈ ಕೋರಿಕೆಯನ್ನು ತಿರಸ್ಕರಿಸಲಾಯಿತು. ಕೇಳಿದ್ದರೆ ನಾನೇ ವ್ಯವಸ್ಥೆ ಮಾಡುತ್ತಿದ್ದೆ. ಅವರಿಗೆ ಕೇವಲ 5 ವಿಮಾನಗಳು ಬೇಕಾಗಿದ್ದವು. ಅವರು ವಿಮಾನಗಳನ್ನು ಒದಗಿಸಿದ್ದರೆ ನಮ್ಮ ಸೈನಿಕರ ಪ್ರಾಣ ಉಳಿಸಬಹುದಿತ್ತು. ಇದನ್ನು ನಾನು ಪ್ರಧಾನಿಯವರಿಗೆ ಹೇಳಿದ್ದೇನೆ. ನಮ್ಮ ತಪ್ಪಿನಿಂದ ಈ ಘಟನೆ ನಡೆದಿದೆ ಎಂದು ಹೇಳಿದ್ದೇನೆ. ಈ ಮಾತನ್ನು ಹೇಳಬೇಡಿ, ಬಾಯಿ ಮುಚ್ಚಿಕೊಂಡು ಇರುವಂತೆ ಮೋದಿ ನನಗೆ ಹೇಳಿದರು. ಪ್ರಧಾನಿ ಮಾತ್ರವಲ್ಲ, ಈ ಬಗ್ಗೆ ಏನನ್ನೂ ಹೇಳಬೇಡಿ ಎಂದು ರಕ್ಷಣಾ ಸಲಹೆಗಾರ ಅಜಿತ್ ದೋವಲ್ ಹೇಳಿದ್ದಾರೆ. ನಾನು ಹೆಚ್ಚು ಹೇಳಲು ಬಯಸುತ್ತೇನೆ. ಅವರು ಅದನ್ನು ನಿಭಾಯಿಸಿದ ರೀತಿ, ನಮ್ಮ ಸೈನಿಕರ ಮೇಲೆ ದಾಳಿ ಮಾಡಿದ ಈ ಘಟನೆಯಲ್ಲಿ ನಾವು ಎಲ್ಲಿ ತಪ್ಪಿದ್ದೇವೆ ಎಂದು ನೋಡುವ ಬದಲು, ಪಾಕಿಸ್ತಾನದ ವಿರುದ್ಧ ಅದನ್ನು ತಿರುಗಿಸಲು ನಿರ್ಧರಿಸಿದರು.



ನನಗೆ ಚೆನ್ನಾಗಿ ನೆನಪಿದೆ. ಮೋದಿ ರಾಷ್ಟ್ರೀಯ ಅರಣ್ಯ ಕಾರ್ಬೆಟ್ ಪಾರ್ಕ್‌ನಲ್ಲಿ ಶೂಟಿಂಗ್ ಮಾಡುತ್ತಿದ್ದರು. ಅಲ್ಲಿ ಫೋನ್ ಸಿಗ್ನಲ್ ಇಲ್ಲ. ಅವರು ಹೊರಗೆ ಬಂದು ಏನಾಯಿತು ಎಂದು ಕೇಳಿದರು. ನಮ್ಮ ತಪ್ಪಿನಿಂದಲೇ ಪುಲ್ವಾಮಾ ದಾಳಿ ನಡೆದಿದೆ ಎಂದು ಹೇಳಿದ್ದೆ. ನಾವು ವಿಮಾನಗಳನ್ನು ಒದಗಿಸಿದ್ದರೆ, ನಾವು ನಮ್ಮ ಸೈನಿಕರ ಪ್ರಾಣವನ್ನು ಉಳಿಸಬಹುದಿತ್ತು ಎಂದು ನಾನು ಅವರಿಗೆ ಹೇಳಿದೆ. ಈ ಬಗ್ಗೆ ಯಾರ ಬಳಿಯೂ ಮಾತನಾಡಬೇಡಿ ಎಂದು ಹೇಳಿದರು.

ಥಾಪರ್: ನಮ್ಮ ತಪ್ಪನ್ನು ಸರಿಪಡಿಸುವ ಬದಲು ಅವರು ಈ ದುರಂತ ಘಟನೆಯನ್ನು ಪಾಕಿಸ್ತಾನದ ಮೇಲೆ ದಾಳಿ ಮಾಡಲು ಮತ್ತು ಆ ಮೂಲಕ ಚುನಾವಣಾ ಲಾಭವನ್ನು ಪಡೆಯಲು ಬಳಸಿದ್ದಾರೆ ಎಂದು ನೀವು ಹೇಳುತ್ತೀರಾ?

ಸತ್ಯಪಾಲ್: ಹೌದು, ಅದು ಹಾಗೆಯೇ ಆಗಿದೆ.

ಥಾಪರ್: ಪ್ರಧಾನಿಗೆ ಹೇಳಿದ ಮೇಲೂ ಹೀಗೆ ನಡೆದುಕೊಂಡಿದ್ದಾರಾ?

ಸತ್ಯಪಾಲ್: ಹೌದು. ನನಗೆ ಚೆನ್ನಾಗಿ ನೆನಪಿದೆ. ಮೋದಿ ರಾಷ್ಟ್ರೀಯ ಅರಣ್ಯ ಕಾರ್ಬೆಟ್ ಪಾರ್ಕ್‌ನಲ್ಲಿ ಶೂಟಿಂಗ್ ಮಾಡುತ್ತಿದ್ದರು. ಅಲ್ಲಿ ಫೋನ್ ಸಿಗ್ನಲ್ ಇಲ್ಲ. ಅವರು ಹೊರಗೆ ಬಂದು ಏನಾಯಿತು ಎಂದು ಕೇಳಿದನು. ನಮ್ಮ ತಪ್ಪಿನಿಂದಲೇ ಪುಲ್ವಾಮಾ ದಾಳಿ ನಡೆದಿದೆ ಎಂದು ಹೇಳಿದ್ದೆ. ನಾವು ವಿಮಾನಗಳನ್ನು ಒದಗಿಸಿದ್ದರೆ, ನಾವು ನಮ್ಮ ಸೈನಿಕರ ಪ್ರಾಣವನ್ನು ಉಳಿಸಬಹುದಿತ್ತು ಎಂದು ನಾನು ಅವರಿಗೆ ಹೇಳಿದೆ. ಈ ಬಗ್ಗೆ ಯಾರ ಬಳಿಯೂ ಮಾತನಾಡಬೇಡಿ ಎಂದು ಹೇಳಿದರು.

ಥಾಪರ್: ನೀವು ಯೂಟ್ಯೂಬ್ ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ, ನಮ್ಮ ಸೈನಿಕರು ಪ್ರಯಾಣಿಸುವ ರಸ್ತೆಯನ್ನು ಸರಿಯಾಗಿ ಮೇಲ್ವಿಚಾರಣೆ ಮಾಡಲಾಗಿಲ್ಲ ಮತ್ತು ರಕ್ಷಿಸಲಾಗಿಲ್ಲ ಎಂದು ಹೇಳಿದ್ದೀರಿ. ಅದನ್ನು ವಿವರಿಸುವಿರಾ?

ಸತ್ಯಪಾಲ್: ಆ ಮಾರ್ಗದಲ್ಲಿ 8 ರಿಂದ 9 ಕೂಡು ರಸ್ತೆಗಳಿದ್ದವು. ಯಾವ ಕೂಡು ರಸ್ತೆಯೂ ಸುರಕ್ಷಿತವಲ್ಲ. ಆ ಮಾರ್ಗಗಳಲ್ಲಿ ಭಯೋತ್ಪಾದಕರ ದಾಳಿಯ ಅಪಾಯವಿತ್ತು. ಆಗಲೂ ಭದ್ರತೆ ಇಲ್ಲ. ಯಾವುದೇ ಕೂಡು ರಸ್ತೆಯಲ್ಲೂ ನಿಗಾ ಇಡಲಾಗಲಿಲ್ಲ. ಭದ್ರತೆಗಾಗಿ ಯಾರನ್ನೂ ಅಲ್ಲಿ ನಿಯೋಜಿಸಲಾಗಿಲ್ಲ. ಇದು ಸಿಆರ್‌ಪಿಎಫ್ ಆಡಳಿತದ ತಪ್ಪು. ಅವರೆಲ್ಲ ಅವರವರ ಉಸ್ತುವಾರಿಯಲ್ಲಿದ್ದರು. ಅವರ ಮೇಲ್ವಿಚಾರಣೆ ಇಲ್ಲ. ಸುತ್ತಲೂ ಭದ್ರತಾ ವ್ಯವಸ್ಥೆ ಇಲ್ಲ. ನಾನು ಈ ದೌರ್ಬಲ್ಯವನ್ನು ಸಂಬಂಧಪಟ್ಟವರಿಗೆ ಹೇಳಿದೆ. ಇದು ಗೃಹ ಸಚಿವಾಲಯ ಮತ್ತು ಅಖಕಈ ಆಡಳಿತದ ತಪ್ಪು; ಉದಾಸೀನತೆ ನಮ್ಮ ಅದಕ್ಷತೆ ನಮ್ಮ 40 ಅಮೂಲ್ಯ ಸೈನಿಕರ ಪ್ರಾಣವನ್ನು ಬಲಿ ತೆಗೆದುಕೊಂಡಿತು.

ಥಾಪರ್: ಈ ಪುಲ್ವಾಮಾ ದಾಳಿಯನ್ನು ಪಾಕಿಸ್ತಾನದ ವಿರುದ್ಧ ಚುನಾವಣಾ ಲಾಭ ಪಡೆಯಲು ಆಡಳಿತಗಾರರು ನಿರ್ಧರಿಸಿದ್ದಾರೆ ಎಂದು ನೀವು ಹೇಳಿದ್ದೀರಿ. ಈ ದಾಳಿಗೆ ಪಾಕಿಸ್ತಾನ ಸೇನೆಯೋ ಅಥವಾ ಪಾಕಿಸ್ತಾನಿ ಭಯೋತ್ಪಾದಕನೋ ಹೊಣೆಗಾರರೇ?

ಸತ್ಯಪಾಲ್: ಪುಲ್ವಾಮಾ ದಾಳಿಯಲ್ಲಿ 300 ಕೆಜಿ ಸ್ಫೋಟಕಗಳನ್ನು ಬಳಸಲಾಗಿದೆ. ಕಾರಿನಲ್ಲಿ ಸ್ಫೋಟಕಗಳು ತುಂಬಿದ್ದವು. ಈ ಪ್ರಮಾಣದ ಸ್ಫೋಟಕಗಳು ಇಲ್ಲಿ ಸಿಗುವ ಸಾಧ್ಯತೆ ಇಲ್ಲ. ಈ ಸ್ಫೋಟಕಗಳನ್ನು ಸಂಘಟಿಸಿ ಇಲ್ಲಿಗೆ ಕಳುಹಿಸಿದ್ದು ಪಾಕಿಸ್ತಾನವೇ. ಆದರೆ ನಮ್ಮ ಅಸಮರ್ಥತೆ ಮತ್ತು ಉದಾಸೀನತೆಯೇ ಆ ಸ್ಫೋಟಕಗಳನ್ನು ಸ್ಫೋಟಿಸಿ ಪ್ರಾಣಹಾನಿಯಾಗುವಂತೆ ಮಾಡುತ್ತದೆ. ಕಾರು 10 ದಿನಗಳಿಂದ ಆ ಪ್ರದೇಶದಲ್ಲಿ ಓಡಾಡಿಕೊಂಡಿತ್ತು. ಯಾರಿಗೂ ಎಲ್ಲೂ ಸಿಗಲಿಲ್ಲ. ಅದನ್ನು ಎಲ್ಲಿಯೂ ತಡೆಯಲಿಲ್ಲ. ಇದು ನೂರಕ್ಕೆ ನೂರು ಗುಪ್ತಚರ ಇಲಾಖೆಯ ತಪ್ಪು. ಮತ್ತು ನಮ್ಮ ತಪ್ಪು! ನಮ್ಮ ವ್ಯವಸ್ಥೆಯ ತಪ್ಪು. ನಾನು ನನ್ನನ್ನು ಸೇರಿಸಿಕೊಳ್ಳುತ್ತೇನೆ. ಸರ್ಕಾರಕ್ಕೆ ಎಲ್ಲ ವಿವರ ಗೊತ್ತಿದೆ. ಆದರೆ ಅದನ್ನು ಮುಚ್ಚಿಡಲು ಸರ್ಕಾರ ನಿರ್ಧರಿಸಿದರೆ, ಅದು ಹೇಗೆ ಹೊರಬರುತ್ತದೆ!

ಆರ್ಟಿಕಲ್ 370 ರದ್ದತಿ ವಿಷಯ ಒಂದು ದಿನದ ಹಿಂದೆಯಷ್ಟೇ ತಿಳಿಯಿತು

ಥಾಪರ್: ಆಗಸ್ಟ್ 5, 2019ಕ್ಕೆ ಬರೋಣ. ಅದೇ ದಿನ ಕಾಶ್ಮೀರಕ್ಕೆ ಸಂಬಂಧಿಸಿದ 370 ನೇ ವಿಧಿಯನ್ನು ರದ್ದುಗೊಳಿಸಲಾಯಿತು. ಅದಕ್ಕೂ ಎರಡು ದಿನಗಳ ಹಿಂದೆ ನೀವು ನೀಡಿದ ಸಂದರ್ಶನದಲ್ಲಿ ಜಮ್ಮು ಮತ್ತು

ಪುಟ 10 ಕ್ಕೆ

ರಿಲಯನ್ಸ್ ಪರವಾಗಿ ಸಂಘಪರಿವಾರ ಲಾಭಿ



ಥಾಪರ್: ಇನ್ನೊಂದು ಪ್ರಮುಖ ವಿಚಾರಕ್ಕೆ ಬರೋಣ. ನೀವು ನೀಡಿದ ಸಂದರ್ಶನದಲ್ಲಿ ಆರೆಸ್ಸೆಸ್ ಮುಖಂಡ ರಾಮ್ ಮಾಧವ್ ನಿಮ್ಮನ್ನು ಭೇಟಿ ಮಾಡಿದ್ದನ್ನು ಉಲ್ಲೇಖಿಸಿದ್ದೀರಿ. ಕಾಶ್ಮೀರದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಸರ್ಕಾರಿ ನೌಕರರಿಗೆ ವಿಮಾ ಯೋಜನೆಯನ್ನು ಕಾರ್ಯಗತಗೊಳಿಸಲು ಪ್ರಯತ್ನಿಸುವ ಬಗ್ಗೆ ಮಾತನಾಡಲು ರಾಮ್ ಮಾಧವ್ ಬೆಳಿಗ್ಗೆ 7 ಗಂಟೆಗೆ ನಿಮ್ಮನ್ನು ಭೇಟಿಯಾಗಲು ಬಂದಿದ್ದರು ಎಂದು ಹೇಳಿದ್ದಿರಿ. ಸ್ನಾನ ಮಾಡದೇ ರಾಮ್ ಮಾಧವ್ ಅವರನ್ನು ಭೇಟಿಯಾಗಿದ್ದೆ ಎಂದು ಹೇಳಿದ್ದೀರಿ.

ಸತ್ಯಪಾಲ್: ಹೌದು! ನಾನು ಸ್ನಾನ ಮಾಡದೆ ಯಾರನ್ನೂ ಭೇಟಿಯಾಗುವುದಿಲ್ಲ. ಆದರೆ ರಾಮ್ ಮಾಧವ್ ಅವರನ್ನು ಭೇಟಿಯಾಗಬೇಕಾಯಿತು.

ಥಾಪರ್: ಭೇಟಿಯ ಸಮಯದಲ್ಲಿ ನೀವು ರಾಮ್ ಮಾಧವ್ ಅವರಿಗೆ "ನಾನು ಕಾನೂನುಬಾಹಿರವಾಗಿ ಏನನ್ನೂ ಮಾಡುವುದಿಲ್ಲ" ಎಂದು ಹೇಳಿದ್ದೀರಿ. ನೀವು ಉಲ್ಲೇಖಿಸುತ್ತಿರುವ ದುರುಪಯೋಗ ಯಾವುದು?

ಸತ್ಯಪಾಲ್: ಹೌದು! ಈ ಸಂಬಂಧ ರಾಮ್ ಮಾಧವ್ ಅವರು ನನಗೆ ಲೀಗಲ್ ನೋಟಿಸ್ ಕೂಡ ಕಳುಹಿಸಿ ಪರಿಹಾರ ನೀಡುವಂತೆ ಕೋರಿದ್ದಾರೆ. ಇದು ರಿಲಯನ್ಸ್ ವಿಮಾ ಯೋಜನೆ. ಮೊದಲು ಸರ್ಕಾರಿ ನೌಕರರು ಪ್ರತಿ ವರ್ಷ ರೂ. 8,500 ಪಾವತಿಸಬೇಕು ಎಂಬ ಷರತ್ತು ಇತ್ತು. ಇದಕ್ಕೆ ಸರ್ಕಾರಿ ನೌಕರರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಎರಡನೆಯದಾಗಿ, ನಿವೃತ್ತಿ ಪಡೆದವರು ರೂ. 20,000 ಕೊಡಬೇಕು. ಇದು ನ್ಯಾಯಸಮ್ಮತವಲ್ಲ ಎಂದು ಭಾವಿಸಿದ್ದೇನೆ. ಮೂರನೆಯದಾಗಿ, ಯೋಜನೆಗೆ ಸಂಯೋಜಿತವಾಗಿರುವ ಎಲ್ಲಾ ಆಸ್ಪತ್ರೆಗಳು ತೃತೀಯ ದರ್ಜೆಯ ಗುಣಮಟ್ಟದವು! ಕಳಪೆ ಗುಣಮಟ್ಟ! ಇಷ್ಟೆಲ್ಲಾ ದೋಷಗಳಿರುವ ರಿಲಯನ್ಸ್ ಯೋಜನೆಯನ್ನು ಹೇಗೆ ಒಪ್ಪಿಕೊಳ್ಳಲು ಸಾಧ್ಯ?

ಥಾಪರ್: ಆ ಸಂದರ್ಶನದಲ್ಲಿ ನೀವು ರಿಲಯನ್ಸ್ ಪರವಾಗಿ ನಡೆದುಕೊಂಡರೆ 300 ಕೋಟಿ ಕೊಡುಗೆ ನೀಡುವುದಾಗಿ ಹೇಳಿದ್ದರು ಎಂದು ಹೇಳಿದ್ದೀರಿ.

ಸತ್ಯಪಾಲ್: ನಾನು ಹಾಗೆ ಹೇಳಿಲ್ಲ. ಆ ವಿಡಿಯೋ ಸಂದರ್ಶನವನ್ನು ಎಚ್ಚರಿಕೆಯಿಂದ ನೋಡಿ. ಆ ಎರಡು ಯೋಜನೆಗಳು ವಿಮೆ ಮತ್ತು ಫನಲ್ ವಿದ್ಯುತ್ ಸ್ಟೇಷನ್ ಆ ಎರಡರಲ್ಲೂ ರೂ. 300 ಕೋಟಿ ಯಾರಿಗಾದರೂ ಸಿಗುವ ವಾತಾವರಣ ಇತ್ತು ಎಂದು ಮಾತ್ರ ಹೇಳಿದ್ದೇನೆ. ನಾನು ಎರಡೂ ಯೋಜನೆಗಳನ್ನು ನಿಲ್ಲಿಸಿದೆ. ಇಬ್ಬರೂ ಪಕ್ಷಪಾತಿಗಳಾಗಿದ್ದರು. ವಾಸ್ತವವಾಗಿ ನಾನು ಕಾಶ್ಮೀರಕ್ಕೆ ಹೊರಡುವ ಒಂದೆರಡು ದಿನಗಳ ಮೊದಲು ಎರಡೂ ಯೋಜನೆಗಳನ್ನು ಅನುಮೋದಿಸಲಾಗಿದೆ. ನಾನು ಕಡತಗಳನ್ನು ಹಿಂಪಡೆದು ಪರಿಶೀಲಿಸಿದೆ. ನಂತರ ನಾನು ಅದನ್ನು ತಿರಸ್ಕರಿಸಿದೆ. ಈ ವಿಷಯ ತಿಳಿದ ರಾಮ್ ಮಾಧವ್ ನನ್ನನ್ನು ಭೇಟಿಯಾಗಲು ಬಂದರು. ಇದರಲ್ಲಿ ಭಾಗಿಯಾದ ಅಂಬಾನಿ/ರಾಮ್ ಮಾಧವ್/ಹಸೀಬ್ ತ್ರಬು (ಮಾಜಿ ಕಾಶ್ಮೀರ ಹಣಕಾಸು ಸಚಿವ) ಇವರೆಲ್ಲರೂ ಪ್ರಧಾನಿಗೆ ಚಿರಪರಿಚಿತರು. ನಂತರ ಹಸೀಬ್ ತ್ರಬು ಯಾರದೋ ಮುಖಾಂತರ ನಾನು ತಿರಸ್ಕರಿಸಿದ ಫ್ಯೂನಲ್ ಪವರ್ ಸ್ಟೇಷನ್‌ಗೆ ಅನುಮೋದನೆ ಪಡೆದರು.

ಪ್ರತಿಪಕ್ಷಗಳ ಒಗ್ಗಟ್ಟಿಗೆ ಬಲ ತುಂಬಿ ಸ್ಪಷ್ಟ ಗುರಿಯೊಂದಿಗೆ ಸ್ಪಷ್ಟ ಪರ್ಯಾಯ: ಕಾಲದ ತುರ್ತು ಅಗತ್ಯ



ಪ್ರಕಾಶ್ ಕಾರಟ್

ಇತ್ತೀಚಿನ ದಿನಗಳಲ್ಲಿ ಪ್ರತಿಪಕ್ಷಗಳ ಒಗ್ಗಟ್ಟಿನ ಬಗ್ಗೆ ಮಾತುಗಳು ಹೆಚ್ಚಾಗಿ ಕೇಳಿ ಬರುತ್ತಿವೆ. ಪ್ರತಿಪಕ್ಷಗಳ ಹಲವು ನಾಯಕರ ಸರಣಿ ಸಭೆಗಳು ನಡೆದ ನಂತರ ಈ ಮಾತುಗಳಿಗೆ ಹೆಚ್ಚಿನ ವೇಗ ಸಿಕ್ಕಿದೆ. ಎರಡನೇ ಭಾಗದ ಬಜೆಟ್ ಅಧಿವೇಶನದ ವೇಳೆ, ಸಂಸತ್ತಿನಲ್ಲಿ 18 ಪ್ರತಿಪಕ್ಷಗಳ ನಡುವೆ ಕಂಡು ಬಂದ ಒಗ್ಗಟ್ಟಿನ ನಿಲುವಿನ ಹಿನ್ನೆಲೆಯಲ್ಲಿ ಈ ಬೆಳವಣಿಗೆ ನಡೆದಿದೆ. ಅದಾನಿ ಸಮೂಹದ ಬಗ್ಗೆ ಪ್ರಕಟವಾದ ಹಿಂಡನ್‌ಬರ್ಗ್ ವರದಿ ಬಗ್ಗೆ ವಿಚಾರಣೆಗೆ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ರಚಿಸಬೇಕೆಂದು ಏಕಕಂಠದಿಂದ ಅವುಗಳು ಒತ್ತಾಯಿಸಿದ್ದವು. ಜೊತೆಗೆ, ಅನುಷ್ಠಾನ ನಿರ್ದೇಶನಾಲಯ (ಇ.ಡಿ.) ಮತ್ತು ಕೇಂದ್ರೀಯ ತನಿಖಾ ದಳವನ್ನು (ಸಿಬಿಐ) ಪ್ರತಿಪಕ್ಷ ಮುಖಂಡರ ವಿರುದ್ಧ ಬಳಸುತ್ತಿರುವುದನ್ನು ಅವುಗಳು ಒಗ್ಗಟ್ಟಿನಿಂದ ವಿರೋಧಿಸಿದ್ದವು.

ಕ್ರಿಮಿನಲ್ ಮಾನಹಾನಿ ಪ್ರಕರಣವೊಂದರಲ್ಲಿ ಸೂರತ್ ನ್ಯಾಯಾಲಯ ರಾಹುಲ್ ಗಾಂಧಿಗೆ ಶಿಕ್ಷೆ ಪ್ರಕಟಿಸಿದ ಬೆನ್ನಲ್ಲಿ ಅವರನ್ನು ಲೋಕ ಸಭೆ ಸದಸ್ಯತ್ವದಿಂದ ಅನರ್ಹಗೊಳಿಸಿದಾಗಲೂ ಪ್ರತಿಪಕ್ಷಗಳು ಈ ಒಗ್ಗಟ್ಟಿನ ನಿಲುವನ್ನು ಪ್ರದರ್ಶಿಸಿದ್ದವು. ಇತರ ಅನೇಕ ವಿಪಕ್ಷ ನಾಯಕರ ಬಂಧನ ಮತ್ತು ವಿಚಾರಣೆಯ ಕಾರಣದಿಂದಾಗಿ ಸರ್ವಾಧಿಕಾರಿ ಆಡಳಿತದಿಂದ ಪ್ರಜಾಪ್ರಭುತ್ವವನ್ನು ಉಳಿಸಲು ನಡೆಸುವ ಅಸ್ತಿತ್ವದ ಹೋರಾಟ ಇದಾಗಿದೆ ಎನ್ನುವುದು ಬಹಳಷ್ಟು ಜನರಿಗೆ ಮನವರಿಕೆಯಾಗಿದೆ.

ಆದರೆ, ವಿವಿಧ ರಾಜಕೀಯ ವಿಶ್ಲೇಷಕರು ಮತ್ತು ಮಾಧ್ಯಮದವರು ಪ್ರತಿಪಕ್ಷದ ಏಕತೆಯ ಪ್ರಸ್ತಾಪಿತ ಗುರಿ ಬಗ್ಗೆ ಮಾಡುತ್ತಿರುವ ಊಹಾಪೋಹಗಳಿಗೆ ಚಿಂತನೆಯ ಸ್ಪಷ್ಟತೆಯಿಲ್ಲ ಮತ್ತು ಅವುಗಳು ಅವಾಸ್ತವವಾದ ನಿರೀಕ್ಷೆಗಳನ್ನು ಒಳಗೊಂಡಿದೆ.

ಪ್ರತಿಪಕ್ಷಗಳ ಎಲ್ಲಾ ಮುಖಂಡರನ್ನು ಒಂದೇ ವೇದಿಕೆಗೆ ಕರೆ ತಂದರೆ ಅದು ಪ್ರತಿಪಕ್ಷಗಳ ಅಖಿಲ ಭಾರತ ರಂಗಕ್ಕೆ ನಾಂದಿಯಾಗುತ್ತದೆ ಎನ್ನುವುದು ಬಹಳ ಸರಳ ಚಿಂತನೆಯಾಗಿದೆ. ರಾಷ್ಟ್ರ ಮಟ್ಟದಲ್ಲಿ ಪ್ರತಿಪಕ್ಷದ ಸರ್ವಸಮ್ಮತ ನೇತಾರ ಯಾರಾಗಬಹುದು ಎಂದು ಶೋಧಿಸುವುದು ಇನ್ನೊಂದು ಫಲವಿಲ್ಲದ ಪ್ರಯತ್ನವಾಗಿದೆ. ಬಿಜೆಪಿ ಮತ್ತದರ ಮಿತ್ರಪಕ್ಷಗಳ ವಿರುದ್ಧ ಮುಖಾಮುಖಿಯಾಗಿ ಒಂದೇ ಅಭ್ಯರ್ಥಿಯನ್ನು ಕಣಕ್ಕಿಳಿಸಲು, ಪ್ರಾದೇಶಿಕ ಪಕ್ಷವೇ ಆಗಲಿ ರಾಷ್ಟ್ರೀಯ ಪಕ್ಷವೇ ಆಗಲಿ, ರಾಜ್ಯದ ಅತಿ ಬಲಿಷ್ಠ ಪ್ರತಿಪಕ್ಷಕ್ಕೆ ಇತರ ಪಕ್ಷಗಳೊಂದಿಗೆ ಮಾತುಕತೆ ನಡೆಸಲು ಹಾಗೂ ಷರತ್ತು ವಿಧಿಸಲು ಅವಕಾಶ ನೀಡಬೇಕು ಎನ್ನುವ ಸಲಹೆಯೊಂದು ಹರಿದಾಡುತ್ತಿದೆ. ಈ ಎಲ್ಲವೂ ವಾಸ್ತವಕ್ಕೆ ದೂರವಾದ ಸಲಹೆಗಳಾಗಿವೆ. ಪ್ರತಿಪಕ್ಷಗಳ ವಿಭಿನ್ನ ಸ್ವರೂಪ ಮತ್ತು ಸಂಕೀರ್ಣತೆಗಳನ್ನು ಅವುಗಳು ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಮೊದಲನೆಯದಾಗಿ, ಪ್ರಮುಖ ಪ್ರತಿಪಕ್ಷಗಳ ಮೈತ್ರಿ ಅಥವಾ ರಂಗವನ್ನು ರಾಷ್ಟ್ರ ಮಟ್ಟದಲ್ಲಿ ರೂಪಿಸಲು ಸಾಧ್ಯವಿಲ್ಲ. ಸಂಕುಚಿತವಾದ ಚುನಾವಣಾ ದೃಷ್ಟಿಕೋನವೇ ಈ ತಪ್ಪಾದ ಚಿಂತನೆಗೆ ಕಾರಣವಾಗಿದೆ. ಎಲ್ಲಾ ಕ್ಷೇತ್ರಗಳಲ್ಲಿ ಬಿಜೆಪಿ ವಿರುದ್ಧವಾಗಿ ಏಕೈಕ ಅಭ್ಯರ್ಥಿಯನ್ನು ಕಣಕ್ಕಿಳಿಸುವುದರ ಮೇಲೆ ಚುನಾವಣಾ ಯಶಸ್ಸು ಅವಲಂಬಿಸಿದೆ ಎನ್ನುವ ಈ ಯೋಚನೆ ಕೇವಲ ಒಂದು ಆಶಯವಷ್ಟೇ ಆಗಬಹುದು.

ಪ್ರಮುಖ ರಾಷ್ಟ್ರೀಯ ಮತ್ತು ಮಹತ್ವದ ರಾಜಕೀಯ ವಿಚಾರಗಳ ಮೇಲೆ ಒಂದು ಸಂಯುಕ್ತವಾದ ನಿಲುವನ್ನು ತೆಗೆದುಕೊಳ್ಳುವ ಮೂಲಕವಷ್ಟೇ ಪ್ರತಿಪಕ್ಷಗಳ ಒಗ್ಗಟ್ಟನ್ನು ಸಾಧಿಸಬಹುದಾಗಿದೆ. ಪ್ರಜಾಪ್ರಭುತ್ವದ ಮೇಲೆ ಎಗ್ಗಿಲ್ಲದ ಆಕ್ರಮಣ ಮತ್ತು ಸಂವಿಧಾನದ ಬುಡಮೇಲು ಮಾಡುವಿಕೆ, ಪ್ರತಿಪಕ್ಷಗಳನ್ನು ಟಾರ್ಗೆಟ್ ಮಾಡಲು ಕೇಂದ್ರೀಯ ಸಂಸ್ಥೆಗಳ ದುರುಪಯೋಗ, ರಾಜ್ಯಗಳ ಹಕ್ಕುಗಳು ಮತ್ತು ಒಕ್ಕೂಟ ತತ್ವದ ಮೇಲೆ ವ್ಯವಸ್ಥಿತ ದಾಳಿ, ಮತ್ತು ಶಿಕ್ಷಣದಲ್ಲಿ ಹಿಂದೂತ್ವ ಸಿದ್ಧಾಂತ ತುರುಕಿಸುವುದು ಹಾಗೂ ಅಲ್ಪಸಂಖ್ಯಾತರ ಮೇಲಿನ ದಾಳಿ –ಇವೇ ಮೊದಲಾದವು ಆ ವಿಚಾರಗಳಾಗಿವೆ.

ಇವೆಲ್ಲವೂ ದೇಶದ ಭವಿಷ್ಯವನ್ನು ನಿರ್ಣಯಿಸುವುದಕ್ಕೆ ಸಂಬಂಧಪಟ್ಟದ್ದಾಗಿವೆ. ಹಿಂದೂತ್ವ ಸರ್ವಾಧಿಕಾರವನ್ನು ವಿರೋಧಿಸಲು ಹಾಗೂ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟ ತತ್ವಕ್ಕಾಗಿ ಹೋರಾಡಲು ಎಷ್ಟರ ಮಟ್ಟಿಗೆ ಅಣಿನೆರೆಸಲು ಸಾಧ್ಯ ಎಂಬುದು ಪ್ರತಿಪಕ್ಷ ಒಗ್ಗಟ್ಟಿಗೆ ಎದುರಾಗುವ ಪರೀಕ್ಷೆಯಾಗಿದೆ. ಪ್ರಧಾನ ಮಂತ್ರಿ ಮತ್ತು ಸರಕಾರದ ವಿಶ್ವಾಸಾರ್ಹತೆಗೆ ಸಂಬಂಧಿಸಿದ ಅನೇಕ ವಿಚಾರಗಳೂ ಇವೆ. ಸಂಸತ್ತಿನ ಭಾಷಣಗಳಲ್ಲಿ ಅದಾನಿ ಹೆಸರನ್ನು ಕೂಡ ಒಮ್ಮೆಯೂ ಪ್ರಸ್ತಾಪಿಸಲು ಮೋದಿ ನಿರಾಕರಿಸುವ ಮೂಲಕ ಅದಾನಿ–ಹಿಂಡನ್‌ಬರ್ಗ್ ವಿಚಾರದಲ್ಲಿ ಸಂಸತ್ತಿನಲ್ಲಿ ಎಲ್ಲಾ ಚರ್ಚೆಗಳನ್ನು ಮೋದಿ ಸರಕಾರ ಮೂಲೆಗುಂಪು ಮಾಡಿದ ರೀತಿ ಮತ್ತು ಜೆಪಿಸಿ ರಚನೆ ಬೇಡಿಕೆಯನ್ನು ತಳ್ಳಿ ಹಾಕಿದ್ದು ಸಂಸತ್ತಿನಲ್ಲಿ ಪ್ರತಿಪಕ್ಷಗಳ ವ್ಯಾಪಕ ಒಗ್ಗಟ್ಟಿಗೆ ಕಾರಣವಾಯಿತು. ಇದನ್ನು ಸಂಸತ್ತಿನ ಹೊರಗೂ ಮುಂದಕ್ಕೊಯ್ಯಬೇಕು.

ಅದಾನಿಯ ಭಾರಿ ಬೆಳವಣಿಗೆಗೆ ಪ್ರಧಾನಿಯನ್ನು ಹೊಣೆ ಮಾಡುವುದು ಮತ್ತು ಪುಲ್ವಾಮಾ ದಾಳಿ ಬಗ್ಗೆ ಜಮ್ಮು ಮತ್ತು ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲ್ಲಿಕ್ ಬಿಚ್ಚಿಟ್ಟಿರುವ ಸತ್ಯಗಳಿಗೆ ಉತ್ತರ ನೀಡುವಂತೆ ಮಾಡುವುದು –ಇವೇ ಮೊದಲಾದ ವಿಚಾರಗಳು ಪ್ರತಿಪಕ್ಷಗಳನ್ನು ಒಗ್ಗೂಡಿಸಬಹುದು.

ರಾಜ್ಯಗಳ ಹಕ್ಕುಗಳು ಮತ್ತು ಒಕ್ಕೂಟ ತತ್ವದ ಮೇಲೆ ನಡೆಯುತ್ತಿರುವ ದಾಳಿಗಳನ್ನು ಒಕ್ಕೊರಲಿನಿಂದ ಎದುರಿಸಿ ಹೋರಾಡಲು ಬಿಜೆಪಿಯೇತರ ರಾಜ್ಯ ಸರ್ಕಾರಗಳ ಮುಖ್ಯಮಂತ್ರಿಗಳ ಒಂದೇ ಒಂದು ಸಭೆಯನ್ನೂ ನಡೆಸಲು ಈ ಅವಧಿಯಲ್ಲಿ ಸಾಧ್ಯವಾಗದಿರುವುದು ಪ್ರತಿಪಕ್ಷಗಳ ಚಿಂತನೆಯಲ್ಲಿ ಏಕರೂಪತೆ ಇಲ್ಲದಿರುವುದನ್ನು ಸೂಚಿಸುತ್ತದೆ.

ನೀತಿಗೆ ಸಂಬಂಧಿಸಿದ ಎಲ್ಲಾ ವಿಚಾರಗಳಲ್ಲಿ ಹಾಗೂ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟ ತತ್ವ ರಕ್ಷಣೆ ವಿಚಾರದಲ್ಲಿ ತನ್ನ ಪರ್ಯಾಯ ನಿಲುವನ್ನು ಮಂಡಿಸಲು ಪ್ರತಿಪಕ್ಷಗಳಿಗೆ ಸಾಧ್ಯವಾದರೆ, ಅದುವೇ ಒಂದು ಸಂಯುಕ್ತ ಪರ್ಯಾಯವನ್ನು ತೋರಿಸಲು ಗಣನೀಯ ಹೆಜ್ಜೆಯಾಗಲಿದೆ.

ಇದಕ್ಕೆ ಪೂರಕವಾಗಿ ಜನರ ಸಮಸ್ಯೆಗಳು ಮತ್ತು ಜೀವನೋಪಾಯಗಳ ವಿಚಾರಗಳನ್ನು ಎತ್ತಿಕೊಂಡು ಜಂಟಿ ಪ್ರಚಾರಾಂದೋಲನಗಳು ಮತ್ತು ಪ್ರತಿಭಟನೆಗಳನ್ನು ನಡೆಸಬೇಕು. ಹೆಚ್ಚು ಪಕ್ಷಗಳು ಜಂಟಿ ವೇದಿಕೆಗಳು ಮತ್ತು ಕಾರ್ಯಾಚರಣೆಗಳ ಮೂಲಕ ಇಂಥ ಕರೆಗಳನ್ನು ಅನುಷ್ಠಾನಗೊಳಿಸಬಹುದು. ಇದು ಸಾಧ್ಯವಾಗದಿರುವ ರಾಜ್ಯಗಳಲ್ಲಿ ಸಂಬಂಧಪಟ್ಟ ಪಕ್ಷಗಳು ಇಂಥ ಕರೆಗಳನ್ನು ಪರ್ಯಾಯ ಕಾರ್ಯಾಚರಣೆಗಳ ಮುಖೇನ ಪ್ರತ್ಯೇಕವಾಗಿ ಆಚರಿಸಬಹುದು. ರಾಷ್ಟ್ರ ಮಟ್ಟದಲ್ಲಿ ಜಂಟಿ ಕರೆ ನೀಡುವ ಕೆಲವು ಪಕ್ಷಗಳಿಗೆ ಕೆಲವು ರಾಜ್ಯಗಳಲ್ಲಿ ಜಂಟಿಯಾಗಿ ಅನುಷ್ಠಾನ ಮಾಡಲು ಸಾಧ್ಯವಾಗದಿರಬಹುದು. ಅಂಥ ಸನ್ನಿವೇಶದಲ್ಲಿ ಇದು ವಾಸ್ತವಿಕ ಮಾರ್ಗವಾಗಲಿದೆ.

ಮೇಲೆ ಸಲಹೆ ಮಾಡಲಾದ ಹೆಜ್ಜೆಗಳು, ಬಿಜೆಪಿ–ವಿರೋಧಿ ಮತಗಳನ್ನು ಒಗ್ಗೂಡಿಸಲು ರಾಜ್ಯ ಮಟ್ಟಗಳಲ್ಲಿ ಚುನಾವಣಾ ತಂತ್ರಗಳನ್ನು ರೂಪಿಸುವ ವಾತಾವರಣ ಸೃಷ್ಟಿಸಲು ನೆರವಾಗುತ್ತವೆ. ಸದ್ಯಕ್ಕೆ, ತಮಿಳುನಾಡು ಮತ್ತು ಬಿಹಾರ, ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ವಿರುದ್ಧ ವಿಶಾಲವಾದ ತಿಳುವಳಿಕೆ ರೂಪಿಸಲು ಸಾಧ್ಯವಾದ ರಾಜ್ಯಗಳಾಗಿವೆ.

ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟತತ್ವ ವಿಚಾರಗಳಲ್ಲಿ ಒಗ್ಗಟ್ಟಿನ ನಿಲುವನ್ನು ತಾಳಲು ಹಾಗೂ ಜನರ ಸಮಸ್ಯೆಗಳ ಆಧಾರದಲ್ಲಿ ಜಂಟಿ ಹೋರಾಟಗಳನ್ನು ನಡೆಸಲು ಪ್ರತಿಪಕ್ಷಗಳಿಗೆ ಸಾಧ್ಯವಾದರೆ, ಅದರಿಂದ ಇಡೀ ಪ್ರತಿಪಕ್ಷದ ವಿಶ್ವಾಸಾರ್ಹತೆ ಹೆಚ್ಚುತ್ತದೆ. ಜನರು ಅದನ್ನು ಬಿಜೆಪಿಗೆ ಪರ್ಯಾಯವೆಂದು ಕಾಣಲು ಆರಂಭಿಸುತ್ತಾರೆ. ಲೋಕಸಭೆ ಚುನಾವಣೆಗಳು ನಡೆದಾಗ ಪ್ರತಿಪಕ್ಷಗಳ ಈ ಸಂಯುಕ್ತ ಉಪಕ್ರಮವು, ಚುನಾವಣೆಯಲ್ಲಿ ಮೈತ್ರಿ ಸಾಧಿಸದಿದ್ದರೂ ಪ್ರತಿಪಕ್ಷಗಳಿಗೆ ಸಹಾಯಕವಾಗಲಿದೆ.

ಹೀಗಾಗಿ, ಎಲ್ಲಾ ಪ್ರತಿಪಕ್ಷಗಳನ್ನು ಒಗ್ಗೂಡಿಸುವ ಈಗಿನ ಪ್ರಯತ್ನಗಳನ್ನು ಒಂದು ಸ್ಪಷ್ಟ ದಾರಿಯೊಂದಿಗೆ ಮುಂದಕ್ಕೊಯ್ಯಬೇಕು. ಸ್ಪಷ್ಟ ಪರ್ಯಾಯದೊಂದಿಗೆ ಪ್ರಮುಖ ರಾಷ್ಟ್ರೀಯ ವಿಷಯಗಳಲ್ಲಿ ಒಗ್ಗಟ್ಟಾಗುವುದು, ಸಾಧ್ಯವಾದ ಕಡೆಯಲ್ಲೆಲ್ಲಾ ಸಂಯುಕ್ತ ಕಾರ್ಯಾಚರಣೆಗಳನ್ನು ನಡೆಸುವುದು ಮತ್ತು ಬಿಜೆಪಿ–ವಿರೋಧಿ ಮತಗಳನ್ನು ಗರಿಷ್ಠವಾಗಿ ಒಗ್ಗೂಡಿಸುವುದನ್ನು ಖಾತರಿಪಡಿಸಿ ರಾಜ್ಯಗಳಲ್ಲಿ ಬಿಜೆಪಿ ವಿರುದ್ಧ ಹೋರಾಟವನ್ನು ಅಣಿನೆರೆಯಿಸುವುದು ಇವೇ ಸ್ಪಷ್ಟ ನಿರ್ದೇಶನವಾಗಿದೆ.

ಅನು: ವಿಶ್ವ

ಗಾಂಧಿ ಹತ್ಯೆಯ ಪ್ರಕರಣದಲ್ಲಿ ಸಾವರ್ಕರ್ ಮೇಲಿನ ಆರೋಪಗಳು ಸಾಬೀತಾಗಲೇ ಇಲ್ಲವೇ?.......

ಪುಟ 2 ರಿಂದ

ಸರ್ದಾರ್ ಪಟೇಲ್ ಅವರು ಇದೇ ಸತ್ಯಾಂಶವನ್ನು ಹಿಂದೂ ಮಹಾಸಭಾದ ಮತ್ತೊಬ್ಬ ಪ್ರಮುಖ ಮುಖಂಡರಾದ ಶ್ಯಾಮ ಪ್ರಸಾದ್ ಮುಖರ್ಜಿಯವರಿಗೆ ಜುಲೈ 18, 1948 ರಲ್ಲಿ ಬರೆದ ಪತ್ರದಲ್ಲಿ ಒತ್ತಿಹೇಳಿದ್ದರು:

"ಗಾಂಧೀಜಿಯವರ ಹತ್ಯೆಯ ಪ್ರಕರಣದಲ್ಲಿ ಆರ್‌ಎಸ್‌ಎಸ್ ಮತ್ತು ಹಿಂದೂ ಮಹಾಸಭಾಕ್ಕೆ ಸಂಬಂಧಪಟ್ಟ ಪ್ರಕರಣ ನ್ಯಾಯಾಲಯದ ವಿಚಾರಣೆಯಲ್ಲಿರುವುದರಿಂದ ಅವುಗಳ ಪಾಲ್ಗೊಳ್ಳುವಿಕೆಯ ಬಗ್ಗೆ ನಾನು ಏನೂ ಹೇಳಲು ಇಷ್ಟಪಡುವುದಿಲ್ಲ, ಆದರೆ ಈ ಎರಡೂ ಸಂಘಟನೆಗಳ, ಬಹಳ ಮುಖ್ಯವಾಗಿ ಆರ್‌ಎಸ್‌ಎಸ್‌ನ ಚಟುವಟಿಕೆಗಳಿಂದಾಗಿ ದೇಶದಲ್ಲಿ ಎಂತಹ ವಾತಾವರಣ ಸೃಷ್ಟಿಯಾಯಿತೆಂದರೆ ಅಂತಹ ಭೀಕರ ದುರ್ಘಟನೆ ಸಂಭವಿಸಿತು ಎಂದು ವರದಿಗಳು ದೃಢಪಡಿಸುತ್ತಿವೆ. ಹಿಂದೂ ಮಹಾಸಭಾದ ಉಗ್ರಗಾಮಿ ವಿಭಾಗವು ಆ ಪಿತೂರಿಯಲ್ಲಿ ಭಾಗವಾಗಿದೆ ಎನ್ನುವ ಬಗ್ಗೆ ನನಗೆ ಯಾವ ಅನುಮಾನವೂ ಇಲ್ಲ. ಆರ್‌ಎಸ್‌ಎಸ್‌ನ ಚಟುವಟಿಕೆಗಳು ಸರ್ಕಾರದ ಹಾಗೂ ಪ್ರಭುತ್ವದ ಅಸ್ತಿತ್ವಕ್ಕೆ ದೊಡ್ಡ ಅಪಾಯವನ್ನು ತಂದೊಡ್ಡಿವೆ. ನಿಷೇಧ ಹೇರಿದ ನಂತರವೂ ಆ ಚಟುವಟಿಕೆಗಳು ಕಡಿಮೆಯಾಗಿಲ್ಲ ಎಂದು ನಮ್ಮ ವರದಿಗಳು ಪ್ರಮಾಣೀಕರಿಸುತ್ತಿವೆ. ನಿಜ ಹೇಳಬೇಕೆಂದರೆ, ಕಾಲ ಕಳೆದಂತೆ ಆರ್‌ಎಸ್‌ಎಸ್‌ನ ವಿಷವರ್ತುಲ ಇನ್ನೂ ಹೆಚ್ಚು ಉದ್ದಟತನವನ್ನು ಪ್ರದರ್ಶಿಸುತ್ತಿದೆ ಮತ್ತು ಅವುಗಳ ವಿಧ್ವಂಸಕ ಕೃತ್ಯಗಳು ಹೆಚ್ಚುತ್ತಲೇ ಇವೆ.

ಗೊಡ್ಸೆಯು ಸಾವರ್ಕರ್ ಅವರ ಬಲಗೈ ಬಂಟನಾಗಿದ್ದರು ಎಂಬ ಸಾವರ್ಕರ್ ಅವರ ಜೀವನಚರಿತ್ರೆಕಾರರ ವಿವರಣೆಯಿಂದಲೇ ಗೊಡ್ಸೆ ಸಾವರ್ಕರ್ ಅವರೊಂದಿಗೆ ಎಷ್ಟು ನಿಕಟ ಸಂಬಂಧ ಹೊಂದಿದ್ದರು ಎನ್ನುವುದನ್ನು ಕೂಡ ನಾವು ಅರಿಯಬಹುದು. ಅಷ್ಟೂ ಸಾಲದೆಂಬಂತೆ, ಗೊಡ್ಸೆ ಎಷ್ಟರಮಟ್ಟಿಗೆ ಸಾವರ್ಕರ್ ಅವರ ಮೋಡಿಯೊಳಗೆ ಸಿಲುಕಿದ್ದರು ಎನ್ನುವುದನ್ನು ಈಗ ಲಭ್ಯವಿರುವ ಗೊಡ್ಸೆ ಸಾವರ್ಕರ್ ಅವರಿಗೆ ಬರೆದ ಪತ್ರಗಳು ಸಾಬೀತುಪಡಿಸುತ್ತವೆ. 1938 ರಿಂದ 1946 ರ ನಡುವಿನ ಅವಧಿಯಲ್ಲಿ ಬರೆದ ಆ ಪತ್ರಗಳು "ಸಾವರ್ಕರ್ ಅವರು ಗೊಡ್ಸೆಯ ನಂಬಿಕಸ್ಥ ಸಲಹೆಗಾರರಾಗಿದ್ದರು–ಮತ್ತು ಸಾವರ್ಕರ್ ತನ್ನ ಗುರುವಾಗಿದ್ದರು ಎಂಬ ಅವರ ಸ್ವೀಕಾರವನ್ನು ನಿರ್ಣಾಯಕವಾಗಿ ಪ್ರಮಾಣೀಕರಿಸುತ್ತವೆ." ತಾನು ಅವರಿಂದ ದೂರವಿದ್ದೆ ಎನ್ನುವುದನ್ನು ತಿಳಿಸುವ ಸಲುವಾಗಿ 'ಅವರೊಂದಿಗಿನ ನನ್ನ ಪರಿಚಯ ಹಳೆಯದಲ್ಲ" ಎಂದು ನವಂಬರ್ 20, 1948 ರಂದು ಸಾವರ್ಕರ್ ಅವರು ಕೋರ್ಟಿನಲ್ಲಿ ನೀಡಿದ ಹೇಳಿಕೆಯನ್ನು ಈ ಆಪ್ತ ಪತ್ರಗಳು ಸುಳ್ಳಾಗಿಸುತ್ತವೆ.

(ಮುಂದುವರೆಯುವುದು)

ಈ ಚುನಾವಣೆಯಲ್ಲಿ ರಾಜ್ಯದ ಜನತೆಯ ಆಯ್ಕೆ ಯಾವುದು?!

ಯು. ಬಸವರಾಜ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ

ಕರ್ನಾಟಕದ ವಿಧಾನಸಭಾ ಚುನಾವಣೆ ಮೇ 10, 2023 ರಂದು ನಡೆಯಲಿದೆ. 2023ರ ಏಪ್ರಿಲ್ 13ರಿಂದ ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಆರಂಭಗೊಂಡಿದೆ.

ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳು ಆಭ್ಯರ್ಥಿಗಳ ಆಯ್ಕೆಯ ಪ್ರಸವ ವೇದನೆಗಳನ್ನು ಅನುಭವಿಸುತ್ತಿವೆ. ಬಿಜೆಪಿಯಿಂದ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಸಿಗದವರು ಕಾಂಗ್ರೆಸ್ ಅಥವಾ ಜೆಡಿಎಸ್ ಗೆ ಸೇರ್ಪಡೆಯಾದರೆ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳಿಂದ ಸ್ಪರ್ಧೆಗೆ ಅವಕಾಶ ಸಿಗದವರು ಬಿಜೆಪಿ ಕಡೆ ನಡೆದಿದ್ದಾರೆ.


ಬಿಜೆಪಿ ತಾನು ಸ್ವಂತ ಬಲದ ಮೇಲೆ ಆಯ್ಕೆಯಾಗಿ, ಮತ್ತೊಮ್ಮೆ ಅಧಿಕಾರ ನಡೆಸಬೇಕೆಂದು ಬಯಸಿದೆ. ಅದೇ ರೀತಿ, ಜನತೆ ಬಿಜೆಪಿಯನ್ನು ಸೋಲಿಸಿ ತನಗೆ ಮತ ನೀಡುವಂತೆ ಕಾಂಗ್ರೆಸ್ ಕೋರಿದೆ. ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳಿಂದ ಸಮಾನ ಅಂತರ ಕಾಯ್ದುಕೊಂಡಿರುವ ಜೆಡಿಎಸ್, ಜನತೆ ಈ ಚುನಾವಣೆಯಲ್ಲಿ ಯಾರಿಗೂ ಬಹುಮತವಿರದ ಜನಾದೇಶ ನೀಡಲಿದ್ದು, ಅಂತಹ ಅವಕಾಶ ತನ್ನ ನೇತೃತ್ವದ ಸರಕಾರ ರಚಿಸಲು ನೆರವಾಗಲಿದೆಯೆಂದು ಹೇಳಿಕೊಂಡಿದೆ.

ಇನ್ನು ಈ ಪಕ್ಷಗಳನ್ನು ಬಿಟ್ಟರೆ, ಏಳು ಎಡ ಮತ್ತು ಜಾತ್ಯತೀತ, ಪ್ರಜಾಸತ್ತಾತ್ಮಕ ಪಕ್ಷಗಳ ಕೂಟವು ಒಂದಡೆ ಸೇರಿ, ಈ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವಂತೆ ರಾಜ್ಯದ ಜನತೆಗೆ ಕರೆ ನೀಡಿವೆ. ಹಾಗೂ ವಿಧಾನಸಭೆಯಲ್ಲಿ ಹುದುಗಿ ಹೋದ ಎಡ ಮತ್ತು ಜಾತ್ಯತೀತ, ಪ್ರಜಾಸತ್ತಾತ್ಮಕ ಧ್ವನಿ ಮೊಳಗಲು ತಮಗೂ ಪ್ರಾತಿನಿಧ್ಯ ನೀಡುವಂತೆ ಮನವಿ ಮಾಡಿವೆ. ಅವರವರದೇ ಪಕ್ಷಗಳ ಹಿತಾಸಕ್ತಿಗಳು ಮತ್ತು ವಿವಿದ ಪಕ್ಷಗಳ ಜೊತೆಗಿನ ಹೊಂದಾಣಿಕೆಗಳ ಕಾರಣದಿಂದ ತಮ್ಮೊಳಗೆ ಸಹಮತದ ಸ್ಪರ್ಧೆಗೆ ಅವಕಾಶವಿಲ್ಲವೆಂದು ಅವು ನಿರ್ಧರಿಸಿವೆ. ಅವುಗಳು ಸ್ವತಂತ್ರವಾಗಿ ತಮ್ಮ ನಿಲುಮೆಯಂತೆ ಸ್ಪರ್ಧಿಸಲು ಮತ್ತು ಕೆಲವು ಆಯ್ದ ಗೆಲ್ಲಬಲ್ಲ ಅಥವಾ ಎರಡನೇ ಸ್ಥಾನದಲ್ಲಿರಬಲ್ಲ ಕ್ಷೇತ್ರಗಳಲ್ಲಿ ಪರಸ್ಪರ ಬೆಂಬಲಿಸುವ ನಿರ್ಧಾರ ತೆಗೆದುಕೊಂಡಿವೆ.

ಬಿಜೆಪಿಯ ಕೋಮುವಾದಿ ಹಾಗೂ ಸಂವಿಧಾನ ವಿರೋಧಿ ಆಡಳಿತದಿಂದ ಆತಂಕಿರಾದ ಬುದ್ಧಿಜೀವಿ ವಲಯ ಮತ್ತು ಅಲ್ಪ ಸಂಖ್ಯಾತ ಸಮುದಾಯವು ಬಿಜೆಪಿಯನ್ನು ಸೋಲಿಸುವುದು ಮತ್ತು ಅಧಿಕಾರದಿಂದ ಹೊರಗಿಡುವುದು ಅಗತ್ಯವಿದೆಯೆಂದು ಭಾವಿಸಿ ಕ್ರಮವಹಿಸಿವೆ.

ಜನವಿರೋಧಿ ಹಾಗೂ ಕೋಮುವಾದಿ ಬಿಜೆಪಿ ಸೋಲಿಸುವ ಅಗತ್ಯವೇನು?!

ಕಳೆದ 9 ವರ್ಷಗಳಿಂದ ದೇಶದ ಚುಕ್ಕಾಣಿ ಹಿಡಿದಿರುವ ಬಿಜೆಪಿ ನೇತೃತ್ವದ ಒಕ್ಕೂಟ ಸರಕಾರದ ಆಡಳಿತ ವೈಖರಿಯು ಖಂಡಿತಾ ಭಾರತದ ಸಂವಿಧಾನಕ್ಕೆ ಬೆದರಿಕೆಯನ್ನೊಡ್ಡಿದೆ. ಇದಕ್ಕೆ ಪೂರಕವಾಗಿಯೇ ಬಿಜೆಪಿ ನೇತೃತ್ವದ ರಾಜ್ಯ ಸರಕಾರಗಳು ಕಾರ್ಯ ನಿರ್ವಹಿಸುತ್ತಿವೆ. ನಮ್ಮ ರಾಜ್ಯ ಸರಕಾರವೂ ಇದಕ್ಕೆ ಹೊರತಾಗಿಲ್ಲ. ಇವು ದೇಶದ ಮೇಲೆ ಲೂಟಿಕೋರ ಕಾರ್ಪೋರೇಟ್ ಸಂಸ್ಥೆಗಳ ನವ ಉದಾರವಾದಿ ಆರ್ಥಿಕ ನೀತಿಗಳನ್ನು ಬಲವಂತವಾಗಿ ಹೇರುತ್ತಿವೆ. ಆಳಗೊಳ್ಳುತ್ತಿರುವ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಈ ಸಂದರ್ಭದಲ್ಲಿ ಲೂಟಿಕೋರ ಕಾರ್ಪೋರೇಟ್ ಸಂಸ್ಥೆಗಳು ತಮ್ಮ ಬಿಕ್ಕಟ್ಟಿನ ಹೊರೆಯನ್ನು ಸರಕಾರಗಳ ನೆರವಿನಿಂದ ಜನತೆಯ ಮೇಲೆ ವರ್ಗಾಯಿಸುತ್ತಿವೆ. ಇದರ ಭಾಗವಾಗಿ, ಪರಂಪರೆಯಂತೆ ಅವು ಹೊಸ ಕೈಗಾರಿಕೆ ಮತ್ತಿತರೆ ಕ್ಷೇತ್ರಗಳಲ್ಲಿ ತಮ್ಮ ಬಂಡವಾಳ ತೊಡಗಿಸಿ, ಉತ್ಪಾದಿಸಿ ಲಾಭ ಮಾಡುವ ಪ್ರಕ್ರಿಯೆಗಳಿಂದ ಹಿಂದೆ ಸರಿದು, ಸಾರ್ವಜನಿಕ ಸಂಪನ್ಮೂಲಗಳನ್ನು ಮತ್ತು ಉದ್ದಿಮೆಗಳನ್ನು ದೇಣಿಗೆಯಾಗಿ ಪಡೆಯುವ ಕೆಲಸದಲ್ಲಿ ತೊಡಗಿವೆ. ಈ ದಿವಾಳಿಕೋರ ಆರ್ಥಿಕ ನೀತಿಗಳು, ಅಗತ್ಯ ವಸ್ತುಗಳು ಮತ್ತು ಔಷಧಿಗಳ ಬೆಲೆ ಗಗನಮುಖಿ ಏರಿಕೆಗಳು ಜನರಲ್ಲಿ ತೀವ್ರ ಸಂಕಷ್ಟವನ್ನುಂಟು ಮಾಡಿವೆ. ಇವು, ಸರಕಾರದ ವಿರುದ್ಧ ಜನರ ತೀವ್ರ ಅಸಮಾಧಾನವನ್ನು ಮತ್ತು ಪ್ರತಿರೋಧವನ್ನು ಹೆಚ್ಚಿಸುತ್ತಿವೆ. ಇದರಿಂದ ಭಯಗೊಂಡ ಲೂಟಿಕೋರ ಕಾರ್ಪೋರೇಟ್ ಸಂಸ್ಥೆಗಳು, ಮತಾಂಧರ ಜೊತೆ, ಅದರಲ್ಲೂ ಹಿಂದುತ್ವವಾದಿ ಮತಾಂಧ ದುಷ್ಟ ಶಕ್ತಿಗಳ ಜೊತೆ ಕೈ ಜೋಡಿಸುವ ಮೂಲಕ, ಜನತೆಯನ್ನು ವಿಭಜಿಸಿ ಆಳುವ ಕ್ರಮಗಳನ್ನು ಬಲಗೊಳಿಸಿ ವಿಸ್ತರಿಸುತ್ತಿವೆ. ಜಾತೀ ಧೃವಿಕರಣಕ್ಕೂ ಕ್ರಮವಹಿಸುವುದನ್ನು ಮುಂದುವರೆಸಲಾಗುತ್ತಿದೆ. ಇದರಿಂದ ದೇಶ ಹಾಗೂ ರಾಜ್ಯದಲ್ಲಿ ಕೋಮು ಹಾಗೂ ಜಾತಿ ಧೃವೀಕರಣ ಮತ್ತು ಮತಾಂಧತೆಯ ದ್ವೇಷ, ಜಾತಿ ವೈಷಮ್ಯಗಳು ಬೆಳೆಯುತ್ತಿವೆ.



ಒಕ್ಕೂಟ ಸರಕಾರ ಮತ್ತೊಂದು ಹೆಜ್ಜೆ ಮುಂದೆ ಹೋಗಿ, ಜನತೆಯ ಪ್ರತಿರೋಧವನ್ನು ಹತ್ತಿಕ್ಕಲು ಸರ್ವಾಧಿಕಾರಿ ನೀತಿಯನ್ನು ವಿಸ್ತರಿಸುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ದ ಮೇಲೆ ಗಂಭೀರ ದಾಳಿ ನಡೆಸಿ, ಪ್ರತಿರೋಧದ ಧ್ವನಿಯನ್ನು ಅಡಗಿಸಲು ಕ್ರಮವಹಿಸುತ್ತಿದೆ. ಉದ್ಯೋಗದ ಹಾಗೂ ಬದುಕುವ ಹಕ್ಕುಗಳ ಮೇಲೆ ಕೂಡ ಧಾಳಿಗಳನ್ನು ಕೇಂದ್ರೀಕರಿಸಿದೆ. ವಿರೋಧಿ ರಾಜ್ಯ ಸರಕಾರಗಳನ್ನು ಅಸ್ಥಿರಗೊಳಿಸುವ ನೀತಿಗಳನ್ನು ಅನುಸರಿಸುತ್ತಿರುವಾಗಲೇ, ರಾಜ್ಯಗಳ ಒಕ್ಕೂಟವಾದಿ ಸ್ವರೂಪ ಹಾಗೂ ತತ್ವದ ಮೇಲೆಯು, ಹಲವು ಸ್ವತಂತ್ರ ಹಾಗೂ ಸ್ವಾಯತ್ತ ಸಂಸ್ಥೆಗಳ ಮೇಲೆಯೂ ಧಾಳಿಗಳನ್ನು ನಡೆಸುತ್ತಿದೆ ಮತ್ತು ಅವುಗಳ ದುರ್ಬಳಕೆಗೆ ಕ್ರಮವಹಿಸುತ್ತಿದೆ.

ಇದೆಲ್ಲವೂ, ಭಾರತ ದೇಶದ ಸಂವಿಧಾನ ಜನತೆಗೆ ಕೊಡ ಮಾಡಿರುವ ಸ್ವಾತಂತ್ರ್ಯ, ಆರ್ಥಿಕ ಸ್ವಾವಲಂಭನೆ, ಸಾರ್ವಭೌಮತ್ವ ಹಾಗೂ ಜಾತ್ಯತೀತ ಪ್ರಜಾಪ್ರಭುತ್ವ, ಒಕ್ಕೂಟವಾದಿ ಸ್ವರೂಪದ ಮೇಲಿನ ಗಂಭೀರ ದಾಳಿಗಳಾಗಿವೆ.

ರಾಜ್ಯವನ್ನು ಕಾರ್ಪೋರೇಟ್ ಸಂಸ್ಥೆಗಳ ಲೂಟಿಗೆ ತೆರೆದಿಡಲಾಗಿದೆ:

ಭ್ರಷ್ಟತೆಯ ಹಾಗೂ ಅನೈತಿಕ ಅಪರೇಷನ್ ಕಮಲದ ಮೂಲಕ ವಿರೋಧ ಪಕ್ಷಗಳ ಶಾಸಕರನ್ನು ಅಧಿಕಾರದ ಅಮಿಷ ಒಡ್ಡಿ ಖರೀದಿಸಿ, ಒಕ್ಕೂಟ ಸರಕಾರ ಹಾಗೂ ರಾಜ್ಯಪಾಲರ ಕಛೇರಿಯ ದುರ್ಬಳಕೆಯ ಮೂಲಕ, ಜನಾದೇಶವಿಲ್ಲದೆ ಬಲವಂತವಾಗಿ ರಾಜ್ಯದ ಜನತೆಯ ಮೇಲೆ ತನ್ನ ಸರಕಾರವನ್ನು ಹೇರಿದ ಬಿಜೆಪಿಯು, ಇಡೀ ರಾಜ್ಯವನ್ನು ಕಾರ್ಪೋರೇಟ್ ಸಂಸ್ಥೆಗಳ ಲೂಟಿಗೆ ತೆರೆಯಲು ಕ್ರಮವಹಿಸಿದೆ.

<u>ಜನಾದೇಶ ಇಲ್ಲದೇ ಅನೈತಿಕ, ಅಕ್ರಮವಾಗಿ ಅಧಿಕಾರ ಹಿಡಿದ ಬಿಜೆಪಿ ಕಳೆದ ನಾಲ್ಕು ವರ್ಷಗಳಲ್ಲಿ ನಡೆಸಿದ ಆಡಳಿತದ ಸ್ವರೂಪವೇನು? ಕಾರ್ಪೋರೇಟ್ ಹಾಗೂ ಕೋಮುವಾದಿ ನಂಟಿನ ಈ ದುರಾಡಳಿತ ತಂದಿರುವ ಹಾನಿ, ಅಪಾಯವನ್ನು ಕೊನೆಗಾಣಿಸುವ ಮಾರ್ಗಗಳು ಹಾಗೂ ಅವಕಾಶಗಳ ಕುರಿತ ವಿಶ್ಲೇಷಣೆ ಇಲ್ಲಿದೆ.</u>

ರೈತ ವಿರೋಧಿ ಕೃಷಿ ಕಾಯ್ದೆಗಳ ಜಾರಿ:

ದೇಶದ ರೈತಾಪಿ ಜನತೆ ತಮ್ಮ ಸಮರಶೀಲ ಹಾಗೂ ಐತಿಹಾಸಿಕ ಹೋರಾಟದ ಮೂಲಕ, ಒಕ್ಕೂಟ ಸರಕಾರ ಜಾರಿಗೆ ತರಲು ಮುಂದಾಗಿದ್ದ ಮೂರು ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ವಾಪಾಸು ಪಡೆಯುವಂತೆ ಮಾಡಿ ಬಿಜೆಪಿಗೆ ಮುಖಭಂಗವನ್ನುಂಟು ಮಾಡಿತ್ತು. ಸ್ವತಃ ಪ್ರಧಾನ ಮಂತ್ರಿಗಳು ಜಗತ್ತಿನೆದುರು ಮಂಡಿಯೂರಿ, ಕೈ ಮುಗಿದು ಕ್ಷಮೆಯನ್ನು ಕೋರಿದ್ದರು. ಇಂತಹ ಲೂಟಿಕೋರ ಕರಾಳ ಕಾಯ್ದೆಗಳನ್ನು ಕರ್ನಾಟಕದಲ್ಲಿ ಜನತೆಯ ಪ್ರತಿರೋಧವನ್ನು ಲೆಕ್ಕಿಸದೇ ಜಾರಿ ಮಾಡಿದ ಕುಕೀರ್ತಿ ಈ ಸರಕಾರಕ್ಕಿದೆ. ಇದರಿಂದ ರಾಜ್ಯದ ರೈತರು ತಮ್ಮ ವ್ಯವಸಾಯದ ಹಕ್ಕು ಹಾಗೂ ಕೃಷಿ ಭೂಮಿಯನ್ನು ಕಳೆದುಕೊಳ್ಳುವ ಭೀತಿಗೊಳಗಾಗಿದ್ದಾರೆ.

ಭೂ ಸುಧಾರಣಾ ತಿದ್ದುಪಡಿ ಕಾಯ್ದೆ-2020 ರ ಜಾರಿಯ ಕಾರಣದಿಂದ ಕೃಷಿಕೂಲಿಕಾರರು ಹಾಗೂ ಬಡರೈತರು ಮತ್ತು ದಲಿತರು ತಾವು ಭೂಮಿ ಹೊಂದಿ ಸ್ವಾವಲಂಬಿಗಳಾಗುವ ಕನಸಿನ ಮೇಲೂ ಹೊಡೆತ ನೀಡಿದೆ. ಭೂ ಕೇಂದ್ರೀಕರಣಕ್ಕೆ ನೆರವು ನೀಡಿ ಈ ಎಲ್ಲರ ಮೇಲಿನ ದೌರ್ಜನ್ಯದ ಹೆಚ್ಚಳಕ್ಕೆ ಕಾರಣವಾಗುತ್ತಿದೆ.

ಎಪಿಎಂಸಿ ತಿದ್ದಪಡಿ ಕಾಯ್ದೆ-2020 ರ ಜಾರಿಯು, ಕೃಷಿ ಉತ್ಪನ್ನಗಳ ಮಾರುಕಟ್ಟೆಯನ್ನು ಕಾರ್ಪೋರೇಟ್ ಕಂಪನಿಗಳ ಕೃಷಿ ಉತ್ಪನ್ನಗಳ ಬೆಲೆಗಳ ಏರಿಳಿತಕ್ಕೆ ತೆರೆದು, ರೈತರ ಮೇಲೆ ಸಾಲದ ಭಾರವನ್ನು ವಿಸ್ತರಿಸಲು ಮತ್ತು ಎಪಿಎಂಸಿಯ ಲಕ್ಷಾಂತರ ಕೋಟಿ ರೂ ಬೆಲೆ ಬಾಳುವ ಆಸ್ತಿಗಳನ್ನು ಲಪಟಾಯಿಸಲು ನೆರವಾಗಲಿದೆ.

ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ-2020, ಇದು ನೇರವಾಗಿ, ರೈತರ ಉಪಕಸುಬಾದ ಮತ್ತು ಕೂಲಿಕಾರರ ಬದುಕಾದ ಹೈನುಗಾರಿಕೆ ಮೇಲೆ, ಹೈನೋದ್ಯಮ, ಚರ್ಮೋದ್ಯಮ, ಮಾಂಸೋದ್ಯಮಗಳ ಮೇಲೆ ದಾಳಿ ನಡೆಸಲಿದೆ. ದಲಿತರು, ಅಲ್ಪ ಸಂಖ್ಯಾತರ ಆಹಾರದ ಹಕ್ಕು ಹಾಗೂ ಉದ್ಯೋಗದ ಹಕ್ಕಿನ ಮೇಲೆ ಗಂಭೀರ ದಾಳಿ ನಡೆಸುತ್ತಾ ಕೋಮು ದೃವೀಕರಣಕ್ಕೆ, ಜಾತಿ ದೌರ್ಜನ್ಯಕ್ಕೆ ಕಾರಣವಾಗುತ್ತಿದೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ:

ಸುಮಾರು ಒಂದೂವರೆ ಕೋಟಿಯಷ್ಟು ಪಡಿತರ ಕಾರ್ಡುಗಳನ್ನು ಹೊಂದಿರುವ ಬಡ ಕುಟುಂಬಗಳಿರುವ ರಾಜ್ಯದಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸುವ ಮೂಲಕ, ಬಡವರಿಗೆ ಮತ್ತು ಮಹಿಳೆಯರಿಗೆ ಶಿಕ್ಷಣ ಹಾಗೂ ಆ ಮೂಲಕ ಉದ್ಯೋಗದ ವಂಚನೆಗೆ ಕ್ರಮವಹಿಸಿದೆ.

ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆಯ ಕಾಯ್ದೆ:

ಅಮಾನುಷವಾದ ಜಾತಿ ತಾರತಮ್ಯವನ್ನು ಬಲಗೊಳಿಸಲು ಮತ್ತು ಮತಾಂತರವನ್ನು ನಿಷೇಧಿಸಲು ಕರ್ನಾಟಕ ರಾಜ್ಯ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆಯ ಕಾಯ್ದೆಗೆ ಕ್ರಮವಹಿಸಲಾಗುತ್ತಿದೆ.

ಕೆಲಸದ ಅವಧಿ 12 ತಾಸುಗಳಿಗೆ ವಿಸ್ತರಣೆ:

ಇದೀಗ ಕಾರ್ಖಾನೆಗಳ ಕಾಯ್ದೆಗೆ ತಿದ್ದುಪಡಿ ಮಾಡಿ ಕಾರ್ಮಿಕರ ಕೆಲಸದ ಅವಧಿಯನ್ನು 12 ತಾಸುಗಳಿಗೆ ವಿಸ್ತರಿಸುವ ಮೂಲಕ ಕಾರ್ಮಿಕರ ಶ್ರಮ ಶಕ್ತಿಯ ವ್ಯಾಪಕ ಲೂಟಿಗೆ ಕ್ರಮವಹಿಸಿದೆ.

ರಾಜ್ಯದ ಸೌಹಾರ್ದತೆಗೆ ಹಾನಿ:

ರಾಜ್ಯದ ಸೌಹಾರ್ದತೆಗೆ ಹಾನಿಯುಂಟು ಮಾಡುವ ಕೆಲಸದಲ್ಲಿ ಮತಾಂಧ ಶಕ್ತಿಗಳು ಗಂಭೀರವಾಗಿ ತೊಡಗಿಕೊಂಡಿವೆ. ಇದರಿಂದ ಪ್ರಗತಿಪರರು ಅಲ್ಪ ಸಂಖ್ಯಾತರು ಮತ್ತು ದಲಿತರು ಬೆದರಿಕೆಗೊಳಗಾಗಿದ್ದಾರೆ. ಕೆಲವರನ್ನು ಕೊಲ್ಲಲಾಗಿದೆ. ಈ ಸರಕಾರ ಈ ಹಿಂದುತ್ವವಾದಿ ಮತಾಂಧ ಶಕ್ತಿಗಳನ್ನು ನಿಗ್ರಹಿಸುವ ಬದಲು ಕುಮ್ಮಕ್ಕು ನೀಡುವ ಮತ್ತು ಅಲ್ಪ ಸಂಖ್ಯಾತ ಸಮುದಾಯಗಳಿಗೆ ತಾರತಮ್ಯ ಮಾಡುವ ಕೆಲಸದಲ್ಲಿ ತೊಡಗಿದೆ. ಸ್ವತಃ ಮುಖ್ಯಮಂತ್ರಿಗಳು ಹಿಂದುತ್ವವಾದಿಗಳು ಕೊಲ್ಲಲ್ಪಟ್ಟಾಗ ಅವರ ಮನೆಗಳಿಗೆ ಖುದ್ದಾಗಿ ಭೇಟಿ ನೀಡಿ ಸಾಂತ್ವಾನ ಹೇಳಿ, ಸರಕಾರದ ಬೊಕ್ಕಸದಿಂದ ತಲಾ 25 ಲಕ್ಷ ರೂಗಳನ್ನು ನೀಡುತ್ತಾರೆ. ಆದರೇ ಅದೇ ರೀತಿ ಹಿಂದುತ್ವವಾದಿಗಳಿಂದ ಕೊಲ್ಲಲ್ಪಟ್ಟ ಮುಸ್ಲಿಂ ಸಮುದಾಯದವರಿಗೆ ಸಾಂತ್ವಾನ ಹೇಳುವುದಿಲ್ಲ ಮತ್ತು ಪರಿಹಾರವನ್ನು ನೀಡುವುದಿಲ್ಲ. ಈ ರೀತಿ ಬಹಿರಂಗವಾಗಿ ಸಂವಿಧಾನವನ್ನು ಉಲ್ಲಂಘಿಸುವ, ಧಾರ್ಮಿಕ ತಾರತಮ್ಯ ಎಸಗುವ ದುಷ್ಕೃತ್ಯದಲ್ಲಿ ತೊಡಗುತ್ತಾರೆ.

ಇತಿಹಾಸವನ್ನು ತಿರುಚುವ ಮೂಲಕ ಮಕ್ಕಳ ಮನದಲ್ಲಿ ಕೋಮುವಾದದ ವಿಷವನ್ನು ಬಿತ್ತುವ ಕೆಲಸಕ್ಕೆ ಕೈಹಾಕಿದೆ. ಸರಕಾರದ ಹಣವನ್ನು ಜಾತಿವಾದ, ಕೋಮುವಾದದ ಧೃವೀಕರಣಕ್ಕೆ ಬಳಸುತ್ತದೆ.

ಶೇ 40 ಕಮಿಷನ್:

ಕೋವಿಡ್ ಸಂದರ್ಭದಲ್ಲಿ ಆಸ್ಪತ್ರೆ ಯ ಬೆಡ್ ಗಳು, ಔಷಧಿಗಳ ಕೃತಕ ಅಭಾವ ಸೃಷ್ಟಿಸಿ ಲೂಟಿ ಮಾಡಿದವರ ಮೇಲೆ ಕಠಿಣ ಕ್ರಮವಹಿಸದೇ ಮೌನ ಮೆರೆದ ಕೀರ್ತಿ ಈ ಸರಕಾರದ್ದಾಗಿದೆ. ದೇಶದಲ್ಲಿಯೇ ಅತ್ಯಂತ ಭ್ರಷ್ಟತೆಯ ರಾಜ್ಯವೆಂಬ ಕುಖ್ಯಾತಿಗೆ ರಾಜ್ಯವನ್ನು ತಳ್ಳಿದೆ. ಶೇ 40 ಕಮಿಷನ್ ಪಡೆಯುವ ಸರಕಾರವೆಂದು ನಾಮಾಂಕಿತಗೊಂಡಿದೆ.

ಈ ಎಲ್ಲಾ ಕಾರಣಗಳಿಂದ, ಬಿಜೆಪಿ ದುರಾಡಳಿತದಿಂದ ರಾಜ್ಯದ ರಕ್ಷಣೆಯು ಬಹಳ ಪ್ರಮುಖವಾಗಿದ್ದು, ಈ ಚುನಾವಣೆಯಲ್ಲಿ ರಾಜ್ಯದ ಜನತೆ ಬಿಜೆಪಿ ಪಕ್ಷವನ್ನು ನಿರ್ಣಾಯಕವಾಗಿ ಸೋಲಿಸುವುದು ಅಗತ್ಯವಾಗಿದೆ. ಒಂದು ವೇಳೆ ಬಿಜೆಪಿ ಪುನಃ ಅಧಿಕಾರಕ್ಕೆ ಬಂದರೆ, ರಾಜ್ಯದ ಜನತೆ ಮತ್ತಷ್ಟು ಸಂಕಷ್ಟಕ್ಕೆ, ದೌರ್ಜನ್ಯಕ್ಕೆ ತುತ್ತಾಗಬೇಕಾಗುತ್ತದೆ.

ಬಿಜೆಪಿಯನ್ನು ನಿರ್ಣಾಯಕವಾಗಿ ಸೋಲಿಸುವುದೆಂದರೇನು?

ರಾಜ್ಯದ ವಿಧಾನಸಭಾ ಸ್ಥಾನಗಳು 224 ಇದ್ದು, ಅದರಲ್ಲಿ 113 ಸ್ಥಾನಗಳನ್ನು ಪಡೆದಲ್ಲಿ ಸರಳ ಬಹುಮತದ ಮೂಲಕ ಯಾವುದೇ ರಾಜಕೀಯ ಪಕ್ಷಕ್ಕೆ ಸರಕಾರ ರಚನೆಗೆ ಅವಕಾಶ ವಿರುತ್ತದೆ. ಕಳೆದ ಚುನಾವಣೆಯಲ್ಲಿ ಬಿಜೆಪಿ 104 ಸ್ಥಾನಗಳನ್ನು ಪಡೆದು ಹೆಚ್ಚು ಪುಟ 14 ಕ್ಕೆ



ಕೃಪೆ: ಸತೀಶ್ ಆಚಾರ್ಯ



'ಗುಜರಾತ್ ಮಾದರಿ' ಕಾರ್ಯತಂತ್ರ ಬಿಜೆಪಿಗೆ ತಿರುಗುಬಾಣವಾಯಿತೇ?

ವಸಂತರಾಜ ಎನ್.ಕೆ.

<u>ಬಿಜೆಪಿಯಲ್ಲಿ ಸೀಟು ಹಂಚಿಕೆಯ ನಂತರ ಭುಗಿಲೆದ್ದ ಬಂಡಾಯದ ಸ್ಫೋಟದ ಪ್ರಮಾಣವು ಹಿಂದೆಂದೂ ಇಲ್ಲದಷ್ಟು. ಬಿಜೆಪಿ ನಾಯಕತ್ವ ತನ್ನ ಚುನಾವಣಾ ಕಾರ್ಯತಂತ್ರದಲ್ಲಿ, ನಿರ್ದಿಷ್ಟವಾಗಿ ಸೀಟು ಹಂಚಿಕೆಯಲ್ಲಿ ಎಡವಿದೆಯೇ? ಚುನಾವಣಾ ಫಲಿತಾಂಶಗಳ ಮೇಲೆ ಈ ಬಂಡಾಯದ ಪರಿಣಾಮ ಏನು? ಎಂಬ ಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನವಿದು.</u>

ಜಗದೀಶ್ ಶೆಟ್ಟರ್, ಲಕ್ಷ್ಮಣ್ ಸವದಿ, ಇಬ್ಬರು ಸಂಸದರು ಸೇರಿದಂತೆ ಬಿಜೆಪಿಯ ಹಲವು ಹಿರಿಯ ನಾಯಕರು ಇತರ ಪಕ್ಷಗಳಿಗೆ ಸೇರ್ಪಡೆಯಾದದ್ದು ಕಳೆದ ವಾರ ಕರ್ನಾಟಕ ಚುನಾವಣಾ ರಂಗದಲ್ಲಿನ ಪ್ರಮುಖ ಬೆಳವಣಿಗೆ. ಬಿಜೆಪಿಯ ಮಾಜಿ ಸಿ.ಎಂ. ಮತ್ತು ಆರು ಬಾರಿ ಶಾಸಕರಾಗಿದ್ದ ಜಗದೀಶ್ ಶೆಟ್ಟರ್ ಅವರನ್ನು ಚುನಾವಣಾ ರಾಜಕೀಯದಿಂದ ನಿವೃತ್ತಿಯಾಗುವಂತೆ ಕೇಳಲಾಯಿತು, ಅದನ್ನು ಅವರು ನಿರಾಕರಿಸಿದರು. ಅವರು ತಮ್ಮ ಬೆಂಬಲಿಗರೊಂದಿಗೆ ಪಕ್ಷಕ್ಕೆ ರಾಜೀನಾಮೆ ನೀಡಿದರು. ಕೂಡಲೇ ಅವರಿಗೆ ಕಾಂಗ್ರೆಸ್‌ನಿಂದ ಆಹ್ವಾನ ಬಂತು. ತಮ್ಮದೇ ಕ್ಷೇತ್ರದಿಂದ ಈಗ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ನಾನು 'ಶುದ್ಧ'ನಾಗಿರುವುದರಿಂದ ಐಟಿ, ಇಡಿ ದಾಳಿಗಳಿಗೆ ಹೆದರುವುದಿಲ್ಲ ಎಂದು ಶೆಟ್ಟರ್ ಬಿಜೆಪಿಗೆ ಟಾಂಟ್ ಕೊಟ್ಟಿದ್ದಾರೆ. ಅವರು ಆರ್‌ಎಸ್‌ಎಸ್ ಹಿನ್ನೆಲೆಯಿಂದ ಬಂದವರು ಮತ್ತು ಆರ್‌ಎಸ್‌ಎಸ್/ಬಿಜೆಪಿ ಕುಟುಂಬದಿಂದ ಬಂದವರು, ಪಕ್ಷದ ಶಿಸ್ತಿನ ನಾಯಕ ಎಂದು ಪರಿಗಣಿಸಲ್ಪಟ್ಟಿದ್ದಾರೆ. ಕೆಲವು ದಿನಗಳ ಹಿಂದೆ ಸಹ ಇದನ್ನು ನಿರೀಕ್ಷಿಸಲೂ ಸಾಧ್ಯವಿರಲಿಲ್ಲ. ಮಾಜಿ ಡಿಸಿಎಂ ಲಕ್ಷ್ಮಣ ಸವದಿ ಕೂಡ ಕಾಂಗ್ರೆಸ್ ಸೇರಿ ಟಿಕೆಟ್ ಪಡೆದಿದ್ದಾರೆ.

ಬಿಜೆಪಿ ನಾಯಕತ್ವವು ತನ್ನ ಚುನಾವಣಾ ತಂತ್ರದಲ್ಲಿ ಎಡವಿದೆಯೇ? ಈ ಪ್ರಶ್ನೆಗೆ ಉತ್ತರಿಸಲು ಮೂರು ಥೀಯರಿಗಳನ್ನು ಮುಂದಿಡಲಾಗುತ್ತಿದೆ. 'ಚಾಣಕ್ಯ ಪೆದ್ದನಲ್ಲ, ಭಾರೀ ಚಾಣಾಕ್ಷ' ಎಂಬುದು ಈ ಮೂರು ಥೀಯರಿಗೂ ಸಾಮಾನ್ಯವಾಗಿರುವ ಅಂಶ.

ಒಟ್ಟಾರೆ ಬಿಜೆಪಿ ಯಲ್ಲಿ ಸೀಟು ಹಂಚಿಕೆಯ ನಂತರ ಭುಗಿಲೆದ್ದ ಬಂಡಾಯದ ಸ್ಫೋಟದ ಪ್ರಮಾಣವು ಅಭೂತಪೂರ್ವವಾಗಿದೆ. ಕಳೆದ ಬಾರಿ ಎರಡನೇ ಸ್ಥಾನ ಪಡೆದಿರುವ ಅಥವಾ ಗೆಲ್ಲುವ ಸಾಮರ್ಥ್ಯ ಹೊಂದಿದ್ದ ಮತ್ತು 18 ಹಾಲಿ ಶಾಸಕರು ಮತ್ತು ಹಲವು ಪ್ರಬಲ ಆಕಾಂಕ್ಷಿಗಳಿಗೆ ಟಿಕೆಟ್ ನಿರಾಕರಿಸಲಾಗಿದೆ. ಕನಿಷ್ಠ 20 ಕ್ಷೇತ್ರಗಳಲ್ಲಿ ಬಿಜೆಪಿ ಕಛೇರಿಗಳ ಒಳಗೆ ಅಥವಾ ಎದುರು ತೀವ್ರ ಪ್ರತಿಭಟನೆ, ಹಿಂಸಾಚಾರ/ಗಲಾಟೆಗಳು ನಡೆದಿವೆ ಎಂದು ವರದಿಯಾಗಿದೆ. 40ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಬಿಜೆಪಿ ಗಂಭೀರ ಬಂಡಾಯ/ರಾಜೀನಾಮೆ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಚುನಾವಣಾ ಫಲಿತಾಂಶಗಳ ಮೇಲೆ ಈ ಬಂಡಾಯದ ಪರಿಣಾಮ ಏನು? ಬಿಜೆಪಿ ನಾಯಕತ್ವ ತನ್ನ ಚುನಾವಣಾ ಕಾರ್ಯತಂತ್ರದಲ್ಲಿ, ನಿರ್ದಿಷ್ಟವಾಗಿ ಸೀಟು ಹಂಚಿಕೆಯಲ್ಲಿ ಎಡವಿದೆಯೇ ಎಂಬ ಪ್ರಶ್ನೆಗಳೂ ಎದ್ದಿವೆ.

ಬಿಜೆಪಿ ತನ್ನ ಚುನಾವಣಾ ಕಾರ್ಯತಂತ್ರದಲ್ಲಿ ಎಡವಿದೆಯೇ?

ಬಿಜೆಪಿ ನಾಯಕತ್ವವು ತನ್ನ ಚುನಾವಣಾ ತಂತ್ರದಲ್ಲಿ ಎಡವಿದೆಯೇ? ಈ ಪ್ರಶ್ನೆಗೆ ಉತ್ತರಿಸಲು ಮೂರು ಥೀಯರಿಗಳನ್ನು ಮುಂದಿಡಲಾಗುತ್ತಿದೆ. 'ಚಾಣಕ್ಯ ಪೆದ್ದನಲ್ಲ, ಭಾರೀ ಚಾಣಾಕ್ಷ' ಎಂಬುದು ಈ ಮೂರು ಥೀಯರಿಗೂ ಸಾಮಾನ್ಯವಾಗಿರುವ ಅಂಶ.

ಮೊದಲ ಥಿಯರಿಯ ಪ್ರಕಾರ, ಗುಜರಾತ್‌ನಲ್ಲಿ ಬಳಸಿದ ಚುನಾವಣಾ ತಂತ್ರವನ್ನು ಅಂದರೆ, 'ಗುಜರಾತ್ ಮಾದರಿ'ಯನ್ನು ಕರ್ನಾಟಕದಲ್ಲಿ ಅಳವಡಿಸಲಾಯಿತು. ಏಕೆಂದರೆ ಎರಡೂ ಪರಿಸ್ಥಿತಿಗಳು ಒಂದೇ ರೀತಿಯಾಗಿವೆ. 2019 ರ ಲೋಕಸಭೆ ಚುನಾವಣೆಯಲ್ಲಿ ಭಾರಿ ಗೆಲುವು ದಕ್ಕಿದೆ. ಮತ್ತು ರಾಜ್ಯ ಸರ್ಕಾರ ತೀವ್ರವಾದ ಆಡಳಿತ ವಿರೋಧಿ ಅಲೆಯನ್ನು ಎದುರಿಸುತ್ತಿದೆ. ಅದಕ್ಕೆ ಹೂಡಲಾದ ಕಾರ್ಯತಂತ್ರವೆಂದರೆ – ಕಳಂಕಿತ ಅಥವಾ ತೀವ್ರ ಆಡಳಿತ–ವಿರೋಧಿ ಆಕ್ರೋಶವನ್ನು ಎದುರಿಸುತ್ತಿರುವ ಶಾಸಕರನ್ನು ಕೈಬಿಡುವುದು, ಬಣಗಳನ್ನು ಸೃಷ್ಟಿಸುವ ಮತ್ತು ಕೇಂದ್ರ/ಆರ್‌ಎಸ್‌ಎಸ್ ನಿರ್ದೇಶನಗಳನ್ನು ನಿರ್ಲಕ್ಷಿಸುವ ಸಾಧ್ಯತೆಯಿರುವ ಜಾತಿ/ಜನಸಮೂಹ ನೆಲೆ ಹೊಂದಿರುವ ಹಳೆಯ ಪ್ರಬಲ ನಾಯಕರನ್ನು ಹೊರಹಾಕುವುದು, ಕೋಮುವಾದವನ್ನು ನಿರ್ಲಜ್ಜವಾಗಿ ಮುನ್ನಡೆಸಬಲ್ಲ ಮತ್ತು ಕೇಂದ್ರ/ಆರ್‌ಎಸ್‌ಎಸ್ ನಿರ್ದೇಶನಗಳನ್ನು ಪಾಲಿಸುವ, ಉಗ್ರವಾದಿ 'ಹೊಸ ತಾಜಾ' ಮುಖಗಳನ್ನು ತರುವುದು. ಈ 'ಗುಜರಾತ್ ಮಾದರಿ'ಯನ್ನು ಹೊರದಬ್ಬಲ್ಪಟ್ಟ ನಾಯಕರು ಶಿಸ್ತಿನಿಂದ ನಮ್ರವಾಗಿ ಸ್ವೀಕರಿಸುತ್ತಾರೆ ಎಂಬುದು ನಿರೀಕ್ಷೆಯಾಗಿತ್ತು. ಆದರೆ ಅನಿರೀಕ್ಷಿತವಾಗಿ ಹಲವು ಹಿರಿಯ ನಾಯಕರು ಶಿಸ್ತು ಉಲ್ಲಂಘಿಸಿದ್ದರಿಂದ 'ಗುಜರಾತ್ ಮಾದರಿ'ಗೆ ತೀವ್ರ ಸವಾಲು ಎದುರಾಗಿದೆ.

'ಗುಜರಾತ್ ಮಾದರಿಯನ್ನು ಜಾರಿಗೊಳಿಸುವ ಹೆಸರಿನಲ್ಲಿ ಬಿಜೆಪಿಯ ಒಂದು ಬಣ, ತನ್ನದೇ ಆದ ಬಣದ ಉದ್ದೇಶಗಳನ್ನು ಪೂರೈಸಿದೆ ಎಂಬುದು ಎರಡನೇ ಥೀಯರಿಯ ಹೂರಣ. ಬಿ.ಎಲ್. ಸಂತೋಷ್ ಮತ್ತು ಪ್ರಹ್ಲಾದ್ ಜೋಶಿ ನೇತೃತ್ವದ ಬಣವು ಕೇಂದ್ರ ನಾಯಕತ್ವವನ್ನು ಸರಿಯಾಗಿಯೇ ದಾರಿ ತಪ್ಪಿಸುವ ಮೂಲಕ, ಇತರ ಬಣಗಳ ಮೇಲೆ ಮೇಲುಗೈ ಸಾಧಿಸಲು ಕೆಲವು ವರ್ಷಗಳಿಂದ ಪ್ರಯತ್ನಿಸುತ್ತಿತ್ತು. ಕರ್ನಾಟಕದಲ್ಲಿ ಬಿಜೆಪಿಯಲ್ಲಿ ಲಿಂಗಾಯತ ಮತ್ತು ಇತರ ಕೆಲವು ನಾಯಕರು ಸಾಕಷ್ಟು ಪ್ರಾಬಲ್ಯ ಹೊಂದಿದ್ದರು. ಅವರಲ್ಲಿ ಹೆಚ್ಚಿನವರು ಆಯಾ ಜಾತಿ/ಜನಸಮೂಹಗಳ ನೆಲೆಯನ್ನು ಹೊಂದಿದ್ದರು. ಪ್ರಬಲ ಲಿಂಗಾಯತ ನಾಯಕರೂ ಪ್ರಬಲ ಜನಸಮೂಹ ನೆಲೆ ಹೊಂದಿದ್ದ ಯಡಿಯೂರಪ್ಪ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸುವ ಮೂಲಕ ಈ ಬಣ ತನ್ನ ಕಾರ್ಯತಂತ್ರ ಆರಂಭಿಸಿದೆ. ಈ ಬಣ ಸ್ವತಂತ್ರ ಜಾತಿ/ಸಾಮೂಹಿಕ ನೆಲೆಯನ್ನು ಹೊಂದಿರುವ ಎಲ್ಲ ನಾಯಕರನ್ನು ಒಂದಲ್ಲ ಒಂದು ನೆಪದಲ್ಲಿ ಹೊರಹಾಕಲು (ಅಂತಿಮವಾಗಿ ಸೀಟು ಹಂಚಿಕೆಯಲ್ಲಿ) ಪ್ರಯತ್ನಿಸಿತು. ಸಂಭಾವ್ಯ ಸಿಎಂ ಆಕಾಂಕ್ಷಿಗಳು ಮತ್ತು ತಮ್ಮ ಅನುಯಾಯಿಗಳಿಗೆ ಟಿಕೆಟ್‌ಗಾಗಿ ಒತ್ತಾಯ ಹೇರಬಲ್ಲ ಶೆಟ್ಟರ್, ಸವದಿ (ಲಿಂಗಾಯತ ನಾಯಕರು), ಈಶ್ವರಪ್ಪ (ಒಬಿಸಿ ನಾಯಕ), ಲಿಂಬಾವಳಿ (ದಲಿತ ಮುಖಂಡರು) ಅವರುಗಳಿಗೆ ಟಿಕೆಟ್ ನಿರಾಕರಿಸಲಾಯಿತು. ಸೋಮಣ್ಣ (ಲಿಂಗಾಯತ ನಾಯಕ) ಮತ್ತು ಆರ್ ಅಶೋಕ್ (ಒಕ್ಕಲಿಗ ನಾಯಕ) ಮೇಲೆ ಹೊರಿಸಲಾದ ಸವಾಲಿನ 'ಎರಡು ಸೀಟು ಪ್ರಯೋಗ ಕೂಡ ಇದೇ ತಂತ್ರದ ಭಾಗವಾಗಿತ್ತು. ಈ ಕಾರ್ಯತಂತ್ರಕ್ಕೆ 'ಗುಜರಾತ್ ಮಾದರಿ'ಯ ಹೆಸರಲ್ಲಿ ಕೇಂದ್ರ ನಾಯಕತ್ವದ ಒಪ್ಪಿಗೆ ಪಡೆಯಲಾಯಿತು. ಈ ಕಾರ್ಯತಂತ್ರಕ್ಕೆ ಬಂಡಾಯವನ್ನು ನಿರೀಕ್ಷಿಸಲಾಗಿತ್ತು. ಹೊರದಬ್ಬಲ್ಪಟ್ಟ ನಾಯಕರು ಅದನ್ನು ಶಿಸ್ತಿನಿಂದ ಸ್ವೀಕರಿಸುತ್ತಾರೆ ಅಥವಾ ಪಕ್ಷ ಬಿಟ್ಟು ಹೋಗುತ್ತಾರೆ (ತೊಲಗಿದರೆ ಪೀಡೆ ಕಳೆಯಿತು!) ಮತ್ತು ಸ್ವತಂತ್ರವಾಗಿ ಅಥವಾ ಇತರ ಪಕ್ಷಗಳ ಮೂಲಕ ಸ್ಪರ್ಧಿಸುತ್ತಾರೆ ಎಂಬ ನಿರೀಕ್ಷೆ ಇತ್ತು. ಟಿಕೆಟ್‌ಗಳನ್ನು ಹೆಚ್ಚಾಗಿ ಹೊಸ 'ತಾಜಾ ಮುಖ'ಗಳಿಗೆ ಅಥವಾ ತಮ್ಮದೇ ಆದ ನೆಲೆಯ ಕೊರತೆಯಿಂದ ಕೇಂದ್ರ/ಆರ್‌ಎಸ್‌ಎಸ್ ನಿರ್ದೇಶನಗಳನ್ನು 'ಜೀ ಹುಜೂರ್' ಎಂದು ಪಾಲಿಸುವವರಿಗೆ ನೀಡಲಾಯಿತು. ಬಿ.ಎಲ್. ಸಂತೋಷ್ ಅಥವಾ ಪ್ರಹ್ಲಾದ್ ಜೋಶಿ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲು ಅನುಕೂಲ ಮಾಡಿಕೊಡುವುದು ಇದರ ಉದ್ದೇಶವಾಗಿತ್ತು. ಈ ಬಣದ ತಂತ್ರವು ಇತರ ಎಲ್ಲ ಜಾತಿ ಲಾಬಿಗಳನ್ನು ದುರ್ಬಲಗೊಳಿಸುವ ಮತ್ತು ಅಧೀನಗೊಳಿಸುವ ಮೂಲಕ ಬಿಜೆಪಿಯಲ್ಲಿ ಆರೆಸ್ಸೆಸ್/ಬ್ರಾಹ್ಮಣ ಲಾಬಿಯ ಪ್ರಾಬಲ್ಯವನ್ನು ಮರು ಸ್ಥಾಪಿಸುವ ತಂತ್ರ ಎಂದೂ ವ್ಯಾಖ್ಯಾನಿಸಲಾಗಿದೆ.

ರಾಜ್ಯದಲ್ಲಿ ಬಿಜೆಪಿ ಪಕ್ಷ ಮತ್ತು ಅದರ ಸರ್ಕಾರದ ಮೇಲೆ ಆರೆಸ್ಸೆಸ್ ತನ್ನ ನಿಯಂತ್ರಣವನ್ನು ಬಿಗಿಗೊಳಿಸುತ್ತಿದೆ. ಯಡಿಯೂರಪ್ಪನವರ ಪ್ರಾಬಲ್ಯವನ್ನು ಒಂದು ಅಡಚಣೆ ಎಂದು ಪರಿಗಣಿಸಲಾಗಿದೆ ಮತ್ತು ಅದನ್ನು ನಿಭಾಯಿಸಿದ ನಂತರ ಅವರು ಇತರ ಅಡೆತಡೆಗಳನ್ನು ತೆಗೆದು ಹಾಕಲು ಮುಂದಾಗಿದೆ.

ಮೂರನೆಯ ಥಿಯರಿ, ಬಿಜೆಪಿ ಬಹುಮತವನ್ನು ಪಡೆಯುವುದಿಲ್ಲ ಮತ್ತು ಅದು ಅತಂತ್ರ ವಿಧಾನಸಭೆ ಆಗಬಹುದು ಎಂಬ ನಿರೀಕ್ಷೆಯೊಂದಿಗೆ ಈ ಕಾರ್ಯತಂತ್ರವು ಒಂದು ಚಾಣಾಕ್ಷ 'ಮಾಸ್ಟರ್ ಪ್ಲಾನ್' ಆಗಿದೆ ಎಂದು ಪರಿಗಣಿಸುತ್ತದೆ. ಹೀಗಾಗಿ ಬಿಜೆಪಿ ತನ್ನ ನಾಯಕರನ್ನು, ಸದಸ್ಯರನ್ನು ಕಾಂಗ್ರೆಸ್ ಮತ್ತು ಜೆಡಿಎಸ್‌ಗೆ 'ಟ್ರೋಜನ್ ಹಾರ್ಸ್' ಆಗಿ ಕಳುಹಿಸಿದೆ. ಬಂಡಾಯ, ರಾಜೀನಾಮೆ, ಇತರ ಪಕ್ಷಗಳಿಗೆ ಸೇರುವುದು– ಇವು ಎಲ್ಲಾ ಈ ಮಾಸ್ಟರ್ ಪ್ಲಾನ್ ನ ಭಾಗಗಳೇ. ಸೂಕ್ತ ಸಮಯದಲ್ಲಿ, ಅವರು ಅಗತ್ಯವಿರುವಂತೆ ಇತರರೊಂದಿಗೆ 'ಘರ್–ವಾಪ್ಸಿ' ಮಾಡುತ್ತಾರೆ. ಫಲಿತಾಂಶ ಏನೇ ಬರಲಿ. ಬಿಜೆಪಿ ಸರಕಾರ ರಚನೆಯಾಗುತ್ತದೆ.

ಲಭ್ಯವಿರುವ ಸತ್ಯಗಳು ಮತ್ತು ಮಾಹಿತಿ ಎರಡನೇ ಥಿಯರಿಗೆ ಹೆಚ್ಚು ಸರಿಯಾಗಿ ಹೊಂದಿಕೊಳ್ಳುತ್ತವೆ. ಶೆಟ್ಟರ್ ತಮ್ಮ ಮತ್ತು ಇತರ ನಾಯಕರನ್ನು ಹೊರದಬ್ಬಿದ್ದಕ್ಕಾಗಿ ಸಂತೋಷ್ ಮತ್ತು ಜೋಶಿಯನ್ನು ಬಹಿರಂಗವಾಗಿ ಆರೋಪಿಸಿದ್ದಾರೆ. ಮಾಧ್ಯಮಗಳು ಕೂಡ 'ಸಂತೋಷ್ ಪಾತ್ರ'ದ ಬಗ್ಗೆ ಮುಕ್ತವಾಗಿ ಮಾತನಾಡುತ್ತಿವೆ. ಅದು ಮೊದಲು ಗುಸು–ಗುಸು ಮಟ್ಟದಲ್ಲೇ ಇತ್ತು. ಆದರೆ ಇತರ ಎರಡು ಊಹೆಗಳನ್ನು ಈಗಿನಿಂದಲೇ ತಳ್ಳಿಹಾಕಲಾಗುವುದಿಲ್ಲ.

ರಾಜ್ಯದಲ್ಲಿ ಬಿಜೆಪಿ ಪಕ್ಷ ಮತ್ತು ಅದರ ಸರ್ಕಾರದ ಮೇಲೆ ಆರೆಸ್ಸೆಸ್ ತನ್ನ ನಿಯಂತ್ರಣವನ್ನು ಬಿಗಿಗೊಳಿಸುತ್ತಿದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. 2019 ರ ಲೋಕಸಭೆಯಲ್ಲಿ ಹಿಂದುತ್ವ ಮತ್ತು ಮೋದಿಯ ಮೇಲಿನ ಗೆಲುವು ಅದಕ್ಕೆ ಮತ್ತಷ್ಟು ಧೈರ್ಯ ತುಂಬಿದೆ. ಪಕ್ಷದ ಮೇಲೆ ಯಡಿಯೂರಪ್ಪನವರ ಪ್ರಾಬಲ್ಯವನ್ನು ಒಂದು ಅಡಚಣೆ ಎಂದು ಪರಿಗಣಿಸಲಾಗಿದೆ ಮತ್ತು ಅದನ್ನು ನಿಭಾಯಿಸಿದ ನಂತರ ಅವರು ಇತರ ಅಡೆತಡೆಗಳನ್ನು ತೆಗೆದು ಹಾಕಲು ಮುಂದಾದರು.

ಬಿಜೆಪಿ ಬಂಡಾಯದ ಪರಿಣಾಮವೇನು?

ಈ ಬಂಡಾಯದ ನಂತರ ಬಿಜೆಪಿ ಹಿಂಜರಿತ ಅನುಭವಿಸುವುದೇ ಅಥವಾ ಅದರ ಕತೆ ಮುಗಿಯಿತು ಎನ್ನಬಹುದೇ? ಕೆಲವು ವೀಕ್ಷಕರು ಹೇಳುತ್ತಿರುವುದಕ್ಕೆ ವಿರುದ್ಧವಾಗಿ, ಯಾರೂ ಆ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ನಿಜ, ಬಂಡಾಯದಿಂದಾಗಿ ಬಿಜೆಪಿಗೆ ನಷ್ಟವಾಗಿದೆ. ಆದರೆ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಈ ಮೂರು ಪಕ್ಷಗಳ ನಡುವೆ ಬಂಡಾಯ, ರಾಜೀನಾಮೆ ಮತ್ತು 'ಆಯಾ ರಾಮ್, ಗಯಾ ರಾಮ್' ರಾಜ್ಯದಲ್ಲಿ ಹೊಸದೇನಲ್ಲ. ಬಿಜೆಪಿಗೆ ಈ ಪ್ರಮಾಣದಲ್ಲಿ ಎದುರಾಗಿರುವುದು ಮಾತ್ರ ಹೊಸದು. ಆದರೆ ಬಿಜೆಪಿ ಪಕ್ಷ ಮತ್ತು ಸರ್ಕಾರದ ಮಟ್ಟದಲ್ಲಿ ಸಾಮ–ಬೇಧ–ದಂಡ (ಐಟಿ/ಇಡಿ ದಾಳಿಗಳ ಬೆದರಿಕೆ ಇತ್ಯಾದಿ) ಇವು ಗಳಿಂದ ಬಂಡಾಯವನ್ನು ಇನ್ನೂ ನಿರ್ವಹಿಸಬಹುದು ಮತ್ತು ಹಾನಿ ನಿಯಂತ್ರಣವನ್ನು (ಉದಾ. ನಾಮನಿರ್ದೇಶನಗಳನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸುವುದು, ಪ್ರಚಾರ ಮಾಡದಿರುವುದು) ಮಾಡಬಹುದು. ಯಾವುದೇ

ಪುಟ 14 ಕ್ಕೆ

ಪುಲ್ವಾಮಾ ಭಯೋತ್ಪಾದನಾ ದಾಳಿಗೆ ಮೋದಿ ಸರ್ಕಾರವೇ ಹೊಣೆ....... ಪುಟ 6 ರಿಂದ

ಕಾಶ್ಮೀರದ ಜನರಿಗೆ ಆರ್ಟಿಕಲ್ 370 ರದ್ದತಿ ಕೇವಲ ವದಂತಿ ಎಂದು ಹೇಳಿದ್ದೀರಿ. ಆದರೆ ಎರಡು ದಿನಗಳ ನಂತರ ಆರ್ಟಿಕಲ್ 370 ರದ್ದಾಯಿತು ಮಾತ್ರವಲ್ಲ, ಕಾಶ್ಮೀರವೂ ತನ್ನ ರಾಜ್ಯದ ಸ್ಥಾನಮಾನವನ್ನು ಕಳೆದುಕೊಂಡಿತು. ಯಾವುದು ನಿಜ? 370 ಅನ್ನು ಅಳಿಸಲಾಗುತ್ತದೆ ಎಂದು ನಿಮಗೆ ನಿಜವಾಗಿಯೂ ತಿಳಿದಿರಲಿಲ್ಲವೇ? ಕೇಂದ್ರ ಸರ್ಕಾರದಿಂದ ಯಾರಾದರೂ ನಿಮ್ಮೊಂದಿಗೆ ಮಾತನಾಡಿದ್ದಾರೆಯೇ? ಅವರು ನಿಮ್ಮನ್ನು ನಂಬುವುದಿಲ್ಲವೇ? ಅಥವಾ ಸತ್ಯ ತಿಳಿದೂ ಸುಳ್ಳು ಹೇಳಿದ್ದೀರಾ?

ಸತ್ಯಪಾಲ್: ಆ ಸಂದರ್ಶನದಲ್ಲಿ ನನಗೆ ಏನೂ ಹೇಳಲಿಲ್ಲ. ಇದನ್ನು ಮೆಹಬೂಬಾ ಅವರಿಗೂ ಹೇಳಿದ್ದೆ, ಸೆಕ್ಷನ್ 370 ರದ್ದತಿ ಎಂದರೆ ಜೇಬಿನಿಂದ ಕಾಗದ ತೆಗೆದು ಬಿಸಾಡಿದಂತೆ ಅಲ್ಲ! ಸಂಸತ್ತು ಸೇರಿದಂತೆ ಹಲವೆಡೆ ಚರ್ಚೆಯಾಗಬೇಕು. ಹಾಗಾಗಿ ಯಾರೂ ನನಗೆ ಏನೂ ಹೇಳಲಿಲ್ಲ ಎಂಬುದು ಸತ್ಯ. 4ರ ರಾತ್ರಿಯೇ ಗೃಹ ಸಚಿವರು ನನಗೆ ಕರೆ ಮಾಡಿದ್ದರು. ಒಂದು ನಿರ್ಣಯ ಕಳುಹಿಸಲಾಗಿದ್ದು, ಅದಕ್ಕೆ ಅಲ್ಲಿನ ಸಮಿತಿಯಿಂದ ಅನುಮೋದನೆ ಪಡೆದು ಮರುದಿನ 11 ಗಂಟೆಗೆ ಕಳುಹಿಸಬೇಕು ಎಂದು ತಿಳಿಸಿದ್ದರು. ಆಗಸ್ಟ್ 5 ರಂದು ಆರ್ಟಿಕಲ್ 370 ರದ್ದಾಗಲಿದೆ ಎಂದು ಆಗ ನನಗೆ ತಿಳಿಯಿತು.

ನಾನು ಅಲ್ಲಿ ಅಧಿಕಾರ ವಹಿಸಿಕೊಂಡ ಮೊದಲ ದಿನದಿಂದ, ಅದು ಏನಾಗಬಹುದು ಎಂದು ನನಗೆ ತಿಳಿದಿತ್ತು. ನನ್ನನ್ನು ಸಮಾಲೋಚಿಸಲು ಕಾನೂನಿನ ಅವಶ್ಯಕತೆ ಇದೆ ಎಂದು ಅವರಿಗೆ ತಿಳಿದಿದೆ. ಆದರೆ, ನನಗೆ ಮಾಹಿತಿ ನೀಡಿಲ್ಲ. ನಾನು ಅದರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಅಧಿಕಾರ ಅವರ ಕೈಯಲ್ಲಿತ್ತು. ಅವರು ಮಾಡಿದರು. ನನ್ನ ಸಲಹೆ ಕೇಳಲಿಲ್ಲ. ಇದು ನಿಜ. ಕಾಶ್ಮೀರದ ದೊಡ್ಡ ದುರಂತವೆಂದರೆ ಅಲ್ಲಿ ಕೇಂದ್ರ ಸರ್ಕಾರ ಏನು ಬೇಕಾದರೂ ಮಾಡಬಹುದು ಎಂದು ಅವರು ಭಾವಿಸಿದ್ದರು. ಅಲ್ಲಿ ಯಾರಾದರೂ ಏನು ಯೋಚಿಸುತ್ತಾರೆ ಎಂಬುದನ್ನು ಅವರು ಲೆಕ್ಕಿಸುವುದಿಲ್ಲ. ಕಾಶ್ಮೀರದಲ್ಲಿ ಹಿಂಸಾಚಾರದಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಮಾತಿನ ಮೂಲಕ ಏನು ಬೇಕಾದರೂ ಸಾಧಿಸಬಹುದು. ಇದನ್ನೇ ನಾನು ಪುನರುಚ್ಚರಿಸಿದೆ.

ಥಾಪರ್: 370 ರದ್ದತಿ ಬಿಜೆಪಿಯ ಬಹುಕಾಲದ ಗುರಿಯಾಗಿದೆ. ಆದರೆ ಜಮ್ಮು ಮತ್ತು ಕಾಶ್ಮೀರದ ರಾಜ್ಯದ ಸ್ಥಾನಮಾನವನ್ನು ತೆಗೆದುಹಾಕುವುದು ಜನರನ್ನು ವ್ಯವಸ್ಥಿತವಾಗಿ ಅವಮಾನಿಸಿದಂತಾಗಲಿಲ್ಲವೇ?

ಸತ್ಯಪಾಲ್: ಹೌದು! 370 ನೇ ವಿಧಿಯನ್ನು ತೆಗೆದುಹಾಕುವುದಕ್ಕಿಂತಲೂ ರಾಜ್ಯದ ಸ್ಥಾನಮಾನವನ್ನು ತೆಗೆದುಹಾಕುವುದು ದೊಡ್ಡ ಅನ್ಯಾಯ ಮತ್ತು ಅವಮಾನ ಎಂದು ಜನರು ನೋಡುತ್ತಾರೆ.

ಥಾಪರ್: ರಾಜ್ಯ ವಿಭಜನೆ ಮತ್ತು ಸ್ಥಾನಮಾನ ವಂಚಿತ ಎರಡೂ ತಪ್ಪು ಎನ್ನುತ್ತೀರಾ?

ಸತ್ಯಪಾಲ್: ಹೌದು. ಎರಡೂ ತಪ್ಪು. ಆದಾಗ್ಯೂ, ಲಡಾಖ್‌ನ ಜನರು ಜಮ್ಮು ಮತ್ತು ಕಾಶ್ಮೀರಕ್ಕೆ ಸೇರಲು ಉತ್ಸುಕರಾಗಿರಲಿಲ್ಲ. ಹಾಗಾಗಿ ಲಡಾಖ್ ವಿಭಜನೆ ದೊಡ್ಡ ತಪ್ಪು ಎಂದು ನಾನು ಹೇಳುವುದಿಲ್ಲ.

ಭ್ರಷ್ಟಾಚಾರದ ಬಗ್ಗೆ ಪ್ರಧಾನಿಗೆ ಹೆಚ್ಚಿನ ಕಾಳಜಿ ಇಲ್ಲ.

ಥಾಪರ್: ಈ ಅಕ್ರಮಗಳಲ್ಲಿ ಪ್ರಧಾನಿಯವರ ಪಾತ್ರವೂ ಇದೆ ಎಂದು ಹೇಳುತ್ತಿದ್ದೀರಾ?

ಸತ್ಯಪಾಲ್: ನಾನು ಹಾಗೆ ಹೇಳಿಲ್ಲ. ಆದರೆ ಒಂದು ವಿಷಯವನ್ನು ನಾನು ಖಚಿತವಾಗಿ ಹೇಳಬಲ್ಲೆ. ಭ್ರಷ್ಟಾಚಾರದ ಬಗ್ಗೆ ಪ್ರಧಾನಿ ಮೋದಿಗೆ ಹೆಚ್ಚಿನ ಕಾಳಜಿ ಇಲ್ಲ.

ಥಾಪರ್: ನೀವು ಹೇಳುವುದು ಆಘಾತಕಾರಿಯಾಗಿದೆ. ಪ್ರಧಾನಿಯವರು ಪ್ರತಿದಿನ ಭ್ರಷ್ಟಾಚಾರದ ವಿರುದ್ಧ ಮಾತನಾಡುತ್ತಾರೆ. ಕಾಂಗ್ರೆಸ್ ಮತ್ತು ಹಲವು ಪ್ರಾದೇಶಿಕ ಪಕ್ಷಗಳು ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಭ್ರಷ್ಟಾಚಾರ ನಿರ್ಮೂಲನೆ ಮಾಡುವವರೆಗೂ ನಾನು ವಿರಮಿಸುವುದಿಲ್ಲ ಎಂದು ಅವರು ಹೇಳುತ್ತಾರೆ. ಆದರೆ ನೀವಿಲ್ಲಿ ಅವರಿಗೆ ಭ್ರಷ್ಟಾಚಾರದ ಬಗ್ಗೆ ಕಾಳಜಿ ಇಲ್ಲ ಎನ್ನುತ್ತಿದ್ದೀರಾ?

ಸತ್ಯ ಪಾಲ್: ಹಸೀಬ್ ತ್ರಬು ಭ್ರಷ್ಟಾಚಾರದ ಕುಖ್ಯಾತಿ! ಆದರೆ ಪ್ರಧಾನಿಯವರೇ ಭೇಟಿಯಾಗುವಂತೆ ಹಲವು ಬಾರಿ ಹೇಳಿದ್ದರು. ಹಸೀಬ್ ಒಬ್ಬ ಭ್ರಷ್ಟ ವ್ಯಕ್ತಿ ಎಂದು ನಾನು ಪ್ರಧಾನಿಗೆ ಹೇಳಿದ್ದೆ. ನಾನು ಗೋವಾಕ್ಕೆ ರಾಜ್ಯಪಾಲನಾಗಿ ವರ್ಗಾವಣೆಯಾದಾಗ ಪ್ರಧಾನಿ ಮನೆಯಲ್ಲಿ ಹಣ ಕೈ ಬದಲಾಯಿತು. ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ನಾನು ಪ್ರಧಾನಿಗೆ ಹೇಳಿದ್ದೆ. ಆದರೆ ಪ್ರಧಾನಿ ಅದನ್ನು ನಿರಾಕರಿಸಿದರು. ನಾನು ಸಾಕ್ಷಿ ಕೊಟ್ಟೆ. ಆದರೆ ಒಂದು ವಾರದಲ್ಲಿ ನಾನು ದೂರದ ಮೇಘಾಲಯಕ್ಕೆ ವರ್ಗಾವಣೆ ಮಾಡಿದರು. ಇದರ ಅರ್ಥವೇನು, ನೀವೇ ಹೇಳಿ!



ಥಾಪರ್: ಗೋವಾದ ವಿಚಾರವನ್ನಷ್ಟೇ ಇಟ್ಟುಕೊಂಡು ಭ್ರಷ್ಟಾಚಾರ ನಿರ್ಮೂಲನೆಗೆ ಪ್ರಧಾನಿಗೆ ಆಸಕ್ತಿ ಇಲ್ಲ ಎನ್ನುತ್ತಿದ್ದೀರಾ?

ಸತ್ಯಪಾಲ್: ಅಷ್ಟೇ ಅಲ್ಲ. ಪ್ರಧಾನಿ ಕಾರ್ಯಾಲಯ ಕೆಲವರ ಹೆಸರಿನಿಂದ ಅವರು ನಿರ್ಧಾರಗಳನ್ನು ತೆಗೆದುಕೊಳ್ಳಲು ಒತ್ತಾಯಿಸುತ್ತಾರೆ. ಉದಾಹರಣೆಗೆ ಜಿತೇಂದ್ರ ಸಿಂಗ್. ಇದನ್ನು ಪ್ರಧಾನಿಯವರಿಗೂ ಹೇಳಿದ್ದೆ. ಆದರೆ ಕ್ರಮವಿಲ್ಲ.

ಥಾಪರ್: ನೀವು ಪ್ರಧಾನಿಯನ್ನು ದೂರುತ್ತೀರಿ. ಜನರು ಇದನ್ನು ನೋಡುತ್ತಾರೆ. ಈ ಬಗ್ಗೆಯೂ ಸರ್ಕಾರ ಗಮನ ಹರಿಸಲಿದೆ. ಇದು ಪ್ರಧಾನಿಯವರ ಗಮನಕ್ಕೂ ಬರಬಹುದು.

ಸತ್ಯಪಾಲ್: ಒಂದು ಗಂಟೆಯಲ್ಲಿ ಪ್ರಧಾನಿ ಗಮನಕ್ಕೆ ಬರುತ್ತೆ.

ಥಾಪರ್: ಈ ಸಂದರ್ಶನದ ನಂತರ ಮೋದಿಯವರ ಕೋಪ ನಿಮ್ಮ ಮೇಲೆ ಹೆಚ್ಚಾಗುವುದಿಲ್ಲವೇ?

ಸತ್ಯಪಾಲ್: ಹೌದು! ಕೆಲವೊಮ್ಮೆ ನೀವು ಸತ್ಯವನ್ನು ಹೇಳಿದಾಗ ಅದು ಸಹಜ.

ಥಾಪರ್: ಪ್ರಧಾನಿ ಬಗ್ಗೆ ನಿಮ್ಮ ಮೌಲ್ಯಮಾಪನವೇನು?

ಸತ್ಯ ಪಾಲ್: ಜಗತ್ತಿನ ಅನೇಕ ಜನರಿಗೆ ಇರುವಷ್ಟು ಪ್ರಧಾನಿಯ ಅಂದಾಜು ನನಗಿಲ್ಲ. ಆ ಹುದ್ದೆಗೆ ಅವರಲ್ಲಿರುವ ಮಾಹಿತಿ ಮತ್ತು ಜ್ಞಾನವು ಸಾಕಾಗುವುದಿಲ್ಲ.

ಥಾಪರ್: ಮುಸ್ಲಿಮರನ್ನು ನಡೆಸಿಕೊಳ್ಳುವ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಸತ್ಯಪಾಲ್: ಅವರನ್ನು ನಡೆಸಿಕೊಳ್ಳುವ ರೀತಿ ತಪ್ಪು. ಅವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರನ್ನೆಲ್ಲ ಭಾರತದಿಂದ ಓಡಿಸಲು ಸಾಧ್ಯವಿಲ್ಲ. ಹಾಗಾಗಿ ಅವರನ್ನು ಸಮಾಧಾನ ಪಡಿಸುವುದು ಅಗತ್ಯ. ಅವರನ್ನು ದೂರವಿಡುವ ರೀತಿಯಲ್ಲಿ ವರ್ತಿಸುವುದು ಸರಿಯಲ್ಲ. ನೀವು ಅವರೊಂದಿಗೆ ಇರಲು ಬಯಸಿದರೆ, ದಯೆ ಮತ್ತು ಶಾಂತಿಯಿಂದಿರಿ.

ಥಾಪರ್: ಬಿಬಿಸಿ. ಸಮಸ್ಯೆಗೆ ಪ್ರಧಾನಿ ಧೋರಣೆ ಸರಿಯೇ?

ಸತ್ಯಪಾಲ್: ಇಲ್ಲ. ಸಂಪೂರ್ಣವಾಗಿ ತಪ್ಪು. BBC ಗೌರವಾನ್ವಿತ ಮಾಧ್ಯಮ. ಇದನ್ನು ಈ ರೀತಿ ಪರಿಗಣಿಸಬಾರದು.

ಅದಾನಿ ಹಗರಣ ಬಿಜೆಪಿಗೆ ಕೆಟ್ಟದ್ದು

ಥಾಪರ್: ಅದಾನಿ ಹಗರಣದಂಥದ್ದು ಭಾರತದಲ್ಲಿ ಇದುವರೆಗೆ ನಡೆದಿಲ್ಲ. ಸರ್ಕಾರ ಮತ್ತು ಪ್ರಧಾನಿ ಬಾಯಿ ಮುಚ್ಚಿಕೊಂಡಿದ್ದಾರೆ. ಇದು ಸರಿ ಇದೆಯಾ?

ಸತ್ಯಪಾಲ್: ಸಂಪೂರ್ಣವಾಗಿ ತಪ್ಪು. ಒಂದು ವೇಳೆ ನಾನು ಪ್ರಧಾನಿಯಾಗಿದ್ದರೆ, ಈ ಹಗರಣ ಹೊರ ಬಂದ ದಿನವೇ ಅದಾನಿಯನ್ನು ಕೈ ತೊಳೆದುಕೊಳ್ಳುತ್ತಿದ್ದೆ. ಅದಾನಿ ವಿಚಾರವು ಮೋದಿ ಸರ್ಕಾರಕ್ಕೆ ಭಾರಿ ಹೊಡೆತ ನೀಡಿದೆ. ಈ ಸಮಸ್ಯೆ ಕೆಳ ಹಂತಕ್ಕೆ ಹೋಗಿದೆ. ಅದಾನಿ ಹಗರಣದ ಬಗ್ಗೆ ಗ್ರಾಮಸ್ಥರು ತಮ್ಮದೇ ಭಾಷೆಯಲ್ಲಿ ವಿಡಿಯೋಗಳನ್ನು ಬಿಡುಗಡೆ ಮಾಡುತ್ತಿದ್ದಾರೆ. ಅಂತಹ ಒಂದು ಹಾಡು: "ಅವನು ತೇಗದ ಅಂಗಡಿಯವನಲ್ಲ; ಹಸುವಿಗೆ ಮಾಲೀಕನಿಲ್ಲ; ಅವನು ಅಂಬಾನಿ/ಅದಾನಿ ಅಭಿಮಾನಿ; ರಾಷ್ಟ್ರವನ್ನು ಮಾರುವ ಮನುಷ್ಯ'. – ಯಾವಾಗ ಜನರು ತಮ್ಮ ಭಾಷೆಯಲ್ಲಿ ಈ ರೀತಿ ಮಾತನಾಡಲು ಅಥವಾ ಹಾಡಲು ಪ್ರಾರಂಭಿಸುತ್ತಾರೆ ಎಂದರೆ ಸರ್ಕಾರವು ಪ್ರತ್ಯೇಕವಾಗಿದೆ ಎಂದರ್ಥ.

ಥಾಪರ್: ಅದಾನಿ ಸಮಸ್ಯೆ 2024ರಲ್ಲಿ ಮೋದಿ ಮೇಲೆ ಪರಿಣಾಮ ಬೀರಲಿದೆಯೇ?

ಸತ್ಯಪಾಲ್: ಖಂಡಿತ! ಅದಾನಿ ವಿಚಾರ ಚುನಾವಣೆಯಲ್ಲಿ ಪ್ರತಿಧ್ವನಿಸಲಿದೆ. ಬಿಜೆಪಿಗೆ ಪ್ರಮುಖ ಸೋಲು ಕಾದಿದೆ, ಅದರಲ್ಲೂ ಬಿಜೆಪಿ ವಿರುದ್ಧ ವಿರೋಧ ಪಕ್ಷಗಳ ಒಗ್ಗಟ್ಟಿನ ನೇರ ಸ್ಪರ್ಧೆಯಿದ್ದರೆ ಬಿಜೆಪಿಗೆ ಹೀನಾಯ ಸೋಲು ಖಚಿತ.

ಎಲ್ಲವೂ ಮೇಲ್ಪಟ್ಟದಲ್ಲಿ ನಿರ್ಧಾರ

ಥಾಪರ್: ರಾಹುಲ್ ಗಾಂಧಿಗೆ ಸಂಸತ್ತಿನಲ್ಲಿ ಮಾತನಾಡಲು ಅವಕಾಶ ನೀಡದಿರುವ ಬಗ್ಗೆ ಪ್ರಶ್ನೆ.

ಸತ್ಯಪಾಲ್: ಅವರಿಗೆ ಮಾತನಾಡಲು ಅವಕಾಶ ನೀಡಬೇಕಿತ್ತು. ಅದು ಆತನ ಹಕ್ಕು.

ಥಾಪರ್: ಅವರಿಗೆ ಅನುಮತಿ ನಿರಾಕರಿಸುವುದು ಸಭಾನಾಯಕರ ನಿರ್ಧಾರವೇ? ಅಥವಾ ಮೇಲ್ಮಟ್ಟದಲ್ಲಿ ತೆಗೆದುಕೊಂಡ ನಿರ್ಧಾರವೇ?

ಸತ್ಯಪಾಲ್: ಅಲ್ಲಿ ಯಾರಾದರೂ ನಿರ್ಧರಿಸಬಹುದೇ? ನೀವು ಆಘಾತಕ್ಕೊಳಗಾಗುತ್ತೀರಿ. ನಾನು ರಾಜ್ಯಪಾಲರಾಗಿದ್ದಾಗ ರಾಷ್ಟ್ರಪತಿಗಳನ್ನು ಭೇಟಿ ಮಾಡಲು ಸಮಯ ನಿಗದಿಪಡಿಸಲಾಗಿತ್ತು. ನಾನು ಅಲ್ಲಿಗೆ ಹೋಗುತ್ತಿದ್ದೆ. ಇದ್ದಕ್ಕಿದ್ದಂತೆ ನನಗೆ ಈ ಸಂದರ್ಶನ ರದ್ದಾಗಿದೆ ಎಂಬ ಸಂದೇಶ ಬಂತು. ನಂತರ ವಿಚಾರಿಸಿದಾಗ ಗೊತ್ತಾಯಿತು. ರಾಷ್ಟ್ರಪತಿಯವರನ್ನು ಭೇಟಿ ಮಾಡುವವರ ಪಟ್ಟಿ ಕೂಡ ಪ್ರಧಾನಿ ಕಾರ್ಯಾಲಯದಲ್ಲಿ ನಿರ್ಧಾರವಾಗುತ್ತದೆ ಎಂದು!

ಥಾಪರ್: ರಾಜ್ಯಪಾಲರನ್ನು ಆಯ್ಕೆ ಮಾಡುವಲ್ಲಿ ಒಂದು ವಿಧಾನ ಇರಬೇಕು ಎಂದು ಸಂದರ್ಶನದಲ್ಲಿ ಹೇಳಿದ್ದೀರಿ. ನೀವಿದನ್ನು ವಿವರಿಸುತ್ತೀರಾ?

ಸತ್ಯಪಾಲ್: ಹೌದು! ರಾಜ್ಯಪಾಲರು ಯಾರೆಂದು ಒಬ್ಬರು ಅಥವಾ ಇಬ್ಬರು ನಿರ್ಧರಿಸಬಾರದು. ಇದರಲ್ಲಿ ಪಾರದರ್ಶಕತೆ ಅಗತ್ಯವಿದೆ. ಮೂರನೇ ವರ್ಗದ ಜನ ರಾಜ್ಯಪಾಲರಾಗುತ್ತಿದ್ದಾರೆ. ನಮ್ಮ ವ್ಯವಸ್ಥೆಗಳು ಹದಗೆಡುತ್ತಿವೆ. ಯಾವುದೇ ಕೇಂದ್ರೀಯ ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಸಂಘದ ಹೊರಗೆ ಆಯ್ಕೆ ಮಾಡಲಾಗುವುದಿಲ್ಲ ಮತ್ತು ಬಹುಶಃ ಕಾಲೇಜು ಪ್ರಾಂಶುಪಾಲರಾಗಲು ಅರ್ಹತೆಗಳನ್ನು ಹೊಂದಿಲ್ಲ.

ಥಾಪರ್: ನಿಮ್ಮ ಸಂದರ್ಶನಕ್ಕಾಗಿ ತುಂಬಾ ಧನ್ಯವಾದಗಳು. ಇದು ಕೆಲವು ಭೂಕಂಪಗಳಿಗೆ ಕಾರಣವಾಗಬಹುದು. ಅನೇಕರು ನಿಮ್ಮನ್ನು ಕೆರಳಿಸಲು ಪ್ರಯತ್ನಿಸುತ್ತಾರೆ. ನಿಮ್ಮ ವಿರುದ್ಧವೂ ಮೊಕದ್ದಮೆಗಳು ಹರಿಯಬಹುದು. ನೀವು ಸುರಕ್ಷಿತವಾಗಿರಿ ಎಂದು ನಾನು ಪ್ರಾರ್ಥಿಸುತ್ತೇನೆ.

ಸತ್ಯಪಾಲ್: ಧನ್ಯವಾದಗಳು! ನಿಮ್ಮ ಆಶೀರ್ವಾದದಲ್ಲಿ ನಾನು ಸುರಕ್ಷಿತವಾಗಿರುತ್ತೇನೆ.

> ಪುಲ್ವಾಮ ದಾಳಿಗೆ ಮುನ್ನ 'ಆ' ಕಾರು 10 ದಿನಗಳಿಂದ ಆ ಪ್ರದೇಶದಲ್ಲಿ ಓಡಾಡಿಕೊಂಡಿತ್ತು. ಯಾರಿಗೂ ಎಲ್ಲೂ ಸಿಗಲಿಲ್ಲ. ಅದನ್ನು ಎಲ್ಲಿಯೂ ತಡೆಯಲಿಲ್ಲ. ಇದು ನೂರಕ್ಕೆ ನೂರು ಗುಪ್ತಚರ ಇಲಾಖೆಯ ತಪ್ಪು. ಮತ್ತು ನಮ್ಮ ತಪ್ಪು! ನಮ್ಮ ವ್ಯವಸ್ಥೆಯ ತಪ್ಪು. ನಾನು ನನ್ನನ್ನು ಸೇರಿಸಿಕೊಳ್ಳುತ್ತೇನೆ. ಸರ್ಕಾರಕ್ಕೆ ಎಲ್ಲ ವಿವರ ಗೊತ್ತಿದೆ. ಆದರೆ ಅದನ್ನು ಮುಚ್ಚಿಡಲು ಸರ್ಕಾರ ನಿರ್ಧರಿಸಿದರೆ, ಅದು ಹೇಗೆ ಹೊರಬರುತ್ತದೆ!

ಉತ್ತರ ಪ್ರದೇಶದಲ್ಲಿ ಪೋಲಿಸ್ ಬೆಂಗಾವಲಿನ ನಡುವೆಯೇ ಭೀಕರ ಹತ್ಯೆ: ಉನ್ನತ ಮಟ್ಟದ ತನಿಖೆ ಅಗತ್ಯ

ಉತ್ತರಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ಮಾಜಿ ಸಂಸತ್ ಸದಸ್ಯ ಅತೀಕ್ ಅಹ್ಮದ್ ಮತ್ತು ಆತನ ಸಹೋದರ ಅಶ್ರಫ್ ಪೊಲೀಸ್ ಕಸ್ಟಡಿಯಲ್ಲಿದ್ದಾಗ ಮತ್ತು ಮಾಧ್ಯಮಗಳ ಸಮ್ಮುಖದಲ್ಲಿಯೇ ಭೀಕರವಾಗಿ ಹತ್ಯೆಯಾಗಿರುವುದು ಉತ್ತರ ಪ್ರದೇಶವು ಸಂಪೂರ್ಣವಾಗಿ ಒಂದು ಕಾನೂನುಹೀನ ರಾಜ್ಯವಾಗಿ ಬಿಟ್ಟಿದೆ ಎಂಬುದನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಭಾರೀ ಪೊಲೀಸ್ ಬೆಂಗಾವಲು ಇದ್ದಾಗಲೂ ಈ ಇಬ್ಬರು ವ್ಯಕ್ತಿಗಳನ್ನು ಹತ್ಯೆ ಮಾಡಿದ ರೀತಿ, ಇದರಲ್ಲಿ ಅಧಿಕೃತ ಶಾಮೀಲಿನ ಸಂದೇಹ ಮೂಡಿಸುತ್ತದೆ. ಇದನ್ನು ಎನ್‌ಕೌಂಟರ್ ಹತ್ಯೆಗಳು ಮತ್ತೆ-ಮತ್ತೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ನೋಡಬೇಕು, ಇವು ನ್ಯಾಯಾಂಗ ಬಾಹಿರ ಕೊಲೆಗಳಲ್ಲದೆ ಬೇರೇನೂ ಅಲ್ಲ.

ಇಂತಹ ಪರಿಸ್ಥಿತಿಗೆ ಆದಿತ್ಯನಾಥ್ ಸರಕಾರವೇ ನೇರ ಹೊಣೆ ಎಂದಿರುವ ಸಿಪಿಐ(ಎಂ), ಹೈಕೋರ್ಟ್‌ನ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ಉನ್ನತ ಮಟ್ಟದ ತನಿಖೆಯಾಗಬೇಕು ಮತ್ತು ಈ ಹತ್ಯೆಯ ಹಿಂದೆ ಇರುವವರನ್ನು ಪತ್ತೆ ಹಚ್ಚಿ ಕಠಿಣಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.



ಭವಿಷ್ಯ ಇರುವುದೇ ಕೆಂಬಾವುಟದಲ್ಲಿ

ನಮ್ಮ ಭವಿಷ್ಯ ಉತ್ತಮವಾಗಿರಲು, ನಿಮ್ಮ ಮತ ಸಿಪಿಐ(ಎಂ) ಅಭ್ಯರ್ಥಿ ಡಾ. ಅನಿಲ್ ಕುಮಾರ್ ಅವರಿಗೆ

ನಮ್ಮ ಭವಿಷ್ಯ, ದೇಶದ ಭವಿಷ್ಯ ಎರಡೂ ಇರುವುದು ಕೆಂಬಾವುಟದಲ್ಲೇ..

ಈ ಮಾತುಗಳು ಕೇಳಿದ್ದು ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಚುನಾವಣಾ ಪ್ರಚಾರದ ಸಂದರ್ಭದಲ್ಲಿ. ಕೆಂಬಾವುಟಗಳನ್ನು ಹಿಡಿದ ಭವಿಷ್ಯದ ಭಾರತದ ಪ್ರಜೆಗಳಾದ ಮಕ್ಕಳು. ಮಕ್ಕಳನ್ನು ಚುನಾವಣಾ ಪ್ರಚಾರಗಳಿಗೆ ಬಳಸುವಂತಿಲ್ಲ. ಆದರೆ ಈ ಮಕ್ಕಳು ತಾವು ಹುಟ್ಟಿದಾಗಿನಿಂದ ನೋಡುತ್ತಾ ಬೆಳೆದ ಕೆಂಬಾವುಟದ ಮೇಲಿನ ಅಭಿಮಾನವನ್ನು ತೋರ್ಪಡಿಸಿದ್ದ ರೀತಿ ಇದು.

ಬೆಳಿಗ್ಗೆ 6 ಗಂಟೆಗೆ ಪ್ರಾರಂಭವಾದ ಚುನಾವಣಾ ಪ್ರಚಾರ ಪಳ್ಳಿ ಪಳ್ಳಿಗಳಲ್ಲಿ (ಹಳ್ಳಿಗಳು) ಮತದಾರರನ್ನ ಭೇಟಿ ಮಾಡುವ ಸಮಯ... ಅಭ್ಯರ್ಥಿ ಊರಿಗೆ ಬರುವ ಮುನ್ನ ಹಾರ, ಆರತಿ ಹಿಡಿದು ಜನ ಕಾಯುತ್ತಾ ನಿಂತಿರುತ್ತಿದ್ದರು...

ಊರಿಗೆ ಕೆಂಬಾವುಟ ಹಾರಾಡುತ್ತ ಬರುತ್ತಿದ್ದಂತೆ ಅದರ ಮೇಲಿನ ಅಭಿಮಾನ ಇಮ್ಮಡಿಗೊಳಿಸುತ್ತಿರುವುದು ಅವರ ಮುಖಗಳಲ್ಲಿ ಭಾಸವಾಗುತ್ತಿತ್ತು.

ಸುಮಾರು 80 ವರ್ಷಕ್ಕೂ ಹೆಚ್ಚು ವಯಸ್ಸಾದ ಒಬ್ಬ ಹಿರಿಯ ಸಂಗಾತಿಯೊಬ್ಬರು ಜೀವನದಲ್ಲಿ ಎಷ್ಟೇ ಸಮಸ್ಯೆಗಳಿದ್ದರು ಒಮ್ಮೆ ಕೆಂಬಾವುಟ ನೋಡಿದರೆ ಸಾಕು ಹುಮ್ಮಸ್ಸು, ಶಕ್ತಿ ಎಲ್ಲವೂ ಹೆಚ್ಚಾಗುತ್ತದೆ. ಪಕ್ಷದಲ್ಲಿ ಯಾರು ಬರಲಿ, ಯಾರು ಹೋಗಲಿ ಕೆಂಬಾವುಟ ಇರುವವರೆಗೂ ನಾವು ಈ ಪಕ್ಷದಲ್ಲಿರುತ್ತೇವೆ. ಅದೇ ನಮ್ಮ ಜೀವ ಎಂದರು...

ಇವರೆಲ್ಲರ ಮಾತುಗಳನ್ನು ಕೇಳುತ್ತಿದ್ದರೆ ಇವರು ಕೆಂಬಾವುಟವನ್ನು ಹಿಡಿದು ನಡೆಸಿದ ಧೀರೋಧಾತ್ತ ಹೋರಾಟದ ಪ್ರತಿಫಲವಾಗಿ ಅವರಿಗೆ ಕೆಂಬಾವುಟದ ಮೇಲಿನ ಅಭಿಮಾನ ಹೆಚ್ಚಾಗಿದೆ ಎನ್ನುವುದು ಸ್ವಷ್ಟ...

ಬಂಡವಾಳಶಾಹಿ ರಾಜಕೀಯ ಪಕ್ಷಗಳು ಅತ್ಯಂತ ಕೆಟ್ಟ ರೀತಿಯಲ್ಲಿ ಚುನಾವಣೆಗಳನ್ನು ನಡೆಸಿದರೂ ಬಾಗೇಪಲ್ಲಿ ಭಾಗದಲ್ಲಿ ಈಗಲೂ ಮಾತ್ರ ಇವರುಗಳನ್ನ ಕೆಂಬಾವುಟದಿಂದ ದೂರ ಮಾಡಲು ಯಾರಿಂದಲೂ ಸಾಧ್ಯವಾಗಿಲ್ಲ...

ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರವನ್ನು ಕರ್ನಾಟಕದ ಕೆಂಪುಕೋಟೆ ಎಂದರೆ ತಪ್ಪಾಗಲಾರದು.

– ಎಚ್.ಆರ್. ನವೀನ್ ಕುಮಾರ್, ಹಾಸನ





ಪ್ರಸ್ತುತ ಚುನಾವಣೆಯಲ್ಲಿ ಬಂಡವಾಳಶಾಹಿ ರಾಜಕೀಯ ಪಕ್ಷಗಳು ಮತಪಡೆಯಲು ಮತದಾರರಿಗೆ ಹಣದ ಆಮಿಷಗಳನ್ನು ನೀಡುತ್ತಿರುವಾಗ ದುಡಿಯುವ ವರ್ಗದ ಪರ ನಿರಂತರವಾಗಿ ದುಡಿಯುತ್ತಿರುವ ಕಮ್ಯೂನಿಸ್ಟ್ ಪಕ್ಷಗಳಿಗೆ ಜನರೇ ತಮ್ಮ ಆದಾಯದ, ಉಳಿತಾಯದ ಹಣವನ್ನು ನೀಡಿ ಪಕ್ಷದ ಬೆಳವಣಿಗೆಗೆ ಕೆಲಸ ಮಾಡುತ್ತಿದ್ದಾರೆ.

ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಡಾ.ಅನಿಲ್ ಕುಮಾರ್ ನಾರೇಮದ್ದೇಪಲ್ಲಿಯಲ್ಲಿ ಚುನಾವಣಾ ಪ್ರಚಾರ ಮಾಡುತ್ತಾ ಮಾಭಾಷರವರ ಮನೆಯ ಬಳಿ ತೆರಳುತ್ತಿದ್ದಂತೆ ಇವರ ಶ್ರೀಮತಿ ಫಹೀಮಭಾನು, ಮಕ್ಕಳಾದ ನಿಧಾತ ಸ್ಕಿನ್, ನಾಜಿಯ, ಗಾಜಿಯಾ, ಜಿಯಾ ಎಲ್ಲರೂ ಸೇರಿ ತಾವುಗಳು ಉಳಿತಾಯ ಮಾಡಿಟ್ಟಿದ್ದ ಹುಂಡಿಯ ಹಣವನ್ನು ಚುನಾವಣಾ ನಿಧಿಯಾಗಿ ನೀಡಿದರು. ಇದು ಒಂದು ಭಾವನಾತ್ಮಕ ವಾತಾವರಣ ನಿರ್ಮಾಣವಾಯಿತು.



ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) ಸಿಪಿಐ(ಎಂ) ಅಭ್ಯರ್ಥಿ ಎಂ.ನಂಜೇಗೌಡರವರ ನಾಮಪತ್ರ ಸಲ್ಲಿಸಿ ನಂತರ ಕೆ.ಆರ್.ಪುರಂನಲ್ಲಿ ಮೆರವಣಿಗೆ ಮತ್ತು ಬಹಿರಂಗಸಭೆ ನಡೆಸಲಾಯಿತು. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮೀನಾಕ್ಷಿ ಸುಂದರಂ, ರಾಜ್ಯ ಸಮಿತಿ ಸದಸ್ಯರುಗಳಾದ ಗೌರಮ್ಮ, ಕೆ.ಎಸ್. ವಿಮಲಾ, ಎನ್.ಪ್ರತಾಪ್ ಸಿಂಹ, ರೈತ ಮುಖಂಡರಾದ ಟಿ.ಯಶವಂತ, ಪ್ರಚಾರ ಸಮಿತಿ ಅಧ್ಯಕ್ಷರಾದ ಗೋಪಾಲಗೌಡರು ಮಾತನಾಡಿದರು.







ಅತ್ಯಾಚಾರಿಗಳನ್ನು ಬಿಡುಗಡೆ ಮಾಡಿದ್ದಕ್ಕೆ ಕಾರಣಗಳನ್ನು ಕೊಡಿ –ಗುಜರಾತ್ ಸರ್ಕಾರಕ್ಕೆ ಸುಪ್ರೀಂ ಕೋರ್ಟ್

"ಇಂದು ಬಿಲ್ಕಿಸ್, ನಾಳೆ ಯಾರೂ ಆಗಬಹುದು"

ಸಾಮೂಹಿಕ ಅತ್ಯಾಚಾರ ಎಸಗಿದ ತಪ್ಪಿತಸ್ಥರಿಗೆ ಕ್ಷಮಾದಾನವನ್ನು ನೀಡುವಾಗ ಸರಕಾರ ಸರಿಯಾಗಿ ಯೋಚನೆ ಮಾಡಿದೆಯೇ ಎಂಬುದೇ ಪ್ರಶ್ನೆ, ಅದು ಯಾವ ಸಂಗತಿಗಳ ಆಧಾರದಲ್ಲಿ ಈ ನಿರ್ಧಾರ ಕೈಗೊಂಡಿತು?– ಇದು 2002ರ ಗುಜರಾತ್ ಹತ್ಯಾಕಾಂಡದ ಸಂದರ್ಭದಲ್ಲಿ ಬಿಲ್ಕಿಸ್ ಬಾನೊ ಮೇಲೆ ಸಾಮೂಹಿಕ ಅತ್ಯಾಚಾರ ಮತ್ತು ಆಕೆಯ ಕುಟುಂಬದ ಸದಸ್ಯರ ಕಗ್ಗೊಲೆಯ ಪ್ರಕರಣದಲ್ಲಿ ಶಿಕ್ಷೆಗೊಳಗಾದವರಿಗೆ ಕ್ಷಮಾದಾನ ನೀಡಿದ್ದನ್ನು ಪ್ರಶ್ನಿಸಿರುವ ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಎಪ್ರಿಲ್ 18ರಂದು ಸುಪ್ರಿಂ ಕೋರ್ಟ್ ನ್ಯಾಯಪೀಠ ಕೇಳಿದ ಪ್ರಶ್ನೆ.

"ಗರ್ಭಿಣಿ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲಾಯಿತು ಮತ್ತು ಹಲವಾರು ಜನರನ್ನು ಕೊಂದರು. ನೀವು ಈ ಪ್ರಕರಣವನ್ನು ಸಾಮಾನ್ಯ ಸೆಕ್ಷನ್ 302 (ಕೊಲೆ) ಪ್ರಕರಣಗಳೊಂದಿಗೆ ಹೋಲಿಸಲಾಗುವುದಿಲ್ಲ. ಸೇಬನ್ನು ಕಿತ್ತಳೆ ಹಣ್ಣಿನೊಂದಿಗೆ ಹೋಲಿಸಲಾಗುವುದಿಲ್ಲ, ಅದೇ ರೀತಿಯಲ್ಲಿ ಹತ್ಯಾಕಾಂಡವನ್ನು ಒಂದು ಕೊಲೆಯೊಂದಿಗೆ ಹೋಲಿಸಲಾಗುವುದಿಲ್ಲ. ಈ ಅಪರಾಧಗಳನ್ನು ಸಾಮಾನ್ಯವಾಗಿ ಸಮಾಜ ಮತ್ತು ಸಮುದಾಯದ ವಿರುದ್ಧ ಎಸಗಲಾಗುತ್ತದೆ. ಅಸಮಾನವಾದುದನ್ನು ಸಮಾನವಾಗಿ ಪರಿಗಣಿಸಲು ಆಗುವುದಿಲ್ಲ" ಎಂದು ನ್ಯಾಯಮೂರ್ತಿಗಳಾದ ಕೆ ಎಂ ಜೋಸೆಫ್ ಮತ್ತು ಬಿ ವಿ ನಾಗರತ್ನ ಅವರ ಪೀಠವು ಟಿಪ್ಪಣಿ ಮಾಡಿತು ಎಂದು ವರದಿಯಾಗಿದೆ.



ಈ ಮೊದಲು ಮಾರ್ಚ್ 27ರಂದು ವಿಚಾರಣೆಯಲ್ಲಿ ನ್ಯಾಯಪೀಠ **ಈ ಪ್ರಕರಣದ 11 ಅಪರಾಧಿಗಳಿಗೆ ಕ್ಷಮಾದಾನ ನೀಡುವ ಕುರಿತು ಮೂಲ ಕಡತಗಳೊಂದಿಗೆ ಸಿದ್ಧರಾಗಿರಬೇಕು ಎಂದು ಕೇಂದ್ರ ಸರಕಾರ ಮತ್ತು ಗುಜರಾತ್ ರಾಜ್ಯ ಸರಕಾರಕ್ಕೆ ಆದೇಶ ನೀಡಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಕಡತಗಳನ್ನು ನೀಡಲು ಈ ಎರಡೂ ಸರಕಾರಗಳು ಹಿಂದೇಟು ಹಾಕುತ್ತಿರುವಂತೆ ಕಾಣುತ್ತದೆ.** ಈ ಆದೇಶವನ್ನು ಮರುಪರಿಶೀಲಿಸುವಂತೆ ಕೋರಿ ತಾವುಗಳು ಮನವಿ ಸಲ್ಲಿಸಬಹುದು ಎಂದು ಕೇಂದ್ರ ಮತ್ತು ಗುಜರಾತ್ ಸರ್ಕಾರ ಪ್ರಸಕ್ತ ವಿಚಾರಣೆಯ ವೇಳೆಯಲ್ಲಿ ಸುಪ್ರೀಂ ಕೋರ್ಟ್‌ಗೆ ತಿಳಿಸಿವೆ.

ಇತರ ಕೊಲೆ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಕ್ಷಮಾದಾನ ನೀಡಲು ಅನುಸರಿಸುವ ಮಾನದಂಡಗಳನ್ನು ಇಲ್ಲಿಯೂ ಅನ್ವಯಿಸಲಾಗಿತ್ತೇ ಎಂದು ಹಿಂದಿನ ವಿಚಾರಣೆಯ ವೇಳೆಯಲ್ಲಿ ಕೇಳಿದ್ದ ನ್ಯಾಯಪೀಠ ಈ ವಿಚಾರಣೆಯ ವೇಳೆಯಲ್ಲಿ **ಇಡೀ ಸಮಾಜವನ್ನೇ ತಟ್ಟುವ ಹೀನ ಅಪರಾಧಗಳಲ್ಲಿ ಕ್ಷಮಾದಾನವನ್ನು ಪರಿಗಣಿಸುವಾಗ ಅಧಿಕಾರವನ್ನು ಸಾರ್ವಜನಿಕ ಹಿತವನ್ನು ಗಮನದಲ್ಲಿಟ್ಟುಕೊಂಡು ಚಲಾಯಿಸಬೇಕು, ಅಪರಾಧದ ಗಂಭೀರತೆಯನ್ನು ಪರಿಗಣಿಸಬೇಕಾಗಿತ್ತು** ಎಂದೂ ಟಿಪ್ಪಣಿ ಮಾಡಿತು. ಈ ವ್ಯಕ್ತಿಗಳು 15 ವರ್ಷ ಜೈಲಿನಲ್ಲಿದ್ದರು ಎಂದು ಅವರ ಪರವಾಗಿ ವಕಾಲತ್ತು ವಹಿಸಿದವರು ಹೇಳಿದಾಗ **"ಅವರು 15 ವರ್ಷ ಜೈಲಿನಲ್ಲಿದ್ದರೇ? 1000ದಿನಗಳಿಗೂ ಹೆಚ್ಚು ಪೆರೋಲ್!"** ಎನ್ನುತ್ತ ಈ 11 ಅಪರಾಧಿಗಳಿಗೆ ಅವರ ಸೆರೆವಾಸದ ಅವಧಿಯಲ್ಲಿ ನೀಡಲಾದ ಪೆರೋಲ್‌ಗಳನ್ನು ಕೂಡ ನ್ಯಾಯಪೀಠ ಪ್ರಶ್ನಿಸಿತು ಎಂದು ವರದಿಯಾಗಿದೆ.

ಈ ಕ್ಷಮಾದಾನವನ್ನು ಪ್ರಶ್ನಿಸುವ ಅರ್ಜಿಗಳ ಅಂತಿಮ ವಿಲೇವಾರಿಗಾಗಿ ಮೇ 2 ನ್ನು ನಿಗದಿ ಮಾಡಿದ ಪೀಠವು ಎಲ್ಲಾ ಅಪರಾಧಿಗಳು ತಮ್ಮ ಉತ್ತರಗಳನ್ನು ಸಲ್ಲಿಸುವಂತೆ ಕೇಳಿದೆ. ಹಾಗೂ ಮರುಪರಿಶೀಲನಾ ಅರ್ಜಿಯನ್ನು ಸಲ್ಲಿಸುವ ಬಗ್ಗೆ ತನ್ನ ನಿಲುವನ್ನು ಸ್ಪಷ್ಟಪಡಿಸುವಂತೆ ಕೇಂದ್ರ ಮತ್ತು ರಾಜ್ಯ ಸರಕಾರಕ್ಕೆ ಅದು ಹೇಳಿದೆ.

'ಗೋಲಿ ಎಂದರೆ ಔಷಧಿಯ ಗುಳಿಗೆಯಾಗಿರಲಿಕ್ಕಿಲ್ಲವಲ್ಲ!'

ದ್ವೇಷಭಾಷಣಗಳ ಮೇಲೆ ಎಫ್‌ಐಆರ್ ಅರ್ಜಿಗೆ ಉತ್ತರಿಸುವಂತೆ ದಿಲ್ಲಿ ಪೊಲೀಸಿಗೆ ಸುಪ್ರಿಂ ಕೋರ್ಟ್ ಸೂಚನೆ

ಕೇಂದ್ರ ಸಚಿವ ಅನುರಾಗ್ ಠಾಕೂರ್ ರವರ ಕುಪ್ರಸಿದ್ಧ 'ದೇಶ್ ಕೇ ಗದ್ದಾರೋಂ ಕೋ ಗೋಲೀ ಮಾರೋ' ಈಗ ದೇಶದ ಸರ್ವೋಚ್ಚ ನ್ಯಾಯಾಲಯದ ವಿಮರ್ಶೆಗೆ ಒಳಗಾಗಿದೆ. "ಗದ್ದಾರ್ ಅಂದರೆ ದೇಶದ್ರೋಹಿ ಎಂದು ತಾನೇ? ಇಲ್ಲಿ ಗೋಲಿ ಮಾರೋ ಎಂದರೆ ಖಂಡಿತವಾಗಿಯೂ ಔಷಧಿಯ ಗೋಲಿಯಾಗಿರಲಿಕ್ಕಿಲ್ಲ" ಎಂದು ಸುಪ್ರಿಂ ಕೋರ್ಟಿನ ನ್ಯಾಯಪೀಠವೊಂದು ಟಿಪ್ಪಣಿ ಮಾಡಿರುವುದಾಗಿ ವರದಿಯಾಗಿದೆ.

ಅನುರಾಗ್ ಠಾಕುರ್ ಮತ್ತು ಬಿಜೆಪಿ ಸಂಸದ ಪ್ರವೇಶ್ ವರ್ಮಾ ಅವರು ಸಿಎಎ ವಿರೋಧಿ ಪ್ರತಿಭಟನೆಗಳ ಬಗ್ಗೆ ಮಾಡಿದರೆನ್ನಲಾದ ದ್ವೇಷದ ಭಾಷಣಗಳ ವಿರುದ್ಧ ಎಫ್‌ಐಆರ್ ದಾಖಲಿಸಲು ವಿಚಾರಣಾ ನ್ಯಾಯಾಲಯ ನಿರಾಕರಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ ದೆಹಲಿ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯ ವೇಳೆಯಲ್ಲಿ ನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್ ಮತ್ತು ಬಿ.ವಿ.ನಾಗರತ್ನ ಅವರನ್ನೊಳಗೊಂಡ ಪೀಠವು ಈ ಟಿಪ್ಪಣಿ ಮಾಡಿದೆ. ಅಲ್ಲದೆ ಈ ಇಬ್ಬರ ವಿರುದ್ಧ ದ್ವೇಷಭಾಷಣದ ಎಫ್‌ಐಆರ್ ಹಾಕಬೇಕೆಂಬ ಬೃಂದಾ ಕಾರಟ್ ಮನವಿಗೆ ಪ್ರತಿಕ್ರಿಯೆ ನೀಡುವಂತೆ ದೆಹಲಿ ಪೊಲೀಸರಿಗೆ ಸುಪ್ರೀಂ ಕೋರ್ಟ್ ಎಪ್ರಿಲ್ 17ರಂದು ಸೂಚಿಸಿದೆ. ಮೂರು ವಾರಗಳಲ್ಲಿ ಪ್ರತಿಕ್ರಿಯೆ ನೀಡುವಂತೆ ದಿಲ್ಲಿ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಲು ಅದು ಸೂಚಿಸಿದೆ.

ವಿಚಾರಣೆಯ ಸಂದರ್ಭದಲ್ಲಿ, ಈ ಇಬ್ಬರು ಬಿಜೆಪಿ ನಾಯಕರ ವಿರುದ್ಧ ಎಫ್‌ಐಆರ್ ದಾಖಲಿಸಲು ಮಂಜೂರಾತಿಯ ಅಗತ್ಯವಿದೆ ಎಂಬ ಕೆಳ ನ್ಯಾಯಾಲಯದ ತೀರ್ಮಾನ ತಪ್ಪಾಗಿರಬಹುದು ಎಂದು ಮೇಲ್ನೋಟಕ್ಕೆ ಪೀಠವು ಗಮನಿಸಿತು.

ಕಳೆದ ವರ್ಷ ಜೂನ್ 13 ರಂದು ಈ ಇಬ್ಬರು ಬಿಜೆಪಿ ಸಂಸದರ ವಿರುದ್ಧ ದ್ವೇಷಪೂರಿತ ಭಾಷಣಗಳನ್ನು ಕುರಿತಂತೆ ಸಿಪಿಐ(ಎಂ) ನಾಯಕರಾದ ಬೃಂದಾ ಕಾರಟ್ ಮತ್ತು ಕೆಎಂ ತಿವಾರಿ ಅವರು ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ವಜಾಗೊಳಿಸಿತ್ತು. ವಿಚಾರಣಾ ನ್ಯಾಯಾಲಯದ ಆದೇಶದಲ್ಲಿ ಮಧ್ಯಪ್ರವೇಶಿಸಲು ಹೈಕೋರ್ಟ್ ನಿರಾಕರಿಸಿ, ಪ್ರಸ್ತುತ ಸಂಗತಿಗಳಲ್ಲಿ ಎಫ್‌ಐಆರ್ ದಾಖಲಿಸಲು ಸಕ್ಷಮ ಪ್ರಾಧಿಕಾರದಿಂದ ಕಾನೂನು ಮಂಜೂರಾತಿ ಪಡೆಯಬೇಕಾಗುತ್ತದೆ ಎಂದು ಅದು ಹೇಳಿತು.

ಠಾಕೂರ್ ಮತ್ತು ವರ್ಮಾ ಅವರು "ಜನರನ್ನು ಪ್ರಚೋದಿಸಲು ಪ್ರಯತ್ನಿಸಿದ್ದಾರೆ, ಇದರ ಫಲಿತಾಂಶವಾಗಿ ದಿಲ್ಲಿಯ ಎರಡು ವಿಭಿನ್ನ ಪ್ರತಿಭಟನಾ ಸ್ಥಳಗಳಲ್ಲಿ ಮೂರು ಗೋಲೀಬಾರಿನ ಘಟನೆಗಳು ನಡೆದಿವೆ" ಎಂದು ಅರ್ಜಿದಾರರು ವಿಚಾರಣಾ ನ್ಯಾಯಾಲಯದ ಮುಂದೆ ತಮ್ಮ ದೂರಿನಲ್ಲಿ ಹೇಳಿದ್ದರು.

ಜನವರಿ 27, 2020 ರಂದು ರಾಷ್ಟ್ರರಾಜಧಾನಿಯ ರಿಥಾಲಾದಲ್ಲಿ ನಡೆದ ರ್‍ಯಾಲಿಯಲ್ಲಿ, ಶಾಹೀನ್ ಬಾಗ್‌ನ ಸಿಎಎ ವಿರೋಧಿ ಪ್ರತಿಭಟನಾಕಾರರ ಮೇಲೆ ವಾಗ್ದಾಳಿ ನಡೆಸಿದ ನಂತರ ಠಾಕೂರ್ "ಗೋಲೀ ಮಾರೋ ಗದ್ದಾರೋಂಕೊ" ಎಂಬ ಘೋಷಣೆಯನ್ನು ಎತ್ತುವಂತೆ ಪ್ರಚೋದಿಸಿದರು ಎಂದು ಅರ್ಜಿದಾರರು ಆರೋಪಿಸಿದ್ದರು.


ವರ್ಮಾ ಕೂಡ ಜನವರಿ 28, 2020 ರಂದು ಶಾಹೀನ್ ಬಾಗ್ ಪ್ರತಿಭಟನಾಕಾರರ ವಿರುದ್ಧ ಉದ್ರೇಕಕಾರಿ ಭಾಷಣ ಮಾಡಿದ್ದಾರೆ ಎಂದು ಅವರು ಹೇಳಿದ್ದರು.

2021ರ ಆಗಸ್ಟ್ 26ರಂದು ವಿಚಾರಣಾ ನ್ಯಾಯಾಲಯವು ಸಕ್ಷಮ ಪ್ರಾಧಿಕಾರವಾಗಿರುವ ಕೇಂದ್ರ ಸರಕಾರದಿಂದ ಅಗತ್ಯ ಮಂಜೂರಾತಿಯನ್ನು ಪಡೆಯದ ಕಾರಣ ಅರ್ಜಿದಾರರ ದೂರು ನಿಲ್ಲುವುದಿಲ್ಲ ಎಂದು ವಜಾಗೊಳಿಸಿತ್ತು.

ತಮ್ಮ ದೂರಿನಲ್ಲಿ, ಕಾರಟ್ ಮತ್ತು ತಿವಾರಿ ಅವರು ಈ ಇಬ್ಬರು ಬಿಜೆಪಿ ನಾಯಕರ ವಿರುದ್ಧ ಐಪಿಸಿ ಯ 153–ಎ (ಧರ್ಮ, ಜನಾಂಗ, ಜನ್ಮ ಸ್ಥಳ, ನಿವಾಸ, ಭಾಷೆ ಇತ್ಯಾದಿಗಳ ಆಧಾರದ ಮೇಲೆ ವಿವಿಧ ಗುಂಪುಗಳ ನಡುವೆ ದ್ವೇಷವನ್ನು ಉತ್ತೇಜಿಸುವುದು), 153–ಬಿ (ರಾಷ್ಟ್ರೀಯ ಸಮಗ್ರತೆಗೆ ಮಾರಕವಾದ ಆರೋಪಗಳು, ಪ್ರತಿಪಾದನೆಗಳು) ಮತ್ತು 295–ಎ (ಯಾವುದೇ ವರ್ಗದ ಧರ್ಮ ಅಥವಾ ಧಾರ್ಮಿಕ ನಂಬಿಕೆಗಳನ್ನು ಅವಮಾನಿಸುವ ಮೂಲಕ ಧಾರ್ಮಿಕ ಭಾವನೆಗಳನ್ನು ಆಕ್ರೋಶಗೊಳಿಸುವ ಉದ್ದೇಶವನ್ನು ಹೊಂದಿರುವ ಉದ್ದೇಶಪೂರ್ವಕ ಮತ್ತು ದುರುದ್ದೇಶಪೂರಿತ ಕೃತ್ಯಗಳು) ಸೇರಿದಂತೆ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ಗಳನ್ನು ಹಾಕಬೇಕು ಎಂದು ಕೋರಿದ್ದರು.

ಅವರು ಸೆಕ್ಷನ್ 298 (ಯಾವುದೇ ವ್ಯಕ್ತಿಯ ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸುವ ಉದ್ದೇಶಪೂರ್ವಕ ಆಶಯದಿಂದ ಪದೋಚ್ಚಾರಣೆ ಮುಂತಾದವುಗಳನ್ನು ಮಾಡುವುದು), 504 (ಶಾಂತಿ ಭಂಗವನ್ನು ಪ್ರಚೋದಿಸುವ ಆಶಯದಿಂದ ಉದ್ದೇಶಪೂರ್ವಕ ಅವಮಾನ), 505(ಸಾರ್ವಜನಿಕ ಕಿಡಿಗೇಡಿತನಕ್ಕೆ ಕಾರಣವಾಗುವ ಹೇಳಿಕೆಗಳು) ಮತ್ತು 506 (ಕ್ರಿಮಿನಲ್ ಬೆದರಿಕೆಗೆ ಶಿಕ್ಷೆ) ಸೇರಿದಂತೆ ಐಪಿಸಿಯ ಇತರ ಸೆಕ್ಷನ್‌ಗಳ ಅಡಿಯಲ್ಲಿ ಕ್ರಮವನ್ನು ಕೂಡ ಕೋರಿದ್ದರು. ಈ ಅಪರಾಧಗಳಿಗೆ ಗರಿಷ್ಠ ಏಳು ವರ್ಷಗಳ ಜೈಲು ಶಿಕ್ಷೆಯಾಗುತ್ತದೆ ಎಂದು ಹೇಳಲಾಗಿದೆ.

ಇದು ಅಮೃತ ಕಾಲ



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ಫೇಸ್ ಬುಕ್

ಇನ್ನೂ 67 ಆರೋಪಿಗಳ ಖುಲಾಸೆ –ಡಬಲ್ ಇಂಜಿನ್ನಿನ ಕಮಾಲ್‌ಗಳು?

ಇದರ ಬೆನ್ನಲ್ಲೇ ಗುಜರಾತಿನಲ್ಲಿ 2002ರ 9 ಪ್ರಮುಖ ಕೋಮು ಹಿಂಸಾಚಾರದ ಘಟನೆಗಳಲ್ಲಿ ಒಂದಾದ ನರೋದಾ ಗಾಂವ್‌ನಲ್ಲಿ 11 ಮುಸ್ಲಿಮರ ಸಾಮೂಹಿಕ ಹತ್ಯೆಯ ಪ್ರಕರಣದಲ್ಲಿ ಎಲ್ಲ 67 ಆರೋಪಿಗಳನ್ನು ಅಹಮದಾಬಾದಿನ ವಿಶೇಷ ನ್ಯಾಯಾಲಯ ಖುಲಾಸೆ ಮಾಡಿದೆ ಎಂಬ ವರದಿ ಬಂದಿದೆ. ಇದರಲ್ಲಿ ಆಗಿನ ನರೇಂದ್ರ ಮೋದಿಯವರ ರಾಜ್ಯ ಸಂಪುಟದಲ್ಲಿ ಮಂತ್ರಿಯಾಗಿದ್ದ ಮಾಯಾ ಕೊಡ್ನಾನಿ, ಭಜರಂಗ ದಳದ ಮುಖಂಡ ಬಾಬು ಭಜರಂಗಿ ಮತ್ತು ವಿಹೆಚ್‌ಪಿ ಮುಖಂಡ ಜಯದೀಪ್ ಪಟೇಲ್ ಸೇರಿದ್ದಾರೆ.

ಮಾಯಾ ಕೊಡ್ನಾನಿ ಇನ್ನೊಂದು ಪ್ರಮುಖ ಹಿಂಸಾಚಾರದ ಘಟನೆಯಾದ ನರೋದ ಪಾತಿಯ ಪ್ರಕರಣದಲ್ಲಿ 2012ರಲ್ಲಿ 28 ವರ್ಷಗಳ ಜೈಲು ಶಿಕ್ಷೆಗೊಳಗಾಗಿ 2018ರಲ್ಲಿ ಗುಜರಾತ್ ಹೈಕೋರ್ಟ್ ಖುಲಾಸೆ ಮಾಡುವ ವರೆಗೆ ಜೈಲಿನಲ್ಲಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.


ಇದಕ್ಕೆ ಸ್ವಲ್ಪವೇ ಮೊದಲು, ಮಾರ್ಚ್ 31ರಂದು ಇನ್ನೊಂದು ಡಬಲ್ ಇಂಜಿನ್ ಇರುವ ಉತ್ತರ ಪ್ರದೇಶದ ಮಲಿಯಾನದಲ್ಲಿ 36 ವರ್ಷಗಳ ಹಿಂದೆ ಪ್ರಾಂತೀಯ ಸಶಸ್ತ್ರ ದಳ(ಪಿಎಸಿ)ದ ಸಿಬ್ಬಂದಿಯೊಂದಿಗೆ ಹೋಗಿ 72 ಮಂದಿಯ ಕಗ್ಗೊಲೆ ನಡೆಸಿದ ಪ್ರಕರಣದಲ್ಲಿ ಎಲ್ಲ 38 ಆರೋಪಿಗಳನ್ನು ಖುಲಾಸೆ ಮಾಡಿದ್ದ ಸುದ್ದಿ ಬಂದಿತ್ತು.

ಅದೇ ರಾಜ್ಯದಿಂದ ಎಪ್ರಿಲ್ 18ರಂದೇ ಮತ್ತೊಂದು ಸುದ್ದಿ ಬಂದಿದೆ. ಕಳೆದ ವರ್ಷ ಉನ್ನಾವ್‌ನಲ್ಲಿ ಅತ್ಯಾಚಾರಕ್ಕೆ ಒಳಗಾದ ದಲಿತ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರದ ಪ್ರಕರಣದ ಆರೋಪಿಗಳು ಜಾಮೀನಿನಲ್ಲಿ ಹೊರಬಂದು ಆಕೆಯ ಮನೆಗೆ ನುಗ್ಗಿ ಬೆಂಕಿ ಹಚ್ಚಿರುವ ಸುದ್ದಿ. ಇಬ್ಬರು ಮಕ್ಕಳು ಇದರಲ್ಲಿ ಗಂಭೀರವಾದ ಸುಟ್ಟ ಗಾಯಗಳಿಂದ ಆಸ್ಪತ್ರೆಯಲ್ಲಿದ್ದಾರೆ.

ಇಂತಹ ಸುದ್ದಿಗಳು ಡಬಲ್ ಇಂಜಿನ್ ರಾಜ್ಯಗಳಿಂದಲೇ ಬರುತ್ತಿರುವುದೇಕೆ ಎಂಬುದು ಈಗ ಹಲವರನ್ನು ಕಾಡುತ್ತಿರುವ ಪ್ರಶ್ನೆ!

ಯುಪಿಯ ಉನ್ನಾವ್‌ನಲ್ಲಿ ಅತ್ಯಾಚಾರ ಪೀಡಿತಳ ಮನೆ ಆರೋಪಿಗಳಿಂದ ಬೆಂಕಿಗಾಹುತಿ

"ಪಾಪ ಮತ್ತು ಪುಣ್ಯ'ದ ಯಾವ ಸೆಕ್ಷನ್ ಅಡಿಯಲ್ಲಿ ?*



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

* ಇದಕ್ಕೆ ಸ್ವಲ್ಪವೇ ಮೊದಲು ಪೊಲಿಸ್ ಕಾವಲಿನ ನಡುವೆಯೇ ನಡೆದ ಕೊಲೆಯನ್ನು ಖಂಡಿಸಲೂ ಆಗದ, ಸಮರ್ಥಿಸಿಕೊಳ್ಳಲೂ ಆಗದ ಆಳುವ ಪಕ್ಷದ ಮುಖಂಡರುಗಳು 'ಪಾಪ-ಪುಣ್ಯ'ದ ವ್ಯಾಖ್ಯಾನವನ್ನು ಕೊಡುತ್ತಿದ್ದಾರೆ ಎಂಬುದನ್ನು ಗಮನಿಸಬಹುದು.

ಒಪೆಕ್ ಪ್ಲಸ್ ದೇಶಗಳ ತೈಲ ಉತ್ಪಾದನೆ ಕಡಿತ ಮತ್ತು ಹಣದುಬ್ಬರದ ವಿರುದ್ಧ ಬಂಡವಾಳಶಾಹಿಯ ಕಾದಾಟ

13 ಪೆಟ್ರೋಲಿಯಂ ರಫ್ತುಮಾಡುವ ದೇಶಗಳು ಮತ್ತು ಇತರ 11 ತೈಲ ಉತ್ಪಾದಕ ದೇಶಗಳು ಒಟ್ಟಾಗಿ ಈಗ ತೈಲ ಉತ್ಪಾದನೆಯನ್ನು ದಿನಂಪತ್ರಿ 30 ಲಕ್ಷ ಬ್ಯಾರೆಲ್‌ನಷ್ಟು ಕಡಿತಗೊಳಿಸಿವೆ. ಅದಕ್ಕೆ ಅವರು ನೀಡಿರುವ ಕಾರಣವೆಂದರೆ, ಆರ್ಥಿಕ ಹಿಂಜರಿತವು ತೈಲದ ಮೇಲಿನ ಬೇಡಿಕೆಯನ್ನು ಇಳಿಕೆ ಮಾಡುತ್ತದೆ ಎಂಬುದು. ನಿಜ, ಆರ್ಥಿಕ ಹಿಂಜರಿತವನ್ನು ಹೇರುವುದು ಹಣದುಬ್ಬರಕ್ಕೆ ಎದುರಾಗಿ ಬಂಡವಾಳಶಾಹಿಯ ಕಾದಾಟದ ಪ್ರಮುಖ ಅಂಶ. ಆದರೆ ಅದು ಇಡೀ ಬಂಡವಾಳಶಾಹಿ ವ್ಯವಸ್ಥೆಯ ಸ್ಥಿರತೆಗೆ ಗಂಭೀರ ಬೆದರಿಕೆಯನ್ನೊಡ್ಡುವ ಒಂದು ಸರಪಳಿ ಪ್ರತಿಕ್ರಿಯೆಯ ಪ್ರಾರಂಭಕ್ಕೂ ಕಾರಣವಾಗುತ್ತದೆ. ಸೌದಿ ಅರೇಬಿಯಾವು ಇನ್ನು ಮುಂದೆ ಅಮೆರಿಕದ ಬಾಲ ಹಿಡಿಯುವುದಿಲ್ಲ ಎಂಬ ಸೂಚನೆ ಒಪೆಕ್+ ಕ್ರಮದಲ್ಲಿ ವ್ಯಕ್ತವಾಗಿದೆ. ಅತ್ತ ಎಲ್ಲ ಪ್ರಮುಖ ಯುರೋಪಿಯನ್ ದೇಶಗಳಲ್ಲೂ ಈಗ ಕಾರ್ಮಿಕರು ತಮ್ಮ ನಿಜವೇತನದಲ್ಲಿ ಕಡಿತ ಮತ್ತು ನಿರುದ್ಯೋಗದ ವಿರುದ್ಧ ಮುಷ್ಕರ–ಹೋರಾಟಗಳನ್ನು ನಡೆಸುತ್ತಿದ್ದಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಇದುವರೆಗೆ ನವ ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯ ಸ್ಥಿರತೆಗೆ ತಳಹದಿಯಾಗಿರುವ ಅಂಶಗಳೇ ಛಿದ್ರಗೊಳ್ಳುತ್ತಿರುವ ಸನ್ನಿವೇಶವನ್ನು ನಾವು ಕಾಣುತ್ತಿದ್ದೇವೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್



ಯುದ್ಧಕಾಲವನ್ನು ಹೊರತುಪಡಿಸಿದರೆ, ಬಂಡವಾಳಶಾಹಿಯು ಆರ್ಥಿಕ ಹಿಂಜರಿತವನ್ನು ಉಂಟುಮಾಡುವ ಮೂಲಕ ಹಣದುಬ್ಬರವನ್ನು ನಿಯಂತ್ರಿಸಲು ಪ್ರಯತ್ನಿಸುತ್ತದೆ. ಬಂಡವಾಳಗಾರರ ಲಾಭಾಂಶವು ಅನಾಯಾಸವಾಗಿ ಮತ್ತು ವಿಪರೀತವಾಗಿ ಹೆಚ್ಚಿದ ಕಾರಣದಿಂದ ಹಣದುಬ್ಬರ ಉಂಟಾದಾಗಲೂ ಸಹ ಬಂಡವಾಳಶಾಹಿಯು ಅದೇ ಸೂತ್ರದ ಮೂಲಕ ಹಣದುಬ್ಬರವನ್ನು ನಿಯಂತ್ರಿಸಲು ಪ್ರಯತ್ನಿಸುತ್ತದೆ. ಆದರೆ, ಬಂಡವಾಳಗಾರರ ಲಾಭಾಂಶದ ಪಾಲು ತಗ್ಗುವ ಸಾಧ್ಯತೆಗಳು ಇಲ್ಲದುದರಿಂದ ಆರ್ಥಿಕ ಹಿಂಜರಿತದ ಮಾರ್ಗವಾಗಿ ಹಣದುಬ್ಬರವನ್ನು ನಿಯಂತ್ರಿಸುವ ಪ್ರಯತ್ನವು ಯಶಸ್ವಿಯಾಗದು. ಆರ್ಥಿಕ ಹಿಂಜರಿತ ಉಂಟುಮಾಡುವ ಕಾರ್ಯತಂತ್ರವನ್ನು ಅನುಸರಿಸಲಾಗುತ್ತದೆ, ಏಕೆಂದರೆ ಅದು ಪ್ರಾಥಮಿಕ ಸರಕುಗಳ ಮೇಲಿನ ಬೇಡಿಕೆಯನ್ನು ಇಳಿಕೆ ಮಾಡುತ್ತದೆ. ಆಗ ಬೆಲೆಗಳು ಇಳಿಯುತ್ತವೆ. ಹಾಗಾಗಿ ಇದು ಹಣದುಬ್ಬರವನ್ನು ತಗ್ಗಿಸಲು ಸಹಾಯ ಮಾಡುತ್ತದೆ. ಅಂತೆಯೇ ಆರ್ಥಿಕ ಹಿಂಜರಿತವು ನಿರುದ್ಯೋಗದರವನ್ನು ಹೆಚ್ಚಿಸುತ್ತದೆ ಮತ್ತು ಆ ಮೂಲಕ ದುಡಿಮೆಗಾರರ ಚೌಕಾಸಿ ಸಾಮರ್ಥ್ಯವನ್ನು ಕಡಿಮೆ ಮಾಡುತ್ತದೆ. ಅಂದರೆ, ಕಾರ್ಮಿಕರು ತಮ್ಮ ಜೀವನ ನಿರ್ವಹಣೆಯ ವೆಚ್ಚದಲ್ಲಾದ ಹೆಚ್ಚಳವನ್ನು ಸರಿದೂಗಿಸುವಷ್ಟು ಹೆಚ್ಚು ವೇತನವನ್ನು ಪಡೆಯುವುದಿಲ್ಲ. ಇದೂ ಸಹ ಹಣದುಬ್ಬರವನ್ನು ಇಳಿಕೆ ಮಾಡುವಲ್ಲಿ ಸಹಾಯ ಮಾಡುತ್ತದೆ.

ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಉತ್ಪಾದನೆಯಾಗುವ ಉತ್ಪತ್ತಿಗೆ ಮೂವರು ವಾರಸುದಾರರು (ಬಂಡವಾಳಶಾಹಿಗಳು, ಕಾರ್ಮಿಕರು ಮತ್ತು ಆಹಾರ ಹಾಗೂ ಪ್ರಸ್ತುತ ಲಾಗುವಾಡುಗಳ ರೂಪದ ಪ್ರಾಥಮಿಕ ಸರಕುಗಳ ಪೂರೈಕೆದಾರರು) ಇದ್ದಾರೆ ಎಂದು ಭಾವಿಸಿಕೊಳ್ಳೋಣ. ಆಗ ಉತ್ಪಾದನೆಯ ಮೇಲೆ ಈ ಮೂರೂ ವಾರಸುದಾರರ ಒಟ್ಟು ದಾವೆಗಳು ಒಂದು ವೇಳೆ ಒಟ್ಟು ಉತ್ಪಾದನೆಗಿಂತಲೂ ಅಧಿಕವಾಗಿದ್ದ ಸಂದರ್ಭದಲ್ಲಿ ಹಣದುಬ್ಬರ ಉದ್ಭವಿಸುತ್ತದೆ ಎಂದು ಹೇಳಬಹುದು. ಆದ್ದರಿಂದ, ಬಂಡವಾಳಶಾಹಿ ವ್ಯವಸ್ಥೆಯ ಹಣದುಬ್ಬರ–ವಿರೋಧಿ ನೀತಿಯು ಆರ್ಥಿಕ ಹಿಂಜರಿತದ ಮೂಲಕ ಕಾರ್ಮಿಕರ ಮತ್ತು ಪ್ರಾಥಮಿಕ ಸರಕುಗಳ ಪೂರೈಕೆದಾರರ ಹಕ್ಕು ಕೇಳಿಕೆಗಳ ಭಾಗವನ್ನು ಅವರ ಚೌಕಾಸಿ ಸಾಮರ್ಥ್ಯವನ್ನು ಕಡಿಮೆ ಮಾಡುವ ಮೂಲಕ ತಗ್ಗಿಸುವ ಕ್ರಮಗಳನ್ನು ಒಳಗೊಂಡಿರುತ್ತದೆಯೇ ವಿನಃ, ಬಂಡವಾಳಗಾರರ ದಾವೆಯನ್ನು ಯಾವಕಾರಣಕ್ಕೂ ತಗ್ಗಿಸುವುದಿಲ್ಲ.


ಪ್ರಸ್ತುತ ಹಣದುಬ್ಬರದ ಬಲಿಪಶುಗಳು ಕಾರ್ಮಿಕರೇ ಎಂಬುದನ್ನು ಅಮೇರಿಕದ ಉದಾರವಾದಿ ಅರ್ಥಶಾಸ್ತ್ರಜ್ಞರೂ ಸಹ ಒಪ್ಪಿಕೊಳ್ಳುತ್ತಾರೆ. ಆದರೂ ಹಣದುಬ್ಬರವನ್ನು ನಿಯಂತ್ರಿಸುವ ಸಾಧನವಾಗಿ ಹಣ ವೇತನದ ಹೆಚ್ಚಳವನ್ನು ನಿಯಂತ್ರಿಸಬೇಕು (ಅಂದರೆ, ಕಾರ್ಮಿಕರ ಮೇಲೆ ಬೆಲೆ ಏರಿಕೆಯ ಹೊರೆಯನ್ನು ಮತ್ತಷ್ಟು ಹೆಚ್ಚಿಸುವ ಕ್ರಮ) ಎಂಬ ಶಿಫಾರಸನ್ನು ಅವರು ಮಾಡುತ್ತಾರೆ ಎಂಬುದು ಗಮನಾರ್ಹವಾಗಿದೆ. ಇದು ಬಂಡವಾಳಶಾಹಿ ಸಮರ್ಥನೆಯ ತರ್ಕವೂ ಆಗಿರುವುದರಿಂದ ಮತ್ತು ಉದಾರವಾದಿ ಅರ್ಥಶಾಸ್ತ್ರಜ್ಞರ ದೃಷ್ಟಿಕೋನವು ಬಂಡವಾಳಶಾಹಿಗಷ್ಟೇ ಸೀಮಿತಗೊಂಡಿರುವುದರಿಂದ, ಹಣದುಬ್ಬರವನ್ನು ನಿಯಂತ್ರಿಸುವ ಬಂಡವಾಳಶಾಹಿಯ ಮಾರ್ಗವನ್ನೇ ಅವರು ಸಾಧ್ಯವಿರುವ ಏಕೈಕ ಮಾರ್ಗವೆಂದು ಹೇಳುತ್ತಾರೆ. ಹಣದುಬ್ಬರವನ್ನು ನಿಯಂತ್ರಿಸಬೇಕೆಂದು ಬಂಡವಾಳಶಾಹಿಗೆ ಪ್ರೇರಣೆ ಉಂಟಾಗುವುದು ಹಣದುಬ್ಬರದಿಂದ ಹಿಂಡಲ್ಪಡುತ್ತಿರುವ ಕಾರ್ಮಿಕರ ಮೇಲಿನ ಸಹಾನುಭೂತಿಯಿಂದಲ್ಲ. (ಕಾರ್ಮಿಕರ ಮೇಲೆ ಕಿಂಚಿತ್ತಾದರೂ ಸಹಾನುಭೂತಿ ಇದ್ದಿದ್ದರೆ ಅವರಿಗೆ ನಷ್ಟವನ್ನುಂಟು ಮಾಡಿ ಹಣದುಬ್ಬರವನ್ನು ನಿಯಂತ್ರಿಸುವ ಪ್ರಯತ್ನವನ್ನು ಬಂಡವಾಳಶಾಹಿಯು ಮಾಡುತ್ತಲೇ ಇರಲಿಲ್ಲ). ಹಣದುಬ್ಬರವು ಹಣಕಾಸು ಕುಳಗಳ ಆರ್ಥಿಕ ಹಿತಾಸಕ್ತಿಗಳನ್ನು ಹಾನಿಗೊಳಿಸುತ್ತದೆ ಮತ್ತು ಶ್ರೀಮಂತರು ಹೊಂದಿರುವ ಆಸ್ತಿ/ಸ್ವತ್ತುಗಳ ನಿಜ ಮೌಲ್ಯವನ್ನು ಇಳಿಕೆ ಮಾಡುತ್ತದೆ. ಆದ್ದರಿಂದ, ಈ ಅಂಶವೇ ಹಣದುಬ್ಬರವನ್ನು ನಿಯಂತ್ರಿಸುವ ಅವರ ಪ್ರಯತ್ನಗಳಿಗೆ ಪ್ರೇರಣೆಯಾಗುತ್ತದೆ.

ಬಂಡವಾಳಶಾಹಿಯ ಅಡಿಯಲ್ಲಿ ಯಾವ ಎರಡು ಗುಂಪುಗಳಿಗೆ ನಷ್ಟವನ್ನು ಉಂಟುಮಾಡಿ ಹಣದುಬ್ಬರವನ್ನು ನಿಯಂತ್ರಿಸುವ ಪ್ರಯತ್ನಗಳನ್ನು ಮಾಡಲಾಗುತ್ತದೆ ಎಂಬುದನ್ನು ಈ ಮೇಲೆ ಉಲ್ಲೇಖಿಸಲಾಗಿದೆ. ಆದರೆ, ಈ ಎರಡು ಗುಂಪುಗಳಲ್ಲಿ ಯಾವುದೇ ಒಂದು ಗುಂಪು ತನ್ನ ಮೇಲೆ ಬೀಳುವ ಒತ್ತಡವನ್ನು ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾದರೆ, ಹಣದುಬ್ಬರವನ್ನು ನಿಯಂತ್ರಿಸಲು ವ್ಯವಸ್ಥೆಯು ಮತ್ತೊಂದು ಗುಂಪನ್ನು ಇನ್ನಷ್ಟು ತೀವ್ರವಾಗಿ ಹಿಂಡಬೇಕಾಗುತ್ತದೆ ಮತ್ತು ಹಾಗೆ ಮಾಡಲು ಇನ್ನೂ ತೀವ್ರ ಸ್ವರೂಪದ ಆರ್ಥಿಕ ಹಿಂಜರಿತವನ್ನು ಹೇರಬೇಕಾಗುತ್ತದೆ. ಪ್ರಸ್ತುತದಲ್ಲಿ ಜರುಗುತ್ತಿರುವ ವಿದ್ಯಮಾನವು ಇದೇ ಎಂದು ತೋರುತ್ತದೆ.

ಅಮೆರಿಕನ್ ಒತ್ತಡವನ್ನೂ ಧಿಕ್ಕರಿಸಿ ತೈಲ ಉತ್ಪಾದನೆ ಕಡಿತ

ಏಪ್ರಿಲ್ 2ರಂದು, ರಷ್ಯಾ ಸೇರಿದಂತೆ 13 ಒಪೆಕ್(ಪೆಟ್ರೋಲಿಯಂ ರಫ್ತುಮಾಡುವ ದೇಶಗಳ ಸಂಘಟನೆ) ಸದಸ್ಯ ದೇಶಗಳು ಮತ್ತು ಇತರ 11 ತೈಲ ಉತ್ಪಾದಕ ದೇಶಗಳನ್ನು ಒಳಗೊಂಡ ಒಪೆಕ್+ ದೇಶಗಳು ಮೇ ತಿಂಗಳಿನಿಂದ ಹಿಡಿದು ಈ ಕ್ಯಾಲೆಂಡರ್ ವರ್ಷದ ಅಂತ್ಯದವರೆಗೆ ದಿನಂಪ್ರತಿ ಒಂದು ಮಿಲಿಯನ್ ಬ್ಯಾರೆಲ್‌ಗಳಷ್ಟು ತೈಲ ಉತ್ಪಾದನೆಯನ್ನು ಕಡಿತಗೊಳಿಸಲು ನಿರ್ಧರಿಸಿದವು. ಈ ಕಡಿತವು ಕಳೆದ ವರ್ಷ ಅಕ್ಟೋಬರ್‌ನಲ್ಲಿ ಒಪೆಕ್+ ದೇಶಗಳು ಘೋಷಿಸಿದ ದಿನಂಪ್ರತಿ ಎರಡು ಮಿಲಿಯನ್ ಬ್ಯಾರೆಲ್‌ಗಳ ಕಡಿತದ ಜೊತೆಗೆ ಸೇರಿಕೊಳ್ಳುತ್ತದೆ. ತೈಲ ಉತ್ಪಾದನೆಯಲ್ಲಿ ಕಡಿತವಾಗದಂತೆ ನೋಡಿಕೊಳ್ಳಲು ಅಮೆರಿಕಾ ಭಾರಿ ಲಾಬಿಯನ್ನೇ ನಡೆಸಿತು. ಕಡಿತವನ್ನು ತಪ್ಪಿಸುವ ಉದ್ದೇಶದಿಂದ ಯುಎಸ್ ಅಧ್ಯಕ್ಷ ಜೋ ಬೈಡನ್ ತಮ್ಮ ಹಲವಾರು ಕ್ಯಾಬಿನೆಟ್ ಮಂತ್ರಿಗಳನ್ನು ಒಪೆಕ್ ದೇಶಗಳ ನಾಯಕ ಮತ್ತು ಯುಎಸ್‌ನ ಆಪ್ತ ಮಿತ್ರನೂ ಆದ ಸೌದಿ ಅರೇಬಿಯಾಕ್ಕೆ ಕಳುಹಿಸಿದ್ದರು. ಅದು ಪ್ರಯೋಜನವಾಗಲಿಲ್ಲ. ಆದ್ದರಿಂದ ಸೌದಿ ಅರೇಬಿಯಾದ ಮನವೊಲಿಸಲು ಜೋ ಬೈಡನ್ ಸ್ವತಃ ಅಲ್ಲಿಗೆ ಭೇಟಿ ನೀಡಿದ್ದರು. ಈ ಕಸರತ್ತಿನಿಂದಲೂ ಪ್ರಯೋಜನವಾಗಲಿಲ್ಲ. ಈಗ ಜಾರಿಯಲ್ಲಿರುವ ಕಡಿತದ ವಿರುದ್ಧವೂ ಅಮೆರಿಕ ತೀವ್ರ ಒತ್ತಡ ಹೇರಿತ್ತು. ಅದೂ ಪ್ರಯೋಜನವಾಗಲಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ತೈಲ ಉತ್ಪಾದನೆಯಲ್ಲಿ ಆಗುತ್ತಿರುವ ಈ ಕಡಿತವು ಇಂದಿನ ದಿನಮಾನಗಳಲ್ಲಿ ಸಂಭವಿಸುತ್ತಿರುವ ಯುಎಸ್ ಪ್ರಾಬಲ್ಯದ ಕುಸಿತಕ್ಕೆ ಸಾಕ್ಷಿಯಾಗಿದೆ.

ಈಗ ಘೋಷಣೆಯಾಗಿರುವ ತೈಲ ಉತ್ಪಾದನೆಯ ಕಡಿತಕ್ಕೆ ಒಪೆಕ್+ ನೀಡಿರುವ ಕಾರಣವೆಂದರೆ, ಆರ್ಥಿಕ ಹಿಂಜರಿತವು ತೈಲದ ಮೇಲಿನ ಬೇಡಿಕೆಯನ್ನು ಇಳಿಕೆ ಮಾಡುತ್ತದೆ ಎಂಬುದು. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ತೈಲದ ಮೇಲಿನ ಬೇಡಿಕೆಯು ಇಳಿಕೆಯಾದಾಗ, ತೈಲದ ಬೆಲೆಯನ್ನು ಇಳಿಕೆ ಮಾಡುವುದರ ಬದಲು, ಉತ್ಪಾದನೆಯನ್ನು ಕಡಿತಗೊಳಿಸುವ ಕ್ರಮವೇ ಉತ್ಪಾದಕರಿಗೆ ಉತ್ತಮ ಎಂದು ಅವರು ವಾದಿಸುತ್ತಾರೆ. ಅದನ್ನೇ ಅವರು





ಜಾರಿಗೆ ತರುತ್ತಿದ್ದಾರೆ ಕೂಡ. ಅವರ ವಾದವನ್ನು ಈ ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು: ಈಗಿರುವ ಬೆಲೆಗಳ ಮಟ್ಟದಲ್ಲಿ ಬೇಡಿಕೆಯು ಶೇ. 10ರಷ್ಟು ಇಳಿಕೆಯಾಗುತ್ತದೆ ಎಂದು ಭಾವಿಸೋಣ. ಉತ್ಪಾದನೆಯನ್ನು ಒಂದು ವೇಳೆ ಶೇ. 10ರಷ್ಟು ಕಡಿತಗೊಳಿಸಿದರೆ, ಆಗ ತೈಲದ ಬೆಲೆಯು ಬದಲಾಗದೆ ಉಳಿಯುತ್ತದೆ ಮತ್ತು ಅವರ ಒಟ್ಟು ಆದಾಯ ಮಾತ್ರ ಶೇ. 10ರಷ್ಟು ಕುಸಿದಿರುತ್ತದೆ. ಆದರೆ, ಅವರು ಒಂದು ವೇಳೆ ಉತ್ಪಾದನೆಯನ್ನು ಕಡಿತಗೊಳಿಸದೇ ಬೇಡಿಕೆ ಮತ್ತು ಪೂರೈಕೆಗಳು ಸಮತೋಲವನ್ನು ಸಾಧಿಸುವವರೆಗೂ ಬೆಲೆಯನ್ನು ಕುಸಿಯಲು ಬಿಟ್ಟರೆ, ಆಗ ತೈಲದ ಬೆಲೆ ಕುಸಿತವು ಶೇ. 10ಕ್ಕಿಂತಲೂ ಹೆಚ್ಚಿಗೆ ಇರುತ್ತದೆ. ಹಾಗಾಗಿ, ಅವರ ಆದಾಯವು ಶೇ. 10ಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಕುಸಿದಿರುತ್ತದೆ. ಹೀಗಾಗುತ್ತದೆ ಏಕೆಂದರೆ ತೈಲದ ಮೇಲಿನ ಬೇಡಿಕೆಯು ಬೆಲೆ–ಸ್ಥಿತಿಸ್ಥಾಪಕ(ಅಂದರೆ ಪರಿಸ್ಥಿತಿ ಬದಲಾದಾಗ ಬೆಲೆಗಳು ಹಿಂದಿನ ಅದೇ ಮಟ್ಟಕ್ಕೆ ಮರಳುವ) ಗುಣ ಹೊಂದಿಲ್ಲ. (ವಾಸ್ತವವಾಗಿ ಇದು ಬೇಡಿಕೆಯ ಬೆಲೆ–ಸ್ಥಿತಿಸ್ಥಾಪಕತ್ವದ ಅರ್ಥವೂ ಹೌದು). ಪ್ರಾಸಂಗಿಕವಾಗಿ ಹೇಳುವುದಾದರೆ, ತೈಲ ಬೇಡಿಕೆಯ ಈ ಬೆಲೆ–ಸ್ಥಿತಿಸ್ಥಾಪಕವಲ್ಲದ ಗುಣದಿಂದಾಗಿಯೇ ತೈಲ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಲಾಭಾಂಶವನ್ನು ಹೆಚ್ಚಿಸಿಕೊಳ್ಳುತ್ತವೆ. ಹಾಗಾಗಿ, ಅವರು ತೊಂದರೆಗಳಿಗೆ ಸಿಕ್ಕಿಕೊಳ್ಳದೆ ಪಾರಾಗಬಹುದು ಎಂದು ಭಾವಿಸಿದಾಗಲೆಲ್ಲಾ ತೈಲ ಬೆಲೆಗಳನ್ನು ಏರಿಸುತ್ತಾರೆ.

ಆದ್ದರಿಂದ, ಒಂದು ಆರ್ಥಿಕ ಹಿಂಜರಿತದಿಂದಾಗಿ ಬೇಡಿಕೆಯಲ್ಲಿ ಇಳಿಕೆಯ ಪರಿಸ್ಥಿತಿ ಎದುರಾದಾಗ, ಉತ್ಪಾದನೆಯನ್ನು ಕಡಿತಗೊಳಿಸದೆ ಬೇಡಿಕೆ ಮತ್ತು ಪೂರೈಕೆಗಳು ಸಮತೋಲವಾಗುವವರೆಗೂ ತೈಲ ಬೆಲೆಗಳು ಇಳಿಯಲು ಬಿಡುವುದರ ಬದಲು, ಉತ್ಪಾದನೆಯನ್ನು ಕಡಿತಗೊಳಿಸುವ ಕ್ರಮವು ಉತ್ಪಾದಕರ ಪರಿಸ್ಥಿತಿಯನ್ನು ಉತ್ತಮವಾಗಿಸುತ್ತದೆ. ಇದುವೇ ಉತ್ಪಾದನೆಯನ್ನು ಕಡಿತಗೊಳಿಸಲು ಒಪೆಕ್ ಮಂಡಿಸುವ ವಾದ. ಉತ್ಪಾದನೆಯ ಈ ಕಡಿತವು ಕಾರ್ಯಗತವಾಗುವ ಮೊದಲೇ, ಅದರ ನಿರೀಕ್ಷೆಯಲ್ಲೇ, ಕಚ್ಚಾ ತೈಲದ ಬೆಲೆಗಳು ಕಳೆದ ಒಂದು ವಾರದ ಅವಧಿಯೊಳಗೆ ಶೇ. 6ರಷ್ಟು ಏರಿಕೆಯಾಗಿವೆ. ಕೆಲವು ತೈಲ ಬಹುರಾಷ್ಟ್ರೀಯ ಕಂಪನಿಗಳ ಷೇರುಗಳ ಬೆಲೆಗಳೂ ಸಹ ಏರಲಾರಂಭಿಸಿವೆ.

ದುಡಿಯುವ ವರ್ಗದ ಪ್ರತಿರೋಧ

ಕಚ್ಚಾ ತೈಲದ ಉತ್ಪಾದನೆಯನ್ನು ಕಡಿತ ಮಾಡುವ ಮೂಲಕ ತೈಲ ಬೆಲೆಗಳು ಉನ್ನತ ಮಟ್ಟದಲ್ಲೇ ಉಳಿಯುವಂತೆ ನೋಡಿಕೊಂಡರೆ, ಹಣದುಬ್ಬರವನ್ನು ಇಳಿಕೆ ಮಾಡುವ ಸಲುವಾಗಿ ವ್ಯವಸ್ಥೆಗೊಳಿಸಿದ ಆರ್ಥಿಕ ಹಿಂಜರಿತವು ಉಂಟುಮಾಡಬಹುದಾದ ಪರಿಣಾಮವು ಕಡಿಮೆಯಾಗುತ್ತದೆ. ತೈಲ ಬೆಲೆಗಳು ಎಷ್ಟು ಉನ್ನತವಾಗಿ ಏರುತ್ತವೆಯೋ ಅದಕ್ಕನುಗುಣವಾಗಿ ಈ ಹಿಂಜರಿತವು ಕಡಿಮೆ ಪರಿಣಾಮಕಾರಿಯಾಗುತ್ತದೆ. ಇದರ ಅರ್ಥವೆಂದರೆ, ಕಾರ್ಮಿಕರ ನಿಜ ವೇತನದ ಮೇಲೆ ಮತ್ತು ಇತರ ಕಚ್ಚಾ ವಸ್ತುಗಳು ಮತ್ತು ಆಹಾರ ಉತ್ಪಾದಕರ ಆದಾಯದ ಮೇಲೆ ಇನ್ನೂ ಹೆಚ್ಚಿನ ನಿರ್ಬಂಧವನ್ನು ಹೇರಬೇಕಾಗುತ್ತದೆ. ಅಂದರೆ, ಆರ್ಥಿಕ ಹಿಂಜರಿತವು ಮತ್ತಷ್ಟು

ಪುಟ 15 ಕ್ಕೆ

'ಗುಜರಾತ್ ಮಾದರಿ' ಕಾರ್ಯತಂತ್ರ ಬಿಜೆಪಿಗೆ ತಿರುಗುಬಾಣವಾಯಿತೇ?....... ಪುಟ 9 ರಿಂದ

ಸನ್ನಿವೇಶವನ್ನು ನಿಭಾಯಿಸುವಲ್ಲಿ ಬಿಜೆಪಿ ನಾಯಕತ್ವದ ನಿರ್ದಯತೆ, ನಿಖರತೆ, ಸೂಕ್ಷ್ಮತೆ, ಮತ್ತು ಅದರ ಸುಸಜ್ಜಿತ ಚುನಾವಣಾ ಯಂತ್ರವನ್ನು ಕಡಿಮೆ ಅಂದಾಜು ಮಾಡಲು ಸಾಧ್ಯವಿಲ್ಲ. ಆ ಪಕ್ಷಕ್ಕೆ ಇದು ಎದುರಿಸಲಾಗದ ಸವಾಲೇನಲ್ಲ. ಬಿಜೆಪಿಯ ಹಲವು ಅಭ್ಯರ್ಥಿಗಳು ಮತ್ತು ನಾಯಕರು ಸಂಭವನೀಯ ಪ್ರತಿಕೂಲ ಪರಿಣಾಮಗಳನ್ನು ಲೆಕ್ಕಿಸದೆ, ಅನಿರೀಕ್ಷಿತವಾಗಿ ಶಿಸ್ತನ್ನು ಧಿಕ್ಕರಿಸಿ ಬಂಡಾಯವೆದ್ದಿದ್ದು, ಬಹುಶಃ ಬಿಜೆಪಿ ಪಕ್ಷದ ಸರಕಾರದ ಕಾರ್ಯವೈಖರಿಯಿಂದ ಉಂಟಾಗಿರುವ ಜನರ ಕೋಪ/ಹತಾಶೆಯ ಭಯದ ಪ್ರತಿಬಿಂಬವಾಗಿದೆ. ಬಿಜೆಪಿ ಎದುರಿಸುತ್ತಿರುವ 'ಆಡಳಿತ–ವಿರೋಧೀ' ಅಲೆ ಮತ್ತು ಇತರ ಸವಾಲುಗಳೊಂದಿಗೆ ಇದೂ ಒಂದು ಎಂದಷ್ಟೇ ಹೇಳಬಹುದು.

'ಲಿಂಗಾಯತರ ದೊಡ್ಡ ನಾಯಕರಿಗೆ ಅವಮಾನ ಎಂಬ ಚರ್ಚೆಯೊಂದಿಗೆ ಬಿಜೆಪಿಯ ಲಿಂಗಾಯತ ತಳಹದಿಯ ಮೇಲೆ ಖಂಡಿತವಾಗಿಯೂ ಪರಿಣಾಮ ಬೀರಲಿದೆ. ಆದರೆ ಲಿಂಗಾಯತರ ಅತಿ ದೊಡ್ಡ ನಾಯಕ ಯಡಿಯೂರಪ್ಪನವರಿಗೆ ಇದನ್ನು ಬಹಳ ಮಟ್ಟಿಗೆ ಪರಿಹರಿಸಲು ಸಾಧ್ಯವಾಗಬಹುದು.

ಕಾಂಗ್ರೆಸ್ ಪಕ್ಷದಲ್ಲಿ ಸಹ ಬಂಡಾಯ ಮತ್ತು ಗುಂಪುಗಾರಿಕೆ ಸವಾಲೇ ಆಗಿದೆ. ಬಿಜೆಪಿ ಭಿನ್ನಮತೀಯರಿಗೆ ಅದರ ಮುಕ್ತ ಸ್ವಾಗತವು, ವಿಶೇಷವಾಗಿ ಅಲ್ಪಸಂಖ್ಯಾತರು ಮತ್ತು ಅದರ ಜಾತ್ಯತೀತ ಬೆಂಬಲಿಗರಿಗೆ ಇರುಸು ಮುರುಸು ಉಂಟು ಮಾಡಬಹುದು. ಮತ ನಷ್ಟಕ್ಕೂ ಕಾರಣವಾಗಬಹುದು ಬಿಜೆಪಿ ಬಂಡಾಯದ ನಂತರ ಸಂಭ್ರಮದಲ್ಲಿರುವ ಕಾಂಗ್ರೆಸ್, ಬಹುಶಃ ಆಮದು ಮಾಡಿಕೊಂಡ ನಾಯಕರನ್ನು ಅ ಸಮಾಧಾನಗೊಳಿಸಬಾರದೆಂದೇನೋ, ಕೋಮುವಾದದ ವಿರುದ್ಧ ಪ್ರಚಾರವನ್ನು ಇನ್ನಷ್ಟು ದುರ್ಬಲಗೊಳಿಸಿದೆ!! 'ಭ್ರಷ್ಟಾಚಾರ–ವಿರೋಧಿ' ಮತ್ತು ಇತರ 'ಆಡಳಿತ ವಿರೋಧಿ' ಅಂಶಗಳ ಮೇಲೆ ಸಹ ಮೊದಲಿನಷ್ಟು ಒತ್ತು ಕೊಡುತ್ತಿಲ್ಲ. ಅದರ ಅತಿಯಾದ ಆತ್ಮವಿಶ್ವಾಸ ಮತ್ತು ಆತ್ಮತೃಪ್ತಿ ಅದಕ್ಕೆ ನಷ್ಟವುಂಟು ಮಾಡಬಹುದು.

ಸ್ಪರ್ಧೆಗಳ ಸ್ವರೂಪದಲ್ಲಿ ಬಹುಶಃ ಬದಲಾವಣೆಗಳಾಗುತ್ತವೆ. ಮೊದಲು ಹೆಚ್ಚಿನ ಸ್ಥಾನಗಳಲ್ಲಿ (2018 ರಲ್ಲಿ ಅದು 88% ಆಗಿತ್ತು). ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ 2018ರಲ್ಲಿದ್ದಂತೆ ನೇರಸ್ಪರ್ಧೆ ಎಂದು ಪರಿಗಣಿಸಲಾಗಿತ್ತು. ಜೆಡಿಎಸ್ ಸ್ಪರ್ಧೆ ಮಾಡಿರುವ ಮತ್ತು ಇತರ ಕೆಲವು ಕ್ಷೇತ್ರಗಳಲ್ಲಿ ತ್ರಿಕೋನ ಸ್ಪರ್ಧೆ ಉಂಟಾಗಲಿದೆಯೆಂದು ನಿರೀಕ್ಷಿಸಲಾಗಿತ್ತು. ಆದರೆ ಬಲಿಷ್ಠ ಭಿನ್ನಮತೀಯರು ಸ್ವತಂತ್ರ ಅಭ್ಯರ್ಥಿಗಳಾಗಿ ಅಥವಾ ಜೆಡಿಎಸ್ ಟಿಕೆಟ್‌ನಲ್ಲಿ ಸ್ಪರ್ಧೆ ಮಾಡುವುದರಿಂದ ಬಹುಕೋನ ಸ್ಪರ್ಧೆಗಳು ಹೆಚ್ಚಾಗಬಹುದು. ಇದು ಅನಿರೀಕ್ಷಿತ ರೀತಿಯಲ್ಲಿ ಫಲಿತಾಂಶಗಳ ಮೇಲೆ ಪರಿಣಾಮ ಬೀರಬಹುದು.

ಒಟ್ಟಿನಲ್ಲಿ ಬಿಜೆಪಿ ಬಂಡಾಯದ ಪರಿಣಾಮ ಸ್ಪರ್ಧೆ ಮತ್ತು ಫಲಿತಾಂಶಗಳ ಮೇಲೆ ಅಂದಾಜು ಮಾಡುವುದು ಕಷ್ಟ. ಇದನ್ನು ಕಾಂಗ್ರೆಸ್ ಹೇಗೆ ನಿಭಾಯಿಸುತ್ತದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಬಿಜೆಪಿ ತೀವ್ರ ಹಿಂಜರಿತ ಅನುಭವಿಸುತ್ತಿದೆ ಅಥವಾ ಅದರ ಕತೆ ಮುಗಿಯಿತು ಎಂದು ಹಿಗ್ಗಿದರೆ ಕಾಂಗ್ರೆಸ್ಸೇ ಖಂಡಿತ ನಷ್ಟ ಅನುಭವಿಸಬಹುದು. ಅದು ಬಿಜೆಪಿಯ ಎಲ್ಲಾ 'ಆಡಳಿತ ವಿರೋಧಿ' ಅಂಶಗಳನ್ನು ಬಯಲಿಗೆಳೆಯುವುದರಲ್ಲಿ ಮತ್ತು ಸಕಾರಾತ್ಮಕ ಕಾರ್ಯಸೂಚಿಯನ್ನು ಪ್ರಸ್ತುತಪಡಿಸುವುದರಲ್ಲಿ ಮುಗ್ಗರಿಸಿದರೆ ಬಿಜೆಪಿ ಬಂಡಾಯ ಅದನ್ನು ರಕ್ಷಿಸಲಾರದು.

ಸತ್ಯಪಾಲ್ ಮಲಿಕ್ ಸಂದರ್ಶನ:

ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಮೋದಿ ಸರ್ಕಾರ ಉತ್ತರಿಸಲೇಬೇಕು

ಜಮ್ಮು ಮತ್ತು ಕಾಶ್ಮೀರ ರಾಜ್ಯದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಎತ್ತಿರುವ ಎಲ್ಲಾ ಗಂಭೀರ ಆರೋಪಗಳ ಬಗ್ಗೆ ಮೋದಿ ಸರ್ಕಾರವು ಸ್ಪಷ್ಟಗೊಳಿಸಬೇಕು, ಅವಕ್ಕೆಲ್ಲ ಉತ್ತರಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಆಗ್ರಹಿಸಿದೆ.

40 ಸಿಆರ್‌ಪಿಎಫ್ ಯೋಧರು ಹುತಾತ್ಮರಾದ ಪುಲ್ವಾಮಾ ಭಯೋತ್ಪಾದಕ ದಾಳಿ ಕುರಿತಂತೆ ಆರೋಪಗಳು ನಮ್ಮ ದೇಶದ ಭದ್ರತೆಗೆ ಸಂಬಂಧಿಸಿದ ಗಂಭೀರ ವಿಷಯವಾಗಿದೆ. ನಮ್ಮ ರಾಷ್ಟ್ರೀಯ ಭದ್ರತೆಯನ್ನು ಕಾಪಾಡುವಲ್ಲಿ ಯಾವುದೇ ಲೋಪವಾಗುವುದನ್ನು ಸಹಿಸಲು ಸಾಧ್ಯವಿಲ್ಲ ಎಂದು ಪೊಲಿಟ್ ಬ್ಯುರೊ ಹೇಳಿದೆ.

ಸಂವಿಧಾನದ 370 ಮತ್ತು 35ಎ ಕಲಮುಗಳನ್ನು ರದ್ದುಗೊಳಿಸಿದ ಮತ್ತು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ವಿಸರ್ಜಿಸಿ ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ಮಾಡಿದ್ದಕ್ಕೆ ಸಂಬಂಧಿಸಿದ ಆರೋಪಗಳು ಕೂಡ ಅಷ್ಟೇ ಗಂಭೀರವಾಗಿವೆ ಎಂದೂ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆತಂಕ ವ್ಯಕ್ತಪಡಿಸಿದೆ.

ಈ ವಿಷಯಗಳ ಬಗ್ಗೆ ಮೋದಿ ಸರ್ಕಾರದ ಮೌನವು ನಮ್ಮ ರಾಷ್ಟ್ರೀಯ ಭದ್ರತೆ ಮತ್ತು ಭಾರತದ ಐಕ್ಯತೆ ಮತ್ತು ಸಮಗ್ರತೆ ಕುರಿತಂತೆ ಬಹಳ ಗಂಭೀರ ಪರಿಣಾಮಗಳನ್ನು ಬೀರುತ್ತದೆ. ನಮ್ಮ ರಾಷ್ಟ್ರೀಯ ಭದ್ರತೆ ಮತ್ತು ಸಾಂವಿಧಾನಿಕ ಪಾವಿತ್ರ್ಯದ ಹಿತದೃಷ್ಟಿಯಿಂದ ಮೋದಿ ಸರ್ಕಾರ ಈ ಆರೋಪಗಳಿಗೆ ಉತ್ತರಿಸಬೇಕು. ಮೋದಿ ಸರ್ಕಾರ ಮೌನವಾಗಿರಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕ ಕೃತ್ಯ–ಆಮೂಲಾಗ್ರ ತನಿಖೆ ಅಗತ್ಯ

ಜಮ್ಮು ಮತ್ತು ಕಾಶ್ಮೀರದ ರಜೌರಿ ಸೆಕ್ಟರ್‌ನಲ್ಲಿ ಭಿಂಬರ್ ಗಲಿ ಮತ್ತು ಪೂಂಚ್ ನಡುವೆ ಚಲಿಸುತ್ತಿದ್ದ ಸೇನಾ ವಾಹನದ ಮೇಲೆ ನಡೆದಿರುವ ಭಯೋತ್ಪಾದಕ ದಾಳಿಯನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ಇದರಲ್ಲಿ ಐವರು ಯೋಧರು ಪ್ರಾಣ ಕಳೆದುಕೊಂಡಿದ್ದಾರೆ.

ಎಲ್ಲಾ ಬಣ್ಣಗಳ ಭಯೋತ್ಪಾದನೆಯ ವಿರುದ್ಧದ ನಮ್ಮ ಹೋರಾಟದಲ್ಲಿ ಯಾವುದೇ ರಾಜಿ ಸಾಧ್ಯವಿಲ್ಲ. ಇಂತಹ ಘೋರ ಭಯೋತ್ಪಾದಕ ದಾಳಿ ನಡೆಸಲು ಅವಕಾಶವಾಗಿರುವ ಸಂದರ್ಭಗಳನ್ನು ಗುರುತಿಸಲು ಒಂದು ಆಮೂಲಾಗ್ರ ತನಿಖೆ ನಡೆಸಬೇಕು, ಈ ಮೂಲಕ ಭಯೋತ್ಪಾದನೆಯನ್ನು ಎದುರಿಸಲು ಉತ್ತಮವಾಗಿ ಸನ್ನದ್ಧರಾಗಲು ಸಾಧ್ಯವಾಗಬೇಕು ಎಂದು ಸಿಪಿಐ(ಎಂ) ಹೇಳಿದೆ.

ಈ ಚುನಾವಣೆಯಲ್ಲಿ ರಾಜ್ಯದ ಜನತೆಯ ಆಯ್ಕೆ ಯಾವುದು?!...... ಪುಟ 8 ರಿಂದ

ಸ್ಥಾನ ಪಡೆದ ಪಕ್ಷವೆಂದು ಗುರುತಿಸಲ್ಪಟ್ಟರೂ, ಬಹುಮತದ ಜನಾದೇಶ ಪಡೆದಿರಲಿಲ್ಲ. ಹೀಗಾಗಿ ಹೆಚ್ಚು ಸ್ಥಾನ ಪಡೆದ ಪಕ್ಷವೆಂದು ರಾಜ್ಯಪಾಲರು ತಮ್ಮ ಕಛೇರಿಯ ಅಧಿಕಾರ ದುರುಪಯೋಗ ಮಾಡಿಕೊಂಡು ಸರಕಾರ ರಚಿಸಲು ಆಹ್ವಾನಿಸಿದರು. ಆದರೂ, ಬಹುಮತ ಸಾಬೀತು ಮಾಡಲಾಗದೇ ಯಡಿಯೂರಪ್ಪರವರು ರಾಜಿನಾಮೆ ನೀಡಿದ್ದು ರಾಜ್ಯದ ಜನತೆಗೆ ತಿಳಿದ ವಿಚಾರವಾಗಿದೆ.

ತದನಂತರ ಜೆಡಿಎಸ್ ಹಾಗೂ ಕಾಂಗ್ರೆಸ್ ಪಕ್ಷದ ಮೈತ್ರಿ ಸರಕಾರ ರಚಿಸಿದರಾದರೂ ಅದನ್ನು ಉರುಳಿಸುವ ಸಮಯಕ್ಕಾಗಿ ಹೊಂಚು ಹಾಕಿದ ಬಿಜೆಪಿ, ಆಪರೇಷನ್ ಕಮಲದ ಮೂಲಕ ಮತ್ತು ಅಧಿಕಾರ ದುರುಪಯೋಗದ ಮೂಲಕ ಬಲವಂತವಾಗಿ ಸರಕಾರ ರಚಿಸುವಲ್ಲಿ ಮರಳಿ ಯಶಸ್ವಿಯಾಯಿತು.

ಈ ಅನುಭವ ಗಮನಿಸಿದರೇ, ಈ ಬಾರಿಯೂ ಬಿಜೆಪಿ 95 ಅಂಕೆಯ ಸುತ್ತ ವಿಧಾನಸಭಾ ಸ್ಥಾನಗಳನ್ನು ಗೆಲ್ಲುವಲ್ಲಿ ಯಶಸ್ವಿಯಾದರೇ, ಮರಳಿ ಒಕ್ಕೂಟ ಸರಕಾರದ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು, ಮರಳಿ ಅನೈತಿಕ ಆಪರೇಷನ್ ಕಮಲದ ಮೂಲಕ ಅಧಿಕಾರ ಹಿಡಿಯುವ ಸಂಭವಗಳಿರುವುದನ್ನು ತಳ್ಳಿ ಹಾಕುವಂತಿಲ್ಲ.

ಆ ಕಾರಣದಿಂದ ಅದರ ಸಂಖ್ಯೆಯನ್ನು 75 ಕ್ಕಿಂತ ಕಡಿಮೆಯಾಗುವಂತೆ ರಾಜ್ಯದ ಜನತೆ ಬಿಜೆಪಿಯನ್ನು ಸೋಲಿಸಬೇಕಾಗಿದೆ. ಆಗ ಅಧಿಕಾರದಾಸೆ ತೋರಿಸಿ ಅನೈತಿಕ ಆಪರೇಷನ್ ಕಮಲ ಮಾಡುವ ಸಂಭವಗಳು ಕಡಿಮೆ ಇರುತ್ತವೆ. ಹೀಗಾಗಿ ಬಿಜೆಪಿಯನ್ನು ಅನೈತಿಕ ಆಪರೇಷನ್ ಕಮಲದಿಂದಲೂ ಅದಕ್ಕೆ ಸರಕಾರ ರಚಿಸಲು ಅವಕಾಶವಿರದಂತಹ ಜನಾದೇಶವು ಇಂದಿನ ಅಗತ್ಯವಾಗಿದೆ. ಆ ರೀತಿಯ ನಿರ್ಣಾಯಕ ಹಿನ್ನಡೆ ಮಾತ್ರವೇ ಅದನ್ನು ಅಧಿಕಾರದಿಂದ ಹೊರಗಿಡಲು ಸಾಧ್ಯವಿದೆ.

ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡುವ ಕೆಲಸವನ್ನು ಒಂದು ಪಕ್ಷ ಮಾಡಲು ಸಾಧ್ಯವೆ ?!

ಕರ್ನಾಟಕದ ಇಂದಿನ ರಾಜಕೀಯ ಸನ್ನಿವೇಶದಲ್ಲಿ ಅದಕ್ಕೆ ಅವಕಾಶಗಳಿಲ್ಲ. ಹಾಗೇನಾದರೂ ಯಾವುದಾದರೂ ಒಂದು ಜಾತ್ಯತೀತ ಅಥವಾ ಧರ್ಮ ನಿರಪೇಕ್ಷ ರಾಜಕೀಯ ಪಕ್ಷ ದಿಂದ ಸಾಧ್ಯವೆಂದು ಭಾವಿಸಿದರೇ, ಅದರಂತೆ ಕ್ರಮವಹಿಸಿದಲ್ಲಿ ಅದು ಖಂಡಿತಾ ಬಿಜೆಪಿ ಗೆಲುವಿಗೆ ನೆರವಾಗಲಿದೆ ಎಂಬುದನ್ನು ಗಮನಿಸಬೇಕಾಗಿದೆ. ಕಳೆದ ವಿಧಾನಸಭಾ ಚುನಾವಣೆಯ ಫಲಿತಾಂಶಗಳನ್ನು ಗಮನಿಸಿದರೂ ಇದು ಮನನವಾಗುತ್ತದೆ. ಜೆಡಿಎಸ್ ರಾಜ್ಯದ ಸುಮಾರು 50ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಮೊದಲ ಇಲ್ಲವೇ ಎರಡನೇ ಸ್ಥಾನದಲ್ಲಿದೆ. ಅದೇ ರೀತಿ, ಕಾಂಗ್ರೆಸ್ ಪಕ್ಷವು 150 ಕ್ಷೇತ್ರಗಳಲ್ಲಿ ಮೊದಲ ಇಲ್ಲವೇ ಎರಡನೆ ಸ್ಥಾನದಲ್ಲಿರುವುದನ್ನು ಗಮನಿಸಬೇಕು. ಇಷ್ಟು ಮಾತ್ರವಲ್ಲ, ಕೆಲ ಎಡ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಪಕ್ಷಗಳು ಹಾಗೂ ಪಕ್ಷೇತರರು 4–5 ಕ್ಷೇತ್ರಗಳಲ್ಲಿ ಮೊದಲ ಇಲ್ಲವೇ ಎರಡನೆ ಸ್ಥಾನ ಪಡೆದಿವೆ. ಹೀಗಾಗಿ, ಇದನ್ನೆಲ್ಲಾ ಗಮನಿಸಿದಲ್ಲಿ ಬಿಜೆಪಿಯನ್ನು ಸೋಲಿಸಲು ರಾಜ್ಯದ ಮತದಾರರು ರಾಜ್ಯದ ಒಂದೊಂದು ಕ್ಷೇತ್ರದಲ್ಲೂ ಒಂದೊಂದು ಪಕ್ಷಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ.

ಆ ಕಾರಣದಿಂದಲೇ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಪ್ರತಿಯೊಂದು ಕ್ಷೇತ್ರದಲ್ಲೂ ಬಿಜೆಪಿಯನ್ನು ಸೋಲಿಸಬಲ್ಲ ಜಾತ್ಯತೀತ ಪಕ್ಷಕ್ಕೆ, ಇಲ್ಲವೇ ಜಾತ್ಯತೀತ ಅಭ್ಯರ್ಥಿಗಳಿಗೆ ಮತ ನೀಡಿ ಗೆಲ್ಲಿಸುವಂತೆ ಬಹಳ ಸರಿಯಾಗಿಯೇ ನಿರ್ಧರಿಸಿದೆ.

ಎಡ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಪಕ್ಷಗಳಿಗೆ ಪ್ರಾತಿನಿಧ್ಯ ಜನ ಧ್ವನಿಯ ಅಗತ್ಯವಾಗಿದೆ.

ವಿಧಾನಸಭೆಯಲ್ಲಿ ಕಾಂಗ್ರೆಸ್ ಹಾಗು ಜೆಡಿಎಸ್ ಪಕ್ಷಗಳು ಗಣನೀಯ ಪ್ರಾತಿನಿಧ್ಯ ಹೊಂದಿದ್ದರೂ ಮತ್ತು ದೊಡ್ಡ ಪ್ರಮಾಣದ ಮತದಾರರ ಬೆಂಬಲ ಹೊಂದಿದ್ದರೂ, ತಮ್ಮ ಈ ಎರಡು ಬಲಗಳನ್ನು ಉಪಯೋಗಿಸಿ ರಾಜ್ಯವನ್ನು ಕಾರ್ಪೋರೇಟ್ ಲೂಟಿಗೆ ತೆರೆಯುವುದರಿಂದ ತಡೆಯಲು ಸಾಧ್ಯವಾಗಲಿಲ್ಲವೆಂಬುದನ್ನು ಗಮನಿಸಬೇಕು. ಅದೇ ರೀತಿ ಸೌಹಾರ್ದತೆಯ ಮೇಲಿನ ಧಾಳಿಗಳನ್ನು ಹಿಮ್ಮೆಟ್ಟಿಸಲು ಬಳಸಲಿಲ್ಲ. ಇದು ಅವುಗಳು ಅನುಸರಿಸುವ ಆರ್ಥಿಕ ನೀತಿಗಳು ಮತ್ತು ಬಿಜೆಪಿಯ ಆರ್ಥಿಕ ನೀತಿಗಳು ಒಂದೇ ಆಗಿವೆ ಎಂಬುದನ್ನು ಗಮನಿಸಬೇಕಾಗಿದೆ. ಹೀಗಾಗಿಯೇ ಜನವಿರೋಧಿ ಲೂಟಿಕೋರ ಆರ್ಥಿಕ ನೀತಿಗಳನ್ನು ಹಿಮ್ಮೆಟ್ಟಿಸಲು ಮುಂದಾಗಲಿಲ್ಲವೆಂಬುದನ್ನು ಗಮನಿಸಬೇಕು.

ಈ ಹಿನ್ನೆಲೆಯಲ್ಲಿ ರಾಜ್ಯವನ್ನು ಕಾರ್ಪೋರೇಟ್ ಕಂಪನಿಗಳ ಲೂಟಿಕೋರತನದಿಂದ ರಕ್ಷಿಸಲು ಎಲ್ಲ ದುಡಿಯುವ ಜನರು ಮತ್ತು ಎಡ ಮತ್ತು ಜಾತ್ಯತೀತ, ಪ್ರಜಾಸತ್ತಾತ್ಮಕ ಶಕ್ತಿಗಳು ತಮ್ಮ ಬಲವನ್ನು ವಿಸ್ತರಿಸಿಕೊಂಡು, ಒಗ್ಗೂಡಿ ಹೋರಾಟಗಳನ್ನು ಬಲಗೊಳಿಸುವುದು ಅಗತ್ಯವಿದೆ.

ಈ ಚುನಾವಣೆಯಲ್ಲಿ ಬಿಜೆಪಿಯನ್ನು ನಿರ್ಣಾಯಕವಾಗಿ ಸೋಲಿಸಲು ಕೆಲಸ ಮಾಡಿದರೆ ಮಾತ್ರ ಸಾಲದು, ಮುಂಬರುವ ದಿನಗಳಲ್ಲಿ ಲೂಟಿಕೋರ ಆರ್ಥಿಕ ನೀತಿಗಳನ್ನು ಹಿಮ್ಮೆಟ್ಟಿಸಲು ಹಾಗೂ ರಾಜ್ಯದ ಸೌಹಾರ್ದತೆಯನ್ನು ಬಲಗೊಳಿಸಲು, ಜನತೆ ಸಂಘಟಿತರಾಗಿ ಎಡ ಮತ್ತು ಜಾತ್ಯತೀತ, ಪ್ರಜಾಸತ್ತಾತ್ಮಕ ಶಕ್ತಿಗಳ ಜೊತೆ ಸೇರಿ ಚಳುವಳಿಗಳನ್ನು ಉಧೃತಗೊಳಿಸಲು ಕ್ರಮವಹಿಸಬೇಕಾಗಿದೆ ಎಂದು ರಾಜ್ಯದ ಜನತೆಗೆ ಮನವಿ ಮಾಡಿದೆ.

ಅದು ಮಾತ್ರವೇ ಅಲ್ಲಾ, ವಿಧಾನ ಸಭೆಯಲ್ಲಿ ಜನ ಧ್ವನಿ ಮೊಳಗುವುದು ಕೂಡಾ ಅಗತ್ಯವಿದೆ. ಅದಕ್ಕಾಗಿ ರಾಜ್ಯದ ಕೆಲವು ಕ್ಷೇತ್ರಗಳಲ್ಲಾದರೂ ಎಡ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಪಕ್ಷಗಳ ಅಭ್ಯರ್ಥಿಗಳಿಗೆ ಪ್ರಾತಿನಿಧ್ಯ ನೀಡುವುದು ರಾಜ್ಯದ ಜನತೆಯ ಮೇಲಿನ ಹೊಣೆಗಾರಿಕೆಯಾಗಿದೆ.

ಆ ರೀತಿಯ ಪ್ರಾತಿನಿದ್ಯವು ಒಂದೆಡೆ ವಿಧಾನಸಭೆಯ ಕಣದಲ್ಲಿಯೇ ಜನಧ್ವನಿಯನ್ನು ಮೊಳಗಿಸಲು ಮತ್ತು ಜನವಿರೋಧಿ ನೀತಿಗಳ ವಿರುದ್ದ ಪ್ರತಿರೋಧ ಒಡ್ಡಲು ಕಾರಣವಾದರೇ, ಮತ್ತೊಂದೆಡೆ ವಿಧಾನ ಸಭೆಯಾಚೆ ನಡೆಯುವ ಚಳುವಳಿಗಳ ಬೆಳವಣಿಗೆಗೆ, ವಿಸ್ತರಣೆಗೆ ಅದು ಶಕ್ತಿಯನ್ನು ತುಂಬಲಿದೆ. ರಾಜ್ಯದ ಎಲ್ಲ ಮತದಾರ ಬಂಧುಗಳು, ಪ್ರಗತಿಪರರು, ಸೌಹಾರ್ದತೆ ಬಯಸುವವರು ಈ ದಿಶೆಯಲ್ಲಿ ಕ್ರಮವಹಿಸುವುದು ಅನಿವಾರ್ಯ ಅಗತ್ಯವಾಗಿದೆ.

ಪಶ್ಚಿಮ ಏಶ್ಯಾದಲ್ಲಿ ಶಾಂತಿ, ರಾಜಿಯ ಗಾಳಿ ಬೀಸುತ್ತಿದೆ

ಸೌದಿ ಅರೇಬಿಯ ಮತ್ತು ಇರಾನ್ ನಡುವೆ ರಾಜಿ ಮಾತುಕತೆ ನಡೆದು ಒಪ್ಪಂದವಾದ ಬೆನ್ನಲ್ಲೇ, ಪಶ್ಚಿಮ ಏಶ್ಯಾದಲ್ಲಿ ರಾಜಿ ಮಾತುಕತೆಯ ಟ್ರೆಂಡ್ ಹಬ್ಬುತ್ತಿದೆ. ಬಿಗುಮಾನ, ಸಂಘರ್ಷ, ಹಗೆಯ ಬದಲು ಈ ಪ್ರದೇಶದ ನಾಯಕರು ಪರಸ್ಪರ ರಾಜಿ ಮಾತುಕತೆಗೆ ಭೇಟಿ ನೀಡುತ್ತಿದ್ದಾರೆ. ಈಗಿನ ಸಂಘರ್ಷಗಳ ತಾತ್ಕಾಲಿಕ ಶಾಶ್ವತ ನಿಲುಗಡೆ ಕುರಿತು ಒಪ್ಪಂದಗಳತ್ತ ಸಾಗುತ್ತಿದ್ದಾರೆ. ಒಂದು ತಿಂಗಳಲ್ಲಿ ಪಶ್ಚಿಮ ಏಶ್ಯಾದ ಚಿತ್ರಣ ಬದಲಾಗಿ ಬಿಟ್ಟಿದೆ. ಇದರ ಜತೆಗೆ ಸೌದಿ ಮತ್ತು ಇರಾನ್ ವಿರುದ್ಧ ಪಕ್ಷಗಳಲ್ಲಿದ್ದ ಯೆಮೆನ್ ಮತ್ತು ಸಿರಿಯಾ ಸಂಘರ್ಷಗಳು ಕೊನೆಗಾಣುವ ಅವಕಾಶಗಳು ತೆರೆದುಕೊಂಡಿವೆ.

ಜಗದ ಸುತ್ತ

ವಸಂತರಾಜ ಎನ್.ಕೆ

ಯೆಮೆನ್ ಯುದ್ಧ ವಿರಾಮ ಕುರಿತು ಚರ್ಚಿಸಲು ಸೌದಿ ಮತ್ತು ಒಮನ್ ರಾಯಭಾರಿಗಳು ಯೆಮೆನ್ ರಾಜಧಾನಿ ಸನಾ ಗೆ ತೆರಳಿದ್ದಾರೆ. ಅರಬ್ ಲೀಗ್ ನಿಂದ ಹೊರಹಾಕಲ್ಪಟ್ಟು ಏಕಾಂಗಿಯಾಗಿದ್ದ ಸಿರಿಯಾದ ಅಧ್ಯಕ್ಷ ಬಶರ್ ಅಲ್–ಅಸಾದ್ ಒಮನ್ ಮತ್ತು ಯು.ಎ.ಇ ಭೇಟಿ ನೀಡಿದ್ದು ಅವರಿಗೆ ಭವ್ಯ ಸ್ವಾಗತ ಸಿಕ್ಕಿದೆ. ಸಿರಿಯಾದ ವಿದೇಶ ಮಂತ್ರಿ ಮಾತುಕತೆಗೆ ಈಜಿಪ್ಟ್ ಮತ್ತು ಸೌದಿ ಅರೇಬಿಯ ಭೇಟಿ ನೀಡಿದ್ದಾರೆ,

ಯೆಮೆನ್ ನಲ್ಲಿ ಶಾಂತಿ ನಿರ್ಣಾಯಕ

ಯೆಮೆನ್ ನಲ್ಲಿ ಕಳೆದ ಒಂದು ದಶಕದಿಂದ ನಡೆಯುತ್ತಿರುವ ಭೀಕರ ಯುದ್ಧ ನಿಲುಗಡೆ ಮಾಡಿ ಶಾಂತಿ, ಸಾಮಾನ್ಯ ಸ್ಥಿತಿ ತರುವುದು ಇರಾನ್–ಸೌದಿ ಒಪ್ಪಂದದ ಪರಿಣಾಮಕಾರಿತನದ ಒರೆಗಲ್ಲು. ಸಂಘರ್ಷದಲ್ಲಿ ತೊಡಗಿದ್ದ ಸೌದಿ ಮತ್ತು ಯೆಮೆನ್ ನ ಹೌತಿ ಬಂಡಾಯಗಾರರ ನಡುವೆ ಮಾತುಕತೆ ನಡೆದಿದ್ದು ಸ್ಥೂಲ ಒಪ್ಪಂದದ ರೂಪುರೇಷೆಗಳು ಸಿದ್ಧವಾಗಿವೆ. ಕದನ ನಿಲುಗಡೆ, ಬಂಧಿತರ ವಿನಿಮಯ, ಸನಾ ವಿಮಾನ ನಿಲ್ದಾಣವನ್ನು ತೆರೆಯುವದಕ್ಕೆ ಒಪ್ಪಂದವಾಗಿದ್ದು ಜಾರಿ ಆರಂಭವಾಗಿದೆ. 900ಕ್ಕೂ ಹೆಚ್ಚು ಯೆಮೆನಿ ಬಂಧಿತರನ್ನು ಸೌದಿ ಬಿಡುಗಡೆ ಮಾಡಿ ಅವರು ಯೆಮೆನ್ ಸೇರಿದ್ದಾರೆ. ಹೊಡೈದಾ ಬಂದರಿಗೆ ಹೋಗಲು ಮುಕ್ತ ಅವಕಾಶ, ತೈಜ್ ಮೇಲೆ ಹೌತಿ ದಿಗ್ಬಂಧನ ತೆಗೆಯುವುದು, ಸೌದಿ ನಿಯತ್ರಣದಲ್ಲಿರುವ ತೈಲ ಸ್ಥಾವರಗಳ ಆದಾಯದಿಂದ ಯೆಮೆನಿ ಸರಕಾರದ ನೌಕರರರಿಗೆ ವೇತನ ಪಾವತಿ ಮಾಡುವುದು – ಒಪ್ಪಂದದ ಇತರ ಅಂಶಗಳು.

ಹಿಂದೆ ಇವು ಬಹಳ ಅಸಾಧ್ಯ ಶರತ್ತುಗಳು ಎಂದು ಭಾವಿಸಲಾಗಿತ್ತು. ಆದರೆ ಒಬ್ಬ ಹೌತಿ ವಕ್ತಾರ ಹೇಳಿದಂತೆ 'ಇತ್ತೀಚೆಗೆ ಈ ಪ್ರದೇಶದಲ್ಲಿ ಶಾಂತಿಯ ಗಾಳಿ ಬೀಸುತ್ತಿದ್ದು' ಇದು ಸಾಧ್ಯವಾಗಿದೆ. ಮೊದಲ ಸುತ್ತಿನ ಒಪ್ಪಂದದ ಜಾರಿಯಾದ ಮೇಲೆ ಎಲ್ಲ ವಿದೇಶೀ ಪಡೆಗಳ ನಿರ್ಗಮನ, ಯೆಮೆನ್ ಗೆ ಒಂದು ರಾಜಕೀಯ ವ್ಯವಸ್ಥೆ ಮತ್ತು ಒಂದು ಏಕೀಕೃತ ಪ್ರಭುತ್ವದ ಸ್ಥಾಪನೆಯತ್ತ ಗಮನ ಹರಿಸಬಹುದು. ಯೆಮೆನ್ ನಲ್ಲಿ ಸೈದ್ಧಾಂತಿಕ, ರಾಜಕೀಯ, ಬುಡಕಟ್ಟು, ಪಂಥ ಮತ್ತಿತರ ವಿಭಜನೆಗಳಿದ್ದು ಇದು ಸಂಕೀರ್ಣ ವಿಷಯವಾದರೂ, ಅದು ಯೆಮೆನ್ ನ ಆಂತರಿಕ ವಿಷಯವಾಗಿರುತ್ತದೆ. ಈ ನಡುವೆ


ಸಿರಿಯಾ ವಿದೇಶ ಮಂತ್ರಿ ಸೌದಿ ಭೇಟಿ

ಒಪ್ಪಂದದ ಕೆಲ ಅಂಶಗಳಿಗೆ ಒಪ್ಪದಿರಲು ಯು.ಎಸ್ ಸೌದಿ ಗಳ ಮೇಲೆ ಒತ್ತಡ ಹೇರುತ್ತಿದೆಯೆಂದು ಆಪಾದಿಸಿದ್ದಾರೆ. ಯೆಮೆನ್ ಯುದ್ಧದಲ್ಲಿ ಯು.ಎಸ್ ಸೌದಿ ಅರೇಬಿಯ ಕ್ಕೆ ತಾಂತ್ರಿಕ ನೆರವು ಮತ್ತು ಶಸ್ತ್ರಾಸ್ತ್ರ ಒದಗಿಸುತ್ತಿದ್ದು, ಈ ಯುದ್ಧ ಮುಂದುವರೆಯುವುದು ಯು.ಎಸ್ ಗೆ ಬೇಕಾಗಿದೆ.

ಸಿರಿಯಾ ಅರಬ್ ಸಮುದಾಯಕ್ಕೆ ಮತ್ತೆ ಸೇರ್ಪಡೆ

ಟರ್ಕಿ ಮತ್ತು ಸಿರಿಯಾದಲ್ಲಿ ಫೆಬ್ರುವರಿಯಲ್ಲಿ ಸಂಭವಿಸಿದ ಭಾರೀ ಭೂಕಂಪಕ್ಕೆ ಮಾನವೀಯ ಸಹಾಯದ ಭಾಗವಾಗಿ ಯು.ಎ.ಇ., ಜೋರ್ಡಾನ್, ಲೆಬನಾನ್ ಇತ್ಯಾದಿ ಅರಬ್ ದೇಶಗಳು ಸಿರಿಯಾ ಸರಕಾರದ ಜತೆ ಸಂಪರ್ಕ ಆರಂಭಿಸಿದವು. ಸೌದಿ–ಇರಾನ್ ಒಪ್ಪಂದದ ನಂತರ ಇದು ವೇಗವಾಗಿ ಮುಂದುವರೆಯಿತು. ಸಿರಿಯಾ ನಾಯಕ ಅಸಾದ್ ಒಮನ್ ಗೆ ಭೇಟಿಯಿತ್ತರು.

ಸೌದಿ–ಇರಾನ್ ಒಪ್ಪಂದದ ನಂತರ ಅಸಾದ್ ರಶ್ಯಾ ಮತ್ತು ಯು.ಎ.ಇ ಗೆ ಭೇಟಿಯಿತ್ತರು. ಅಸಾದ್ ಅವರನ್ನು ಸ್ವಾಗತಿಸುತ್ತಾ ಯು.ಎ.ಇ ಅಧ್ಯಕ್ಷ ರು 'ಸಿರಿಯಾ ಮತ್ತೆ ಅರಬ್ ಸಮುದಾಯಕ್ಕೆ ಸೇರ್ಪಡೆಯಾಗುವ ಕಾಲ ಬಂದಿದೆ'ಯೆಂದರು. ಸಿರಿಯಾದ ವಿದೇಶ ಮಂತ್ರಿ ಸೌದಿ ಮತ್ತು ಈಜಿಪ್ಟ್ ಗೆ ಭೇಟಿಯಿತ್ತರು. ಮೇ ನಲ್ಲಿ ರಿಯಾದ್ ನಲ್ಲಿ ನಡೆಯುವ ಅರಬ್ ಶೃಂಗಸಭೆಯಲ್ಲಿ ಸಿರಿಯಾ ಪಾಲುಗೊಳ್ಳಲಿದ್ದು ಸಿರಿಯಾದ ರಾಜಕೀಯ 'ಪುನರ್ವಸತಿ' ಪೂರ್ಣಗೊಳ್ಳಲಿದೆ.

ಸಿರಿಯಾ ಮತ್ತು ಟರ್ಕಿಗಳ ನಡುವೆ ಸಹ ರಾಜಿ ಮಾಡಿಸಲು ರಶ್ಯಾ ಪ್ರಯತ್ನ ನಡೆಸಿದೆ. ಉತ್ತರ ಸಿರಿಯಾದಿಂದ ಟರ್ಕಿ ಪಡೆಗಳು


ಯೆಮೆನ್–ಸೌದಿ ಯುದ್ಧ ಕೈದಿಗಳ ವಿನಿಮಯ

ಪೂರ್ಣವಾಗಿ ಹಿಂತಿರುಗಬೇಕೆಂದು ಸಿರಿಯಾ ಒತ್ತಾಯಿಸುತ್ತಿದ್ದು ಟರ್ಕಿ ಇದಕ್ಕೆ ಒಪ್ಪುತ್ತಿಲ್ಲ. ಆದರೆ ಮೇ ನಲ್ಲಿ ನಡೆಯುವ ಟರ್ಕಿ ಚುನಾವಣೆಗಳ ನಂತರ ಮಾತುಕತೆ ಮುಂದುವರೆದು ಒಪ್ಪಂದ ಸಾಧ್ಯವಾಗಬಹುದು.

ಪಶ್ಚಿಮ ಏಶ್ಯಾದಲ್ಲಿ ಮೂಡುತ್ತಿರುವ ಹೊಸ ಪ್ರಾದೇಶಿಕ ವ್ಯವಸ್ಥೆ

ಪಶ್ಚಿಮ ಏಶ್ಯಾದಲ್ಲಿ ಸಂಘರ್ಷಗಳನ್ನು ಕೊನೆಗೊಳಿಸಿ ಶಾಂತಿ ಸ್ಥಾಪನೆ, ಮತ್ತು ರಾಜಿ ಮಾತುಕತೆಗಳ ಗಾಳಿ ಬೀಸುತ್ತಿರುವುದನ್ನು ಯು.ಎಸ್ ಮತ್ತು ಅದರ ಪ್ರಾದೇಶಿಕ ಪೋಲಿಸ್ ಮ್ಯಾನ್ ಇಸ್ರೇಲ್ ಬಹಳ ಆತಂಕದಿಂದ ನೋಡುತ್ತಿದೆ. ಈ ಎಲ್ಲ ಸಂಘರ್ಷಗಳಲ್ಲಿ ಪ್ರತ್ಯಕ್ಷ/ಪರೋಕ್ಷ ಪಾತ್ರವಿದ್ದ ಇವೆರಡಕ್ಕೂ ಶಾಂತಿ, ರಾಜಿ ಮಾತುಕೆಗಳಲ್ಲಿ ಯಾವುದೇ ಪಾತ್ರವಿಲ್ಲದಿರುವುದು ತೀವ್ರ ಆತಂಕ್ಕೆ ಕಾರಣವಾಗಿದೆ.

ಸೌದಿ ಅರೇಬಿಯ ಶಾಂಘಾಯ್ ಸಹಕಾರ ಸಂಘಟನೆಯ 'ಸಂವಾದ ಸಹಚರ' ನಾಗಿದೆ. ಬ್ರಿಕ್ಸ್ ಸದಸ್ಯತ್ವವನ್ನು ಕೇಳಿದೆ. ಯು.ಎಸ್ ನಿಂದ ಶಸ್ತ್ರಾಸ್ತ್ರ ಖರೀದಿ ಮುಂದಯವರೆಸುತ್ತಿರುವಾಗಲೇ, ಚೀನಾದಿಂದ ಕ್ಷಿಪಣಿ ಖರೀದಿ ಆರಂಭಿಸಿದೆ. ಚೀನೀ ತಂತ್ರಜ್ಞಾನದ ನೆರವಿನೊಂದಿಗೆ ತನ್ನದೇ ಕ್ಷಿಪಣಿ ತಯಾರಿಯನ್ನೂ ಆರಂಭಿಸಲಿದೆ. ಸೌದಿ ಮತ್ತು ರಶ್ಯಾ ಒಪೆಕ್+ ತೈಲ ಕೂಟದಲ್ಲಿ ಈಗಾಗಲೇ ಸಹಕರಿಸುತ್ತಿವೆ.

ರಶ್ಯಾ ಮತ್ತು ಚೀನಾ ಎರಡರೊಂದಿಗೂ ಇರಾನ್ ರಕ್ಷಣೆ, ಇಂಧನ, ಆರ್ಥಿಕ, ಸಾರಿಗೆಯ ಸಂಭಂಧಗಳನ್ನು ಹೊಂದಿದೆ. ಮಾರ್ಚ್ ನಲ್ಲಿ ಮೂರೂ ದೇಶಗಳು ಒಂದು ಜಂಟಿ ನೌಕಾ ಕವಾಯಿತು ನಡೆಸಿದವು. ಚೀನಾದ 'ಬೆಲ್ಟ್ ಅಂಡ್ ರೋಡ್ ಇನಿಶಿಯೇಟಿವ್' ನ ಕೇಂದ್ರ ಸ್ಥಾನದಲ್ಲಿದೆ. ಮಾಸ್ಕೋದಿಂದ ಭಾರತದ ಪಶ್ಚಿಮ ಕರಾವಳಿಯ ವರೆಗಿನ 7500 ಕಿ ಮಿ ಉದ್ದದ ಅಂತರರಾಷ್ಟ್ರೀಯ ಉತ್ತರ–ದಕ್ಷಿಣ ಸಾರಿಗೆ ಕಾರಿಡಾರ್ ನಲ್ಲಿರುವ ಕೊರತೆಗಳನ್ನು ತುಂಬುತ್ತಿದೆ.

ಇವೆಲ್ಲ ಬೆಳವಣಿಗೆಗಳು ಒಂದು ಹೊಸ ಸಹಕಾರಿ ಪ್ರಾದೇಶಿಕ ವ್ಯವಸ್ಥೆ ರೂಪಿಸುವತ್ತ ಸಾಗುತ್ತಿವೆ. ಯಾವುದೇ ದೇಶ ಇಡೀ ಪ್ರದೇಶದ ಹಿರಿಯಣ್ಣನಂತೆ ವರ್ತಿಸದೆ ಅಲ್ಲಿನ ಎಲ್ಲ ದೇಶಗಳ ಜತೆ ಪರಸ್ಪರ ಸಹಕಾರ, ಮತ್ತು ಪ್ರದೇಶದ ಹೊರಗೆ ಸಹ ಯಾವುದೇ ಶಕ್ತಿ ರಾಷ್ಟ್ರಗಳ ಅಡಿಯಾಳು ಅಥವಾ ಏಜೆಂಟ್ ಆಗದೆ ತನ್ನ ಹಿತಾಸಕ್ತಿಗೆ ತಕ್ಕಾಗಿ ಅವುಗಳಂತೆ ವ್ಯವಹರಿಸುವ ಸಹಕಾರ ವ್ಯವಸ್ಥೆಯತ್ತ ಸಾಗುತ್ತಿರುವುದು ಸಕಾರಾತ್ಮಕ ಬೆಳವಣಿಗೆ. ಈ ಟ್ರೆಂಡ್ ಯುರೇಶ್ಯಾ ವನ್ನು ಆವರಿಸುವ ಸೂಚನೆಗಳೂ ಇವೆ.

ಒಪೆಕ್ ಪ್ಲಸ್ ದೇಶಗಳ ತೈಲ ಉತ್ಪಾದನೆ ಕಡಿತ......

ಪುಟ 13 ರಿಂದ

ವ್ಯಾಪಕವಾಗುತ್ತದೆ. ಆದರೆ ಒಟ್ಟು ಉತ್ಪತ್ತಿಯಲ್ಲಿ ತೈಲೇತರ ಕಚ್ಚಾ ವಸ್ತುಗಳು ಮತ್ತು ಆಹಾರ ಉತ್ಪಾದಕರ ಪಾಲು ಈಗಾಗಲೇ ಕಡಿಮೆಯಿರುವುದರಿಂದ ಆರ್ಥಿಕ ಹಿಂಜರಿತದ ಹೊರೆಯನ್ನು ವೇತನ ಪಡೆಯುವವರೇ ಹೊರಬೇಕಾಗುತ್ತದೆ. ಇಲ್ಲಿ ಏಳುವ ಪ್ರಶ್ನೆಯೆಂದರೆ, ಬಂಡವಾಳಶಾಹಿ ಜಗತ್ತಿನ, ಅದರಲ್ಲೂ ವಿಶೇಷವಾಗಿ ಮುಂದುವರಿದ ಬಂಡವಾಳಶಾಹಿ ದೇಶಗಳ, ದುಡಿಯುವ ವರ್ಗವು ಈ ಹಿಂಜರಿತವನ್ನು ಉಲ್ಬಣಗೊಳ್ಳಲು ಬಿಡುತ್ತದೆಯೇ? ಎಂಬುದು. ದುಡಿಯುವವರು ಆರ್ಥಿಕ ಹಿಂಜರಿತದ ಹೊರೆಯನ್ನು ಹೊರಲು ಎಷ್ಟು ಬಲವಾಗಿ ನಿರಾಕರಿಸುತ್ತಾರೋ ಅಷ್ಟರಮಟ್ಟಿಗೆ, ಹಣದುಬ್ಬರಕ್ಕೆ ಬಂಡವಾಳಶಾಹಿಗಳ ರಾಮಬಾಣವೆನಿಸಿದ ಆರ್ಥಿಕ ಹಿಂಜರಿತವು ಇನ್ನಷ್ಟು ದೊಡ್ಡದಾಗಿರಬೇಕಾಗುತ್ತದೆ.

ಈ ಪರಿಸ್ಥಿತಿಯಲ್ಲಿ ದುಡಿಯುವ ವರ್ಗದ ಪ್ರತಿರೋಧವು ಕೇವಲ ನಿಜವೇತನ ಕಡಿತದ ಸಮಸ್ಯೆಗಷ್ಟೇ ಸೀಮಿತಗೊಳ್ಳುವುದಿಲ್ಲ. ಹೆಚ್ಚುತ್ತಾ ಹೋಗುವ ನಿರುದ್ಯೋಗದ ಸಮಸ್ಯೆಯನ್ನೂ ಅದು ಕೈಗೆತ್ತಿಕೊಳ್ಳುತ್ತದೆ. ಆಳಗೊಳ್ಳುತ್ತಾ ಹೋಗುವ ಆರ್ಥಿಕ ಹಿಂಜರಿತವು ಕಾರ್ಮಿಕ ವರ್ಗವನ್ನು ಗಮನಾರ್ಹ ಪ್ರತಿರೋಧಗಳಲ್ಲಿ ತೊಡಗುವಂತೆ ಪ್ರಚೋದಿಸುತ್ತದೆ. ಮುಷ್ಕರಗಳ ಅಲೆಯಿಂದ ಯುರೋಪ್ ಈಗಾಗಲೇ ತತ್ತರಿಸಿದೆ. ವಾಸ್ತವವಾಗಿ ಯಾವ ಪ್ರಮುಖ ಯುರೋಪಿಯನ್ ದೇಶವೂ ಪ್ರಸ್ತುತದಲ್ಲಿ ಮುಷ್ಕರ–ಹೋರಾಟಗಳಿಂದ ಮುಕ್ತವಾಗಿಲ್ಲ. ಆರ್ಥಿಕ ಹಿಂಜರಿತವು ತೀವ್ರಗೊಂಡರೆ, ಹಣದುಬ್ಬರದ ಮತ್ತು ನಿರುದ್ಯೋಗದ ಇಕ್ಕಳದ ಹಿಡಿತಕ್ಕೆ ಸಿಲುಕಿದ ಕಾರ್ಮಿಕ ವರ್ಗದ ಪ್ರತಿರೋಧವು ಇನ್ನಷ್ಟು ಉಗ್ರವಾಗುತ್ತದೆ.

ಸಮಸ್ಯೆ ಅಷ್ಟೇ ಅಲ್ಲ. ಆರ್ಥಿಕ ಹಿಂಜರಿತವು ತೀವ್ರಗೊಂಡರೆ ಬ್ಯಾಂಕುಗಳು ಮತ್ತಷ್ಟು ಒತ್ತಡಕ್ಕೆ ಒಳಗಾಗುತ್ತವೆ. ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯು ಈಗಾಗಲೇ ಸಾಕಷ್ಟು ಒತ್ತಡವನ್ನು ಅನುಭವಿಸಿದೆ. ಅಮೆರಿಕದ ಎರಡು ಬ್ಯಾಂಕುಗಳು ಮುಳುಗಿವೆ. ತೀವ್ರಗೊಳ್ಳುವ ಆರ್ಥಿಕ ಹಿಂಜರಿತ ಮತ್ತು ಬ್ಯಾಂಕ್–ಸಾಲಗಳು ಸುಸ್ತಿಯಾಗುವುದರೊಂದಿಗೆ, ಪರಿಸ್ಥಿತಿಗಳು ಮತ್ತಷ್ಟು ಗಂಭೀರವಾಗುತ್ತವೆ.

ಈ ಎಲ್ಲ ಅಂಶಗಳೂ ಸೂಚಿಸುವ ಒಂದೇ ಒಂದು ಮುಖ್ಯವಾದ ಸಂಗತಿ ಎಂದರೆ, ಬಂಡವಾಳಶಾಹಿಯ ಸುಗಮ ಕಾರ್ಯನಿರ್ವಹಣೆಯು ಕೆಲವು ಗೊತ್ತುಪಾಡುಗಳನ್ನು ಆಧರಿಸಿದೆ ಎಂಬುದು. ಅವುಗಳಲ್ಲಿ ಯಾವುದೇ ಒಂದು ಗೊತ್ತುಪಾಡಿನ/ಷರತ್ತಿನ ನೆರವೇರಿಕೆಯು ದುರ್ಬಲಗೊಂಡರೆ, ಅದು ಇಡೀ ಬಂಡವಾಳಶಾಹಿ ವ್ಯವಸ್ಥೆಯ ಸ್ಥಿರತೆಗೆ ಗಂಭೀರ ಬೆದರಿಕೆಯನ್ನೊಡ್ಡುವ ಒಂದು ಸರಪಳಿ ಪ್ರತಿಕ್ರಿಯೆ(ಢಿಚಿಟಿ ಡಿಜಚಿಥಿಣುಠಟಿ)ಯನ್ನು ಪ್ರಾರಂಭಿಸುತ್ತದೆ. ವಿಶ್ವ ಅರ್ಥವ್ಯವಸ್ಥೆಯ ಮೇಲೆ ಯುಎಸ್ ನೇತೃತ್ವದ ಮೆಟ್ರೋಪಾಲಿಟನ್ ಸಾಮ್ರಾಜ್ಯಶಾಹಿಯ ಪ್ರಾಬಲ್ಯವು ಇಂತಹ ಷರತ್ತುಗಳಲ್ಲಿ ಒಂದು. ಆದರೆ, ಸಾಮ್ರಾಜ್ಯಶಾಹಿ ಆಧಿಪತ್ಯ ವ್ಯಾಪಕವಾಗಿರುವುದರಿಂದ ಮತ್ತು ಅದರ ವ್ಯಾಪ್ತಿಯನ್ನು ಲಘುವಾಗಿ ಪರಿಗಣಿಸಲಾಗಿರುವುದರಿಂದ, ಹೆಚ್ಚಿನ ವಿಶ್ಲೇಶಕರು ಅದರ ಪ್ರಸ್ತುತತೆಯನ್ನು ಗಮನಿಸುವಲ್ಲಿಯೂ ಸಹ ವಿಫಲರಾಗುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ತನ್ನ ನಿಲುವನ್ನು ಒತ್ತಿ ಹೇಳುವ ಸೌದಿ ಅರೇಬಿಯಾದ ಕ್ರಮವು ಈ ಸಾಮ್ರಾಜ್ಯಶಾಹಿ ಆಧಿಪತ್ಯದಲ್ಲಿ ಒಂದು ಬಿರುಕು ಉಂಟಾಗಿದೆ ಎಂಬುದನ್ನು ಸೂಚಿಸುತ್ತದೆ. ಸೌದಿ ಅರೇಬಿಯಾವು ಇನ್ನು ಮುಂದೆ ಅಮೆರಿಕದ ಬಾಲ ಹಿಡಿಯುವುದಿಲ್ಲ ಎಂಬ ಅಂಶವು ಬಂಡವಾಳಶಾಹಿ ವ್ಯವಸ್ಥೆಯ ಸ್ಥಿರತೆಗೆ ಒಂದು ಗಂಭೀರ ಸ್ವರೂಪದ ಬೆದರಿಕೆಯನ್ನೊಡ್ಡಿದೆ.


ಅಮೆರಿಕಾದಲ್ಲಿ 2008ರಲ್ಲಿ ವಸತಿ ಗುಳ್ಳೆಯ ಕುಸಿತದ ನಂತರ ವಿಶ್ವ ಬಂಡವಾಳಶಾಹಿಯು ಒಂದು ದೀರ್ಘಾವಧಿಯ ಬಿಕ್ಕಟ್ಟಿಗೆ ಸಿಲುಕಿತು. ಈ ಬಿಕ್ಕಟ್ಟನ್ನು ಒಂದು ರೂಪದಲ್ಲಿ ಪರಿಹರಿಸಲು ಮಾಡಿದ ಪ್ರಯತ್ನಗಳು ಮತ್ತೊಂದು ರೂಪದ ಬಿಕ್ಕಟ್ಟಿಗೆ ಕಾರಣವಾದವು. ಇದೇ ಈ ಬಿಕ್ಕಟ್ಟಿನ ಹೆಗ್ಗುರುತು. ಬಿಕ್ಕಟ್ಟಿನ ಮೂಲತಃ ವ್ಯಕ್ತಗೊಂಡದ್ದು ಸ್ಥಗಿತತೆಯ ರೂಪದಲ್ಲಿ. ಅಮೆರಿಕದ ಮಾಜಿ ಖಜಾನೆ ಕಾರ್ಯದರ್ಶಿ ಲಾರೆನ್ಸ್ ಸಮ್ಮರ್ಸ್ ಅವರಂತಹ ಆಡಳಿತ–ಪರ ಅರ್ಥಶಾಸ್ತ್ರಜ್ಞರೂ ಸಹ ಈಗ "ದೀರ್ಘಾವಧಿಯ ಸ್ಥಗಿತತೆ"ಯ ಬಗ್ಗೆ ಮಾತನಾಡಲು ಪ್ರಾರಂಭಿಸಿದ್ದಾರೆ. ಆದರೆ ಅನೇಕಾನೇಕ ವರ್ಷಗಳ ಕಾಲದವರೆಗೆ ಅಸಾಧಾರಣ ಅಗ್ಗದ ಸಾಲವನ್ನು ವ್ಯವಸ್ಥೆಗೆ ಪಂಪ್ ಮಾಡುವ ಮೂಲಕ ಮತ್ತು ಆನಂತರ ಎರಗಿದ ಕೊರೊನಾ ಸಾಂಕ್ರಾಮಿಕದ ಸಂದರ್ಭದಲ್ಲಿ ಕೈಗೊಂಡ ಅಗಾಧ ಪ್ರಮಾಣದ ವಿತ್ತೀಯ ಕೊರತೆಗಳ ಮೂಲಕ ಈ ಸ್ಥಗಿತತೆಯನ್ನು ಕೊನೆಗೊಳಿಸಲು ಮಾಡಿದ ಪ್ರಯತ್ನಗಳು ಪ್ರಸ್ತುತ ಹಣದುಬ್ಬರವನ್ನು ಹುಟ್ಟುಹಾಕಿದವು. ಇಡೀ ವಿಶ್ವದ ಮೇಲೆ ಪಾಶ್ಚಾತ್ಯ ಪ್ರಾಬಲ್ಯವನ್ನು ಉಳಿಸಿಕೊಳ್ಳುವ ಪ್ರಯತ್ನದ ಫಲಶೃತಿಯಾಗಿ ಸಂಭವಿಸಿದ ಉಕ್ರೇನ್ ಯುದ್ಧವು ಈ ಹಣದುಬ್ಬರವನ್ನು ವೃದ್ಧಿಸಿತು. ಈಗ ಈ ಹಣದುಬ್ಬರವನ್ನು ನಿಗ್ರಹಿಸುವ ಪ್ರಯತ್ನವು ವಿಶ್ವದ ಮೇಲಿನ ಪಾಶ್ಚಾತ್ಯ ಪ್ರಾಬಲ್ಯಕ್ಕೆ ಬೆದರಿಕೆಯನ್ನೊಡ್ಡುತ್ತಿದೆ. ಜೊತೆಗೆ ಮೆಟ್ರೋಪಾಲಿಟನ್ ಬಂಡವಾಳವು ತನ್ನ ದೇಶೀಯ ಕಾರ್ಮಿಕ ವರ್ಗದ ಮೇಲೆ ಹೊಂದಿದ ನಿಯಂತ್ರಣಕ್ಕೂ ಬೆದರಿಕೆ ಒಡ್ಡುತ್ತಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ನವ ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯ ಸ್ಥಿರತೆಗೆ ತಳಹದಿಯಾಗಿರುವ ಅಂಶಗಳೇ ಛಿದ್ರಗೊಳ್ಳುತ್ತಿರುವ ಸನ್ನಿವೇಶವನ್ನು ನಾವು ಕಾಣುತ್ತಿದ್ದೇವೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE APRIL 24-30, 2023 Price: Rs. 10/- Date of Publication: 21 APRIL 2023 RNI No. KARKAN /2006/17926 Posted on 25-04-2023
"REGISTERD" Postal Reg. No. RNP/KA/BGS/2078/2019-21 Posted at B G PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

ಕರ್ನಾಟಕ ಶಾಸಕರು ಭಾರತದ ಅತಿ ಶ್ರೀಮಂತ ಶಾಸಕರು

ನವ ಉದಾರವಾದ ನೀತಿಗಳು ಒಂದೆಡೆ ಬಹುಸಂಖ್ಯೆಯ ಜನ ವಿಭಾಗಗಳನ್ನು ತೀವ್ರ ಸಂಕಷ್ಟ, ಬಡತನದೆಡೆಗೆ ದೂಡುತ್ತಿವೆ. ಇನ್ನೊಂದೆಡೆ, ಕೆಲವೇ ಕೆಲವು ಜನ ವಿಭಾಗಗಳು ಅತಿ ಶ್ರೀಮಂತರಾಗುತ್ತಿದ್ದಾರೆ. ತೀವ್ರ ಅಸಮಾನತೆಯನ್ನು ಈ ನೀತಿಗಳು ಸೃಷ್ಟಿ ಮಾಡಿದ್ದು, ದಿನೇ ದಿನೇ ಈ ಅಂತರ ಅಪಾಯಕಾರಿ ಪ್ರಮಾಣದಲ್ಲಿ ಏರುತ್ತಿದೆ.


Chart 1 | The chart shows the State-wise average assets of an MLA in ₹ crore



ಮುಂದಿನ ತಿಂಗಳು ಚುನಾವಣೆ ಎದುರಿಸಲಿರುವ ಕರ್ನಾಟಕ ರಾಜ್ಯ ವಿಧಾನಸಭೆಯಲ್ಲಿ ಶ್ರೀಮಂತ ಶಾಸಕರ ಸಂಖ್ಯೆ ಅಪಾರವಾಗಿದೆ. ಭಾರತದ ಅತಿ ಶ್ರೀಮಂತ ಶಾಸಕರುಗಳಲ್ಲಿ ಬಹುತೇಕರು ಕರ್ನಾಟಕದಲ್ಲಿದ್ದಾರೆ ಎಂಬ ಅಂಕಿ ಅಂಶಗಳನ್ನು 'ದಿ ಹಿಂದೂ' ಪತ್ರಿಕೆ ಮುದ್ರಿಸಿದೆ. ಸರಾಸರಿಯಾಗಿ ಕರ್ನಾಟಕದ ಓರ್ವ ಶಾಸಕ ಸುಮಾರು ರೂ. 34.6 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದು, ಎಲ್ಲಾ ರಾಜ್ಯಗಳಿಗಿಂತ ಇದು ಅತ್ಯಂತ ಹೆಚ್ಚಿನ ಪ್ರಮಾಣದ್ದಾಗಿದೆ. ಆಂಧ್ರ ಪ್ರದೇಶದ ಶಾಸಕರು ಸರಾಸರಿ ರೂ 27.9 ಕೋಟಿ ಆಸ್ತಿ ಹೊಂದುವ ಮೂಲಕ ಎರಡನೆಯ ಸ್ಥಾನದಲ್ಲಿದ್ದಾರೆ. ಸರಾಸರಿ ರೂ. 22.4 ಕೋಟಿ ಆಸ್ತಿ ಹೊಂದುವ ಮೂಲಕ ಮಹಾರಾಷ್ಟ್ರ ಶಾಸಕರು ಮೂರನೇ ಸ್ಥಾನದಲ್ಲಿದ್ದಾರೆ. ಪ್ರಜಾಸತ್ತಾತ್ಮಕ ಸುಧಾರಣೆಗಳ ಒಕ್ಕೂಟವು ಶಾಸಕರ ಕುರಿತು ಹೊರತಂದಿರುವ ಹಣಕಾಸು ವರದಿಯ ಆಧಾರದ ಮೇಲೆ ಶರತ್ತುಗಳನ್ನು ಅಂಗೀಕರಿಸಲಾಗುತ್ತದೆ. ಈ ದತ್ತಾಂಶವು ಪ್ರತಿ ರಾಜ್ಯದಲ್ಲಿ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಚುನಾಯಿತರಾದ ಶಾಸಕರುಗಳನ್ನು ಒಳಗೊಂಡಿದೆಯೇ ಹೊರತು, ಹಾಲಿ ಇರುವ ಶಾಸಕರುಗಳನ್ನಲ್ಲ.

ಲೇಖನದ ಜೊತೆ ನೀಡಲಾದ ಚಾರ್ಟ್ ಒಂದರಲ್ಲಿ ಶಾಸಕರುಗಳ ಸರಾಸರಿ ಆಸ್ತಿಯನ್ನು ರಾಜ್ಯಾವಾರು ನೀಡಲಾಗಿದೆ. (ಕೋಟಿ ರೂ. ಗಳಲ್ಲಿ). ಆಸ್ತಿ ಲೆಕ್ಕದಲ್ಲಿ ದಕ್ಷಿಣ ಮತ್ತು ಪಶ್ಚಿಮ ಪ್ರದೇಶಗಳಲ್ಲಿ ಬಹುಸಂಖ್ಯೆಯ ಶ್ರೀಮಂತ ಶಾಸಕರುಗಳಿದ್ದಾರೆ. ಇದಕ್ಕೆ ಹೋಲಿಸಿದಲ್ಲಿ ಪೂರ್ವ ರಾಜ್ಯಗಳಲ್ಲಿ ಬಡ ಶಾಸಕರುಗಳಿದ್ದಾರೆ. ಉದಾಹರಣೆಗೆ, ದಕ್ಷಿಣದಲ್ಲಿ ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳ ಶಾಸಕರುಗಳ ಸರಾಸರಿ ಆಸ್ತಿ ರೂ. 25 ಕೋಟಿ ದಾಟಿದೆ. ಪಶ್ಚಿಮದಲ್ಲಿ ಗೋವಾ ಮತ್ತು ಮಹಾರಾಷ್ಟ್ರಗಳಲ್ಲಿ ಶಾಸಕರುಗಳ ಸರಾಸರಿ ಆಸ್ತಿ ರೂ. 20 ಕೋಟಿ ದಾಟಿದೆ. ಆದರೆ, ಪೂರ್ವ ಭಾಗದಲ್ಲಿ, ಒಡಿಸ್ಸಾ, ಪಶ್ಚಿಮ ಬಂಗಾಳ, ಝಾರ್ಕಂಡ್ ಅಥವಾ ಬಿಹಾರದಲ್ಲಿ ಶಾಸಕರುಗಳ ಆಸ್ತಿ ಸರಾಸರಿ ರೂ. 5 ಕೋಟಿ ದಾಟಿಲ್ಲ. ಕೇರಳ ಮತ್ತು ಈಶಾನ್ಯ ರಾಜ್ಯಗಳಾದ ತ್ರಿಪುರ, ಮಣಿಪುರ, ಮಿಜೊರಾಂ ಮತ್ತು ಅಸ್ಸಾಂ ರಾಜ್ಯಗಳಲ್ಲಿಯೂ ಸಹ ಹೆಚ್ಚಿನ ಪ್ರಮಾಣದಲ್ಲಿ ಶ್ರೀಮಂತ ಶಾಸಕರುಗಳಿಲ್ಲ.

Chart 2 | The chart shows the average assets in ₹ crore for various party-State combinations.




ಎರಡನೇ ಚಾರ್ಟ್ ನಲ್ಲಿ ವಿವಿಧ ಪಕ್ಷ–ರಾಜ್ಯಗಳ ಜೋಡಿಗಳು ಹೊಂದಿರುವ ಸರಾಸರಿ ಆಸ್ತಿ ರೂ. ಕೋಟಿಗಳಲ್ಲಿ ವಿವರಗಳಿವೆ. ಒಂದು ರಾಜ್ಯದಲ್ಲಿ ಕನಿಷ್ಠ 30 ಶಾಸಕರುಗಳನ್ನು ಹೊಂದಿರುವ ಪಕ್ಷಗಳನ್ನು ಮಾತ್ರ ಈ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಕರ್ನಾಟಕದ ಕಾಂಗ್ರೆಸ್ ಈ ಪಟ್ಟಿಯಲ್ಲಿ ಎಲ್ಲರಿಗಿಂತಲೂ ಮುಂಚೂಣಿಯಲ್ಲಿದೆ. ಕರ್ನಾಟಕದ ಕಾಂಗ್ರೆಸ್ ಶಾಸಕರು ಸರಾಸರಿಯಾಗಿ ರೂ. 60 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದಾರೆ. ಜೆಡಿ(ಎಸ್) ಶಾಸಕರ ಸರಾಸರಿ ಆಸ್ತಿ ರೂ. 23.5 ಕೋಟಿ ಇದೆ. ಬಿಜೆಪಿ ಶಾಸಕರ ಸರಾಸರಿ ಆಸ್ತಿ ರೂ. 17.4 ಕೋಟಿ ಇದೆ.

ಮಹಾರಾಷ್ಟ್ರದ ಬಿಜೆಪಿ ಶಾಸಕರು ಸರಾಸರಿ ರೂ.27 ಕೋಟಿ ಆಸ್ತಿ ಹೊಂದುವ ಮೂಲಕ ಈ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ. ವೈಎಸ್ ಆರ್ ಕಾಂಗ್ರೆಸ್ ಪಕ್ಷದ ಶಾಸಕರು ಸರಾಸರಿ ರೂ. 22.4 ಕೋಟಿ ಆಸ್ತಿ ಹೊಂದಿ, ಶ್ರೀಮಂತ ಶಾಸಕರುಗಳ ಪಟ್ಟಿಯಲ್ಲಿದ್ದಾರೆ.

ಮೂರನೇ ಚಾರ್ಟ್ ನಲ್ಲಿ ಮರು ಆಯ್ಕೆಯಾದ ಶಾಸಕರ ಸರಾಸರಿ ಆಸ್ತಿಯಲ್ಲಿ ಹಿಂದಿನ ಚುನಾವಣೆಗೆ ಹೋಲಿಸಿದಲ್ಲಿ ಆಗಿರುವ ಬದಲಾವಣೆಯನ್ನು ತೋರಿಸಲಾಗಿದೆ. ಯಾವ ಪಕ್ಷವು ಕನಿಷ್ಠ 5 ಮರುಚುನಾಯಿತರಾದ ಶಾಸಕರನ್ನು ಹೊಂದಿದೆಯೋ, ಆ ಪಕ್ಷಗಳನ್ನು ಮಾತ್ರ ಅಧ್ಯಯನದ ಸಲುವಾಗಿ ತೆಗೆದುಕೊಳ್ಳಲಾಗಿದೆ. ಕರ್ನಾಟಕದಲ್ಲಿ ಮರು ಚುನಾಯಿರಾದ ಕಾಂಗ್ರೆಸ್ ಶಾಸಕರ ಸರಾಸರಿ ಆಸ್ತಿಯು ಹಿಂದಿನ ಚುನಾವಣೆಗೆ ಹೋಲಿಸಿದಲ್ಲಿ ರೂ. 43.5 ಕೋಟಿ ಅಥವಾ ಶೇ. 108ರಷ್ಟು ಹೆಚ್ಚಾಗಿದೆ. ತೆಲುಗು ದೇಶಂ ಪಕ್ಷದ ಮರು ಚುನಾಯಿತ ಶಾಸಕರ ಸರಾಸರಿ ಆಸ್ತಿ ರೂ. 32 ಕೋಟಿ (ಶೇ. 78) ಹೆಚ್ಚಿದೆ. ಅಸ್ಸಾಂ ಬಿಜೆಪಿಯ ಮರು ಚುನಾಯಿತ ಶಾಸಕರ ಸರಾಸರಿ ಆಸ್ತಿ ರೂ. .2.5 ಕೋಟಿ (ಶೇ.124) ಹೆಚ್ಚಿದೆ. ಮಹಾರಾಷ್ಟ್ರದಲ್ಲಿ ಮರು ಚುನಾಯಿತ ಬಿಜೆಪಿ ಶಾಸಕರ ಸರಾಸರಿ ಆಸ್ತಿ ರೂ.12.4 ಕೋಟಿ (ಶೇ.81) ರಷ್ಟು, ಎನ್ ಸಿ ಪಿ ಶಾಸಕರ ಸರಾಸರಿ ಆಸ್ತಿ ರೂ. 10 ಕೋಟಿ (ಶೇ.123) ಮತ್ತು ಶಿವಸೇನಾ ಶಾಸಕರ ಸರಾಸರಿ ಆಸ್ತಿ ರೂ. 10.7 ಕೋಟಿ (ಶೇ.135) ರಷ್ಟು ಹೆಚ್ಚಿದೆ. ಮಹಾರಾಷ್ಟ್ರದ ಬಹುತೇಕ ಪಕ್ಷಗಳ ಮರು ಚುನಾಯಿತ ಶಾಸಕರ ಆಸ್ತಿ ಗಣನೀಯವಾಗಿ ಹೆಚ್ಚಾಗಿರುವುದು ತಿಳಿಯುತ್ತದೆ.

Chart 3 | The change in re-elected MLAs' average assets in the latest election compared to the previous Polls. BJP (●) INC (●)







ಸಿಪಿಐ(ಎಂ) ಹಗರಿ ಬೊಮ್ಮನಹಳ್ಳಿ ತಾಲೂಕಿನಲ್ಲಿ 22 ಏಪ್ರಿಲ್ 2023 ರಂದು ಸಂವಿಧಾನ ರಕ್ಷಿಸಲು, ಕೋಮುವಾದಿ ಹಿಮ್ಮೆಟ್ಟಿಸಲು, ದುಡಿಯುವ ವರ್ಗದ ರಕ್ಷಣೆಗಾಗಿ ರಾಜಕೀಯ ಸಮಾವೇಶ ನಡೆಯಿತು.

ರಾಜ್ಯ ಕಾರ್ಯದರ್ಶಿ ಯು.ಬಸವರಾಜ, ಆರ್.ಎಸ್.ಬಸವರಾಜ, ಬಿ.ಮಾಳಮ್ಮ, ಎಸ್.ಜಗನ್ನಾಥ, ಕೆ.ಗಾಳೆಪ್ಪ, ಅಂಜೀನಮ್ಮ, ಆನಂದ ಬಿ., ಮೈಲಮ್ಮ, ಕೆ. ರಮೇಶ್, ಜಿ.ರಮೇಶ್, ಬಿ.ಜ್ಯೋತಿ ಹಾಗೂ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು. ಹಾಗೂ ಮಸಣ ಕಾರ್ಮಿಕರ ಸಂಘದಿಂದ ಗುರುತಿನ ಚೀಟಿ ವಿತರಣೆ ಮಾಡಲಾಯಿತು.

ಬಳ್ಳಾರಿ ಜಿಲ್ಲೆಯ ಕೊಳಗಲ್ಲು ಡಿವೈಎಫ್ಐ ನ ಗ್ರಾಮ ಘಟಕ ವತಿಯಿಂದ ರಂಜಾನ್ ಸಂಭ್ರಮ ಸಮಯದಲ್ಲಿ ಸೌಹಾರ್ದ ಇಫ್ತಾರ್ ಕೂಟ ಯಶಸ್ವಿಯಾಗಿ ಏರ್ಪಡಿಸಲಾಗಿದೆ.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Editor : **NITYANANDASWAMI**

ರಾಜ್ಯ ಕಾರ್ಯದರ್ಶಿ ಯು.ಬಸವರಾಜ, ಆರ್.ಎಸ್.ಬಸವರಾಜ, ಬಿ.ಮಾಳಮ್ಮ, ಎಸ್.ಜಗನ್ನಾಥ, ಕೆ.ಗಾಳೆಪ್ಪ, ಅಂಜೀನಮ್ಮ, ಆನಂದ ಬಿ., ಮೈಲಮ್ಮ, ಕೆ. ರಮೇಶ್, ಜಿ.ರಮೇಶ್, ಬಿ.ಜ್ಯೋತಿ ಹಾಗೂ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.
ಹಾಗೂ ಮಸಣ ಕಾರ್ಮಿಕರ ಸಂಘ
ದಿಂದ ಗುರುತಿನಿ ಚೀಟಿ ವಿತರಣೆ ಮಾಡಲಾಯಿತು.

ಸಂವಿಧಾನ ರಕ್ಷಿಸಲು, ಕೋಮುವಾದಿ ಹಿಮ್ಮೆಟ್ಟಿಸಲು ದುಡಿಯುವ ವರ್ಗದ ರಕ್ಷಣೆಗಾಗಿ ರಾಜಕೀಯ ಸಮಾವೇಶ